ಶ್ರೀ. ಅಂತಣ್ಣಪ್ಪ ಭೋಂಸಗಿ [illegible]

ಮಂದಾಕಿನಿ

(ನವಂಬರ್ ಮತ್ತು ಡಿಸೆಂಬರ್ ತಿಂಗಳ ಸಂಯುಕ್ತ ಸಂಚಿಕೆ)

೧೯೬೯

ಸಂಪುಟ ೧ ಸಂಚಿಕೆ ೨,೩



ವಾರ್ಷಿಕ ಚಂದಾ (ಐದು ರೂಪಾಯಿ)

ಶಹಪುರ.

ಬಿಡಿ ಸಂಚಿಕೆ ಐವತ್ತು ಪೈಸೆ

ಒಳಪುಟಗಳಲ್ಲಿ

ವಾಚಕರಲ್ಲಿ ಅರಿಕೆ

ದೀಪಾವಳಿ ಹಬ್ಬದ ನಿಮಿತ್ತ ಮುದ್ರಣಾಲಯಕ್ಕೆ ಬಿಡುವು ಇಲ್ಲದ್ದಕ್ಕಾಗಿ ಅ ವಾಗಿ ಮಂದಾಕಿನಿ ಪತ್ರಿಕೆಯ ಅಚ್ಚಿನ ಕಾರ್ಯ ಮಧ್ಯದಲ್ಲಿಯೇ ನಿಂತು ಹೋ ತು. ಕಾರಣ ನವಂಬರ ತಿಂಗಳ ಸಂಚಿಕೆ ಸಕಾಲಕ್ಕೆ ಹೊರಡಿಸಲು ಸಾ ವಾಗಲಿಲ್ಲ ಆದುದರಿಂದ ಈ ಸಂಚಿಕೆಯನ್ನು ನವಂಬರ ಮತ್ತು ಡಿಸೆಂಬರ ತಿಂಗಳ ಸಂಯುಕ್ತ ಸಂಚಿಕೆಯನ್ನಾಗಿ ಹೊರಡಿಸುತ್ತ ದ್ದೇವೆ. ಈ ವಿಲಂಬಕ್ಕಾಗಿ ವಾಚಕರಲ್ಲಿ ಕ್ಷಮೆ ಕೋರುತ್ತೇವೆ.

ಪ್ರಕಾಶಕ

ಸಂಪಾದಕರು

ವಿದ್ವಾನ್ ಜಿ. ಎಂ. ಗುರುಸಿದ್ಧಶಾಸ್ತ್ರೀ
ಕಾವ್ಯತೀರ್ಥ

ಗೌರವ ಸಂಪಾದಕರು

ಶ್ರೀ ಸಗರ ಕೃಷ್ಣಾಚಾರ್ಯ
ಎಂ. ಎ., ಬಿ. ಇಡಿ.

ಸಲಹೆಗಾರರು

ಶ್ರೀ ಸಿದ್ಧಯ್ಯ ಪುರಾಣಿಕ
ಬಿ. ಎ., ಎಲ್ ಎಲ್. ಬಿ.

ಶ್ರೀ ರಾಘವೇಂದ್ರ ಇಟಗಿ ಎಂ. ಎ.

ಶ್ರೀ ನಾಗಪ್ಪ ಶೆಟ್ಟರ ಶಹಪುರ

ಪ್ರಕಾಶಕರು

ಶ್ರೀ ಜಿ. ಎಂ. ಗುರುಬಸವಾರ್ಯ
ಶ್ರೀ ಬಸವರಾಜ ಮುದ್ರಣಾಲಯ
ತಾ. ಶಹಪುರ. ಜಿ. ಕಲಬುರ್ಗಿ.

ಲೇಖಕರಲ್ಲಿ ಸವಿನಯ ಅರಿಕೆ

ಒಳ್ಳೆಯ ಬರಹಗಾರರು ತಮ್ಮ ಲೇಖನ ಕತೆ, ಕವನ, ನಾಟಕ, ಪ್ರಬಂಧ, ಹರಟೆ ಮುಂತಾದುದನ್ನು ಕಾಗದದ ಒಂದೇ ಕಡೆಗೆ ಸ್ಫುಟವೂ ಶುದ್ಧವೂ ಆದ ಅಕ್ಷರಗಳಲ್ಲಿ ಬರೆದು ಕಳಿಸಬೇಕು. ಸ್ವೀಕೃತವಾದವುಗಳನ್ನು ಯಥಾವಕಾಶ ಪ್ರಕಟಿಸಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲು ಅಂಚೆ ಚೀಕಿಟು ಇರಿಸುವುದು ಅಗತ್ಯ.

ಧಾರಾವಾಹಿಯಾಗಿ ಕಾದಂಬರಿಯನ್ನು ಪ್ರಕಟಿಸಲು ಇಚ್ಛಿಸುವವರು ಕಾದಂಬರಿಯ ಪೂರ್ತಿ ಪ್ರತಿಯನ್ನು ಕಳಿಸಬೇಕು. ಸಲಹೆಗಾರರಿಂದ ಅದು ಮನ್ನಣೆ ಪಡೆದರೆ ಮಾತ್ರ ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.


ವ್ಯಕ್ತಿಚಿತ್ರ ಜೀವನಚಿತ್ರ ಚುಟುಕ ಮುಂತಾದವುಗಳಿಗೂ ಪತ್ರಿಕೆಯಲ್ಲಿ ಸ್ಥಾನವಿದೆ. ಕರ್ನಾಟಕದ ಪ್ರತಿಯೊಂದು ಭಾಗದವರೂ ಇದು ತಮ್ಮ ಪತ್ರಿಕೆಯೆಂದೇ ಭಾವಿಸಿ ಅವಶ್ಯ ತಮ್ಮ ಕೃತಿಗಳನ್ನು ಪ್ರಕಟಣೆಗಾಗಿ ಕಳಿಸಬೇಕು. ಹೊರನಾಡ ಕನ್ನಡಿಗರೂ, ಪರದೇಶಗಳಲ್ಲಿದ್ದ ಕನ್ನಡಿಗರೂ ಸಹ ತಮ್ಮ ಸಾಹಿತ್ಯಿಕ ಕೃತಿಗಳೊಂದಿಗೆ ತಮ್ಮ ಅಲ್ಲಿನ ಜೀವನ, ಸಾಹಿತ್ಯ ರಂಗದಲ್ಲಿ ಸಾಧಿಸಿದ ಪ್ರಗತಿ, ಅಲ್ಲಿನ ತಮ್ಮ ಸಮಸ್ಯೆಗಳು ಮುಂತಾದುದನ್ನು ಕುರಿತೂ ಅತ್ಯುತ್ತಮ ಬರೆಹಗಳನ್ನು ಕಳಿಸಿದಲ್ಲಿ ಅವುಗಳನ್ನು ಸಂತೋಷದಿಂದ ಪ್ರಕಟಿಸಲಾಗುವುದು. ಲೇಖಕರು ಇದು ತಮ್ಮ ಪತ್ರಿಕೆಯೆಂದೇ ಭಾವಿಸಿ ಇದರ ಉತ್ಕರ್ಷಕ್ಕಾಗಿ ಸರ್ವವಿಧದಿಂದಲೂ ಪ್ರಯತ್ನಿಸಬೇಕು.

xxxx

ಜಾಹೀರಾತಿನ ಬಗ್ಗೆ ಪತ್ರ ವ್ಯವಹಾರ ಮಾಡುವವರೂ ಚಂದಾ ಹಣ ಮುಂತಾದುದನ್ನು ಕಳಿಸುವವರೂ ಪ್ರಕಾಶಕರ ವಿಳಾಸಕ್ಕೆ ಕಳಿಸಬೇಕು.

ಮಂದಾಕಿನಿ

ಮಾಸಪತ್ರಿಕೆ



ಸಂಪುಟ ೧	ನವಂಬರ ೧೯೬೯	ಸಂಚಿಕೆ ೨

ಮಿಂಚುಹನಿ

★

ಉಸುಕಿನೊಳು ಬೆರೆತ ಸಕ್ಕರೆ
ನಮ್ಮ ತಾಯ್ನಾಡಿನ ಅಕ್ಕರೆ
ಇರವೆಯಂತಿರುವ ಅರಿವು
ಬಂದರೆ ಮಾತ್ರ - ಉಳಿವು

— ಇಟಗಿ ರಾಘವೇಂದ್ರ

ನಾಡ ಒಡೆಯುವುದೆ ?

ಎದ್ದೇಳಿ ಕನ್ನಡಿಗರೆದ್ದೇಳಿ ಬಲುಬೇಗ
ನಿದ್ದೆಗಣ್ಣನು ಕಿತ್ತು ಮುಸುಕ ತೆರೆದು
ಇದ್ದೇನು ಫಲವಿಹುದು ಹದ್ದಿನಾಯುಷ ಹೊತ್ತು ?
ಗುದ್ದಾಡುವುದಕೆಂದು ನಾಡ ಕಟ್ಟಿಹೆವೈ ?

ನಾಡ ಒಡೆಯುವ ಹೊಂಚ ಹಾಕಿಹರು ಹಲಕೆಲರು
ಕಾಡಪಶುವಿಗು ಬರದು ಇಂಥ ಬುದ್ಧಿ ?
ಓಡಿ ಬನ್ನಿರಿ ಬೇಗ, ನಾಡ ಒಡೆಯುವ ಹಾಗೆ
ನೋಡಿಕೊಳ್ಳುವ ಇಂದು- ಮುಂದು ಎಂದೂ !

ವೇದಗಂಬಳಿಹೊದ್ದು ಕೂಡುವುದು ತರವಲ್ಲ
ಸೋದರರ ಕಲ್ಮಷವ ತೊಳೆಯಬನ್ನಿ !
ಮೋದ ಮಂಗಳನಾದ ಧ್ವನಿಸುತಿರಲೆಂದೆಂದು
ಭೇದ ಬುದ್ಧಿಯ ವಿಷವ ತೊಳೆಯ ಬನ್ನಿ.

ನಾಡನುಡಿಗಗ್ರತಾಂಬೂಲವೀಯುವುದಕ್ಕೆ
ನಾಡ ಹಿರಿಯರು ಮುಂದೆ ಬಾರದಂತಿಹರು !
ನಾಡಗುಡಿ ಕಟ್ಟಿದುದು ಅಧಿಕಾರ ತೃಷೆಗಲ್ಲ !
ನಾಡ ಸೇವೆಯ ದೀಕ್ಷೆ ಪಡೆಯಲೆಂದು !

ಕನ್ನಾಡ ಕಟ್ಟುವುದಕೆಂದು ಬನ್ನಿರಿ ಬೇಗ
ಕನ್ನುಡಿಯ ಬೆಳಗುವುದಕೆಂದು ಬಳಿಸಾರಿ
ಸನ್ನುತಾಂಗನ ದಯವು ಎಮ್ಮಮೇಲಿರಲೆಂದು
ಮನ್ನೆಯರೆ ಮುಂಬನ್ನಿ ಜಯವ ಕೋರಿ !

— ನಾಗಪ್ಪ ಕಿಟ್ಟೂರ

ಸಿದ್ಧ ಪುಷ್ಕರಿಣಿ

ಸಗರಾದ್ರಿಯಲ್ಲಿ ಎಣಿಕೆಗೆನಿಲುಕದಷ್ಟು ತೀರ್ಥ ಪುಷ್ಕರಣಿಗಳೂ, ಪವಿತ್ರಸ್ಥಳಗಳೂ ಇವೆ ಯೆಂದು ನಮ್ಮ ಹಿರಿಯರು ಹೇಳುತಿದ್ದರು. ಆ ಮಾತು ಅತಿಶಯೋಕ್ತಿಯೆನಿಸಿದರೂ ಇರುವ ಪವಿತ್ರತಾಣಗಳಿಗೇನು ಕೊರತೆಯಿಲ್ಲ. ಅಂಥವುಗಳಲ್ಲಿ ಸಿದ್ಧ ಪುಷ್ಕರಿಣಿಯೂ ಒಂದು. ಅದರಪೌರಾಣಿಕ ಚರಿತ್ರೆ ಇಲ್ಲಿದೆ.

卐 卐 卐

ಸಗರಾಚಲದ ಶಿರೋಭಾಗದ ಮಂದಾಕಿನಿಯ ಉತ್ತರ ಭಾಗಕ್ಕೆ ಈ ಪುಷ್ಕರಿಣಿ ಯು ಇದೆ. ಇದಕ್ಕೆ ಪೂರ್ವದಲ್ಲಿ '**ಶ್ರೀ ನೃಸಿಂಹತೀರ್ಥ**' ಎನ್ನುತಿದ್ದರು. ಈ ತೀರ್ಥದ ಮೇಲೆ ಒಂದು ಅಶ್ವತ್ಥ ವೃಕ್ಷವು ಇದ್ದಿತು. ಆ ಸಮಯದಲ್ಲಿ "ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣು ರೂಪಿಣೆ, ಅಗ್ರತಃ ಶಿವರೂಪಾಯ ವೃಕ್ಷರಾಜಾಯತೇ ನಮಃ" ಎಂಬ ಮಂತ್ರವನ್ನಂದು ಪ್ರದಕ್ಷಿಣೆಹಾಕಿ ನಮಸ್ಕಾರಮಾಡುವ ಪರಿಪಾಠವಿತ್ತು. ಸಿದ್ಧರೂ, ಮುನಿಪುಂಗವರೂ ಮತ್ತು ಸರ್ವೋತ್ತಮರೂ ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ವೃಕ್ಷರೂಪಿಯಾದ ನಾರಸಿಂಹನನ್ನು ಪೂಜಿಸುತ್ತಿದ್ದರು. ಆ ವೃಕ್ಷದ ಹತ್ತಿರವೇ **ಶ್ರೀ ಲಕ್ಷ್ಮೀನಾರಸಿಂಹನು** ಲಿಂಗಾಕಾರದಲ್ಲಿ ಪ್ರವಿಷ್ಟನಾಗಿ ಭಕ್ತರ ಇಷ್ಟಾರ್ಥಗಳನ್ನು ಪೂರ್ತಿಗೊಳಿಸುತ್ತಿದ್ದನು. ಅಂತೆಯೇ ಅಭೀಷ್ಟವನ್ನೀವ ಪುಷ್ಕರಿಣಿಗೆ 'ಸಿದ್ಧ ಪುಷ್ಕರಿಣಿ' ಎಂದೂ, ಅಭೀಷ್ಟದಾತೃವಾದ ಈಶ್ವರನಿಗೆ ಸಿದ್ಧೇಶ್ವರನೆಂದೂ ನಾಮಾಭಿಧಾನವು ಪ್ರಾಪ್ತವಾಯಿತು. ಈ ತೀರ್ಥದಲ್ಲಿಯೆ ಸಗರರಾಯನ ವಂಶಜರು ಸ್ನಾನಮಾಡಿ ಉತ್ತಮ ಲೋಕವನ್ನು ಹೊಂದಿದರು.

ಯಾವ ಭಕ್ತನು ಇಲ್ಲಿ ಸ್ನಾನ ಪೂಜೆ, ನೈವೇದ್ಯ, ದಾನ–ಧರ್ಮ, ಶ್ರಾದ್ಧ ಮುಂತಾದ ಸತ್ಕರ್ಮವನ್ನೆಸಗುವನೊ, ಅವನ ಇಷ್ಟ ಪೂರ್ತಿಯಾಗುವದು. ಈ ತೀರ್ಥದಲ್ಲಿ ಸ್ನಾನ ಮಾಡುವವರಿಂದ ಭ್ರೂಣಹತ್ಯಾದೋಷ, ಭೂತ–ಪ್ರೇತ ಪೀಡೆ, ಮತ್ತು ಕುಷ್ಟರೋಗ ನಿವಾರಣೆಯಾಗುತ್ತದೆ. ಇಲ್ಲಿ ಆದಿತ್ಯವಾರದಿವಸ ಸ್ನಾನ ಮಾಡುವದರಿಂದ ವಿಶೇಷ ಫಲವು ದೊರೆಯುತ್ತದೆ. ಇಲ್ಲಿ **ಶ್ರೀ ನಾರಸಿಂಹನು** ಸಿದ್ಧರಿಗೂ, ಮುನಿಗಳಿಗೂ ಅಶ್ವತ್ಥವೃಕ್ಷದಲ್ಲಿಯೇ ದರ್ಶನವಿತ್ತು "ನಾನಿಲ್ಲಿ ಲಿಂಗರೂಪದಲ್ಲಿ ವಾಸಮಾಡಿದ್ದೇನೆ ನನ್ನನ್ನು ಅದೇರೂಪದಲ್ಲಿ ಪೂಜಿಸಿ ಸಿದ್ಧಿಯನ್ನು ಹೊಂದಿರಿ" ಎಂದು ನುಡಿದು ಅದೃಶ್ಯನಾಗಿದ್ದಾನೆ.

ಕಲ್ಪಾವಸಾನ ಪರ್ಯಂತ ಈ ತೀರ್ಥದಲ್ಲಿ ದೇವತೆಗಳೂ ಮತ್ತು ಋಷಿಗಳೂ ರವಿವಾರ ದಿವಸ ಇಂದಿಗೂ ಸ್ನಾನ ಮಾಡುತ್ತಾರೆಂದು ಆಖ್ಯಾನದಲ್ಲಿ ಉಲ್ಲೇಖಿಸಲಾಗಿದೆ.

— **ಸಗರ ಕೃಷ್ಣಾಚಾರ್ಯ**

ವಿ ಚಾ ರ ದೀ ಪ್ತಿ

'ನುಡಿದಂತೆ ನಡೆ', ಇದೇ ಜನ್ಮ ಕಡೆ, ಎಂಬುದು ಶರಣರ ಸುವರ್ಣ ಸೂತ್ರ ಗಳಲ್ಲೊಂದು. 'ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ಪ ಲಿಂಗ ಘಟ ಸರ್ಪ' ವೆಂಬುದು ಅಣ್ಣನವರಿತ್ತ ಎಚ್ಚರಿಕೆ.

ಆದರೆ, ಏನೇ ನುಡಿಯಲಿ, ಅದರಂತೆ ನಡೆದು ಬಿಟ್ಟರೆ ಇದೇ ಜನ್ಮ ಕಡೆಯಾಗುವುದೆ ? ಕಳ್ಳನೊಬ್ಬ, 'ನಾನು ದಿನಕ್ಕೊಂದು ಕನ್ನ ಹಾಕುವೆ' ನೆಂದು ನುಡಿದು, ಅದರಂತೆ ನಡೆ ದೂ ತೋರಿಸಿದರೆ ಅವನಿಗೂ ಇದೇ ಜನ್ಮ ಕಡೆಯಾಗುವುದೆ? ಆಗಲಾರದು. ಆದುದ ರಿಂದ ಎಂಥ ನುಡಿ, ಎಂಥ ನಡೆಯೆಂಬುದರ ಇತ್ಯರ್ಥವಾಗಬೇಕು.

ಬಸವಣ್ಣನವರೇ ಬೇರೊಂದೆಡೆಗೆ ಇದರ ಇತ್ಯರ್ಥ ಮಾಡಿದ್ದಾರೆ: "ದಿಟವ ನುಡಿವುದು, ನುಡಿದಂತೆ ನಡೆವುದು. ಹುಸಿಯ ನುಡಿದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ." ಸಟೆಯನ್ನಲ್ಲ, ದಿಟವನ್ನು ನುಡಿಯಬೇಕು, ಅದರಂತೆ ನಡೆ ಯಬೇಕು. ಆಗ ಇದೇ ಜನ್ಮ ಕಡೆಯದಾದೀತು.

ನುಡಿ ನಡೆಗಳಿಗೆ ಭವದ ಬೀಜವನ್ನು ಸುಡುವ ಶಕ್ತಿ ಬರುವುದು ಸತ್ಯದಿಂದಲೇ ಎಂಬುದು ಸಿದ್ಧವಾಯಿತು. ಈಗ ಸತ್ಯವೆಂದರೇನೆಂಬುದರ ನಿಷ್ಕರ್ಷೆಯಾಗಬೇಕು. ಅದು ಆಡಲು ಸುಲಭವಿರುವಷ್ಟು ಅರ್ಥವಿಸಲು ಸುಲಭವಾದುದಲ್ಲ. ಆದಿಯಿಂದಲೂ ಅ ದನ್ನು ಅರಿತುಕೊಳ್ಳಲು ಅವ್ಯಾಹತವಾದ ಅಹರ್ನಿಶ ಪ್ರಯತ್ನ ನಡೆದೇ ಇದೆ. 'ಸತ್ಯಾ ನ್ನಾಸ್ತಿ ಪರೋಧರ್ಮಃ, ಎಂದು ನಮ್ಮ ಪ್ರಾಚೀನ ಋಷಿಗಳೂ ನಂಬಿದ್ದರು' ಯುಗಪುರುಷ ಗಾಂಧೀಜಿಯವರೂ ನಂಬಿ, ಅದರಂತೆ ಆಚರಿಸಿ ಅಮರರಾದರು. ಸತ್ಯಕ್ಕಿಂತ ದೊಡ್ಡ ಧರ್ಮವಿಲ್ಲ ವೆಂಬುದು ಸತ್ಯಸ್ಯ ಸತ್ಯ.

ಆದರೆ ಸತ್ಯವೇನೆಂಬುದನ್ನು ಇತ್ಯರ್ಥಗೊಳಿಸಲು ಹೊರಡುವವರಿಗೆ ಮಂಕು ಕವಿಯುವುದು ಆಶ್ಚರಿಯಲ್ಲ. ವಿಕ್ಟರ್ ಹ್ಯೂಗೋ ಹೇಳಿದ ಕಥೆ ಪ್ರಸಿದ್ಧವಾಗಿಯೇ ಇದೆ. ಸತ್ಯ, ಅಸತ್ಯ ಅಕ್ಕ ತಂಗಿಯರು. ಇಬ್ಬರು ಒಮ್ಮೆ ನದಿಗೆ ಸ್ನಾನಕ್ಕೆ ಹೋದರು. ಬಟ್ಟೆಗಳನ್ನು ಕಳಚಿ ಹೊಳೆಯ ದಂಡೆಯ ಮೇಲಿಟ್ಟು ಹೊಳೆಯಲ್ಲಿ ಜಳಕ ಮಾಡಿದರು. ಬರುವಾಗ ಮರವೆಯಿಂದ ಒಬ್ಬಳು ಇನ್ನೊಬ್ಬಳ ಬಟ್ಟೆ ಧರಿಸಿದಳು. ಹೀಗೆ ವೇಷಾಂತರ ಗೊಂಡು ಮನೆಗೆ ಮರಳಿದರು. ಅಂದಿನಿಂದ ಜನಗಳಿಗೆ ಸತ್ಯವು ಅಸತ್ಯದಂತೆಯೂ, ಅಸತ್ಯವು ಸತ್ಯದಂತೆಯೂ ತೋರುತ್ತ ಬಂದಿವೆ. ಸತ್ಯದ ಮುಖ ಹಿರಣ್ಮಯ ಪಾತ್ರೆ ಯಿಂದ ಮುಚ್ಚಿದೆಯೆಂಬ ಉಪನಿಷದ್ವಾಕ್ಯವೂ ಇದನ್ನೇ ಸೂಚಿಸಿದೆ ಸಾವಿರಾರು ವರ್ಷ ಗಳ ಹಿಂದೆ.

ಹಾಗಾದರೆ ‘ ಸತ್ಯವೆಂದರೇನು ? , ಎಂಬ ಪ್ರಶ್ನೆಗೆ ಉತ್ತರವೇ ಇಲ್ಲವೆ ? ‘ ಇದೆ ಇಲ್ಲ ಎರಡೂ ಉತ್ತರ ಈ ಪ್ರಶ್ನೆಗೆ. ‘ ಸರ್ವಕಾಲಗಳಲ್ಲಿ, ಸರ್ವದೇಶಗಳಲ್ಲಿ, ಸರ್ವರಿಗೂ ಸಮಾನವಾಗಿ ಸಮರ್ಪಕವೆನಿಸುವ ಸತ್ಯಾರ್ಥ ಸಾಧ್ಯವೆ ? , ಎಂದು ಕೇಳುವದಾದರೆ ಇಲ್ಲ , ಎಂಬ ಉತ್ತರವನ್ನೇ ಕೊಡಬೇಕಾದೀತು; ‘ ಸರ್ವಸಮ್ಮತವಾಗಲಿ, ಆಗದಿರಲಿ, ಸರ್ವರೂ ಅನುಸರಿಸಲು ಸಾಧ್ಯವಾಗಬಹುದಾದ ಸತ್ಯದ ಸ್ವರೂಪ ನಿರ್ಣಯ ಸಾಧ್ಯಾವೆ ? , ಎಂದು ಕೇಳುವುದಾದರೆ ‘ ಇದೆ, ಎಂದು ಉತ್ತರ ಹೇಳಬಹುದಾದೀತು.

ಇಂಥದೊಂದು ಸತ್ಯದ ವ್ಯಾಖ್ಯೆ ಮಹಾಭಾರತದಲ್ಲಿ ಮಂಡಿತವಾಗಿದೆ. ‘ ಯದ್ಭೂತ ಹಿತಮತ್ಯಂತಂ ತತ್ ಸಂತ್ಯ, ಎಂಬುದೇ ಅದು. ಯಾವುದರಿಂದ ಭೂತ ಮಾತ್ರರಿಗೆ ಅತ್ಯಂತವಾದ ಹಿತ ದೊರೆಯುವುದೋ ಅದು ಸತ್ಯ ! ಯಾವುದರಿಂದ ಅ ಹಿತ ಉಂಟಾಗುವುದೋ ಅದು ಅಸತ್ಯ. ನಾವು ಆಡುವ ಪ್ರತಿಯೊಂದು ಮಾತನ್ನೂ ಮಾಡುವ ಪ್ರತಿಯೊಂದು ಕಾರ್ಯವನ್ನೂ ಈ ಒರೆಗಲ್ಲಿಗೆ ಹಚ್ಚಿನೋಡಿ ಆಡಿದ್ದಾದರೆ ಮಾಡಿದ್ದಾದರೆ ಈ ಲೋಕದಲ್ಲಿ ಹಿತ ಹೆಚ್ಚಿ ಅಹಿತ ಕಡಮೆಯಾದೀತು.

** — ಸಿದ್ದಯ್ಯ ಪುರಾಣಿಕ

ಗಗನದೀಪ

ನೀ ಬಾನಿನಲ್ಲಿ ಸೂರ್ಯನತ್ತತ್ತ ನಡೆದು
ಕತ್ತಲೆಯ ಕಳೆದು ಬೆಳಕಿನಲಿ ಬೆಳೆದು
ಇತ್ತಿತ್ತ ಸಾರಿ ಬಾರಾ
ಬದುಕ ಬತ್ತಿಯನು ಮುಡಿಸಬಾರಾ
ಓ ನನ್ನ ಒಲುವಿನ ಗಗನ ದೀಪ !
ನೀನೆನ್ನ ಗುಡಿಸಲಲಿ ಮಾರ್ಪೊಳೆದು
ಅರಮನೆಯಲಿ ಮಾರ್ಪಡಿಸ ಬಾರಾ
ಮನದ ಬಾನಿನಲಿ ಹೊಳೆದಾಡು ಬಾರಾ
ಬಯಕೆ ಗಗನದಲಿ ಬೆಳಕ ಚೆಲ್ಲು ಬಾರಾ
ಓ ನನ್ನ ಗೆಲುವಿನ ಗಗನ ದೀಪ ! ॥ ೧ ॥
ಮಬ್ಬಿನ ಮೋಡದ ಹೆಣಗಳ ಮಲಗಿಸಿ
ಜೀವನ ಸಂಗರ ನಡೆದರೆ ಭರದಲಿ
ಧರ್ಮಕೆ ಗೆಲುವಿನ ಮಾಲೆಯ ಹಾಕಿಸಿ
ಕೊಳುಗುಳ ನೆಲವನೆ ಮನವನ ಮಡಿಯನೆ
ಕಳೆಯನು ಕಳೆಯಿಸಿ ಹರಗಿಸಿ ಹೊಲವನು
ಹೊಸಕತೆಯನುನೀ ಬಿತ್ತಿಸಿದೆ
ಮನ ಮನದಲಿ ಬೆಳಕನು ನೀ ಹೊತ್ತಿಸಿದೆ
ಓ ನನ್ನ ಚೆಲುವಿನ ಗಗನ ದೀಪ ! ॥ ೨ ॥
ಈ ಚಣದ ವರೆಗೆ ಜಗವು ಓದುತಿತ್ತು
ಕತ್ತಲೆಯ ಹೊತ್ತಿಗೆಯನು ಬಿಚ್ಚಿ
ಚಂಡಾಮರ್ಕರ ಶಾಸನನು,
ನೀನಿತ್ತಿತ್ತ ಬರುತಿರಲು,
ಕತ್ತಲೆಯಹೊತ್ತಿಗೆಯು
ಮುಚ್ಚಿ ಕೊಂಡಿತು ತನ್ನ ತಾನೆ !
ಆ ಅದೆ ತಾಣದಲಿ ಬರೆಯುಬಾರ,
ಓ ಗಗನ ದೀಪ !
ನಿನ್ನ ಹೊಸ ಇತಿಹಾಸವನ್ನೀ,
ಆ ಬೆಳಕ ನೋಡಿಯಲಿ,
ನಾನದನೆ ಓದೇನು! ನಾನದನೆ ಹಾಡೇನು
ಓ ನನ್ನ ನಲುವಿನ ಗಗನ ದೀಪ ! ॥ ೩ ॥
ಎನ್ನ ಎದೆಯ ಗುಡ್ಡದಲಿ

ಪ್ರೇಮಸೂಕ್ತವನು ಬರೆಯಬಾರಾ
ನಿರ್ಮಲತೆಯನು ಅರಿಸಬಾರಾ
ಎತ್ತರದ ಭಾವಗಳ ಬಿತ್ತರದ ಮನದಲ್ಲಿ
ಪೂರ್ಣತೆಯ ನೀ ತುಂಬು ಬಾರಾ !
ಎಲ್ಲೆಡೆಯೂ ನೀನೇ ನೀನಾಗಿ ತುಂಬಿ ತುಳುಕಿ ತುಂಬಿ ಬಾರಾ !
ನೀನೇ ನಾನಾಗಿ
ನಾನೇ ನೀನಾಗಿ
ಒಂದು ಎರಡಾಗಿ
ಎರಡು ಒಂದಾಗಿ
ಅರವಿಂದವಾಗಿ
ಗೋವಿಂದವಾಗಿ
ಆನಂದವಾಗಿ
ಕೂಡು ಬಾರಾ
ಓ ನನ್ನ ಒಲವು ಗೆಲುವಿನ ಗಗನ ದೀಪ !
ಓ ನನ್ನ ಚೆಲುವು ನಲುವಿನ ಗಗನ ದೀಪ !
ನೆಲ ಮುಗಿಲುಗಳಲಿ ನೀನೇ ನೀನಾಗಿ,
ನಿನ್ನ ಬೆಳಕ ಕಡ್ಡಿಯಲಿ

— ವಸಂತ ಕುಷ್ಟಗಿ

— ನಾಡ ಭಕ್ತಿಯ ಪ್ರಾಣ —

ದೇಶಮಾತೆಯ ದಾಸ್ಯ ಶೃಂಖಲೆ
ಲೇಶಮಾತ್ರವು ಸಹಿಸಲಾರದೆ
ಪ್ರಾಣ ವಿತ್ತಿರಿ ನಾಡಮುಕ್ತಿಗೆ
ಪ್ರಾಣನಾದಿರಿ ನಾಡಭಕ್ತಿಗೆ

— ಎಂ. ಸಿ. ಮಹಿಷಿ

ಶ್ರೀಃ

ಶ್ರೀ ವೇದನಿಧಿ ತೀರ್ಥರು

★

ಶ್ರೀಮದ್ವೇದನಿಧಿತೀರ್ಥರು ಅಸಾಮಾನ್ಯಪಂಡಿತರೂ ಸಾಕ್ಷಾತ್ ವಿರಕ್ತರೂ ಆದ ಯತಿವರ್ಯರಾಗಿದ್ದರು. ಭರತಖಂಡದಾದ್ಯಂತ ತಮ್ಮ ಪಾಂಡಿತ್ಯದ ಕಹಳೆಯನ್ನೂದಿ ಜಯ ಭೇರಿ ಹೊಡೆದರೂ ಎಲೆಯಮರೆಯ ಕಾಯಿ ಯಂತೆಯೇ ಬಾಳಿದರು. ಇವರು ಇದೇ ಶಹಪುರದವರೆಂದೂ, ಸಗರ ಮನೆತನದವರೆಂದೂ ತಿಳಿಸಲು ಹೆಮ್ಮೆಯೆನಿಸುತ್ತದೆ. ಇದೇ ಕಾರ್ತಿಕ ಶುದ್ಧ ದ್ವಾದಶಿ ಇವರ ಪುಣ್ಯದಿನ. ಇಂದಿಗೂ ಪಂಢರಪುರದಲ್ಲಿ ಇವರ ಆರಾಧನಾ ಮಹೋತ್ಸವ ಜರುಗುತ್ತದೆ ಆವರ ದಿವ್ಯಸ್ಮರಣೆಗಾಗಿ ಬರೆದ ಲೇಖನವಿದು

卐

ಶ್ರೀ ಮದ್ಭೀಮಾಭಿಧಾಯಾಃ ಸುಮನಸ
ನಿಕರೈಃ ಅರ್ಚಿತಾಯಾಃ ಸುನದ್ಯಾಃ
ಆಶಾಯಾಂ ದಕ್ಷಿಣಾಯಾಂ ಸ್ಥಿತ ಸುರ
ಸರಿತಾವಾಸ ಭೂತೋಽದ್ರಿ ರಾಜಃ !
ತಸ್ಯಾಧೋದೇಶ ಸಂಸ್ಥೇ ಸಗರ ಪುರವರೇ,
ಧಿಷ್ಠಿತಾನ್ ವೇದನಿಧ್ಯೇತ್ಯಾಖ್ಯಾತಾನ್
ಬ್ರಹ್ಮನಿಷ್ಠಾನ್ ಯತಿಕುಲತಿಲಕಾನ್
ಮದ್ಗುರೂನ್ ಸಂಪ್ರಪದ್ಯೇ ॥ ೧॥

"**ಭಾ**ರತ ಮೇವ ವರ್ಷಂ, ಕರ್ಮಂ. ಕ್ಷೇತ್ರಂ" ಎಂಬ ಶ್ರೀಮದ್ಭಾಗವ- ತೋಕ್ತಿಯಂತೆ, ಸ್ವರ್ಗಸ್ಥರಿಂದಲೂ ಪ್ರಾರ್ಥಿತವಾದ ಸಂಪಾದನಾಸ್ಥಾನ ಮತ್ತು ಪುಣ್ಯ ಭೂಮಿಯಾದ ಈ ಭರತ ಖಂಡದ ದಕ್ಷಿಣ ದಿಗ್ಭಾಗದಲ್ಲಿ ವಿರಾಜಮಾನವಾದ ಮತ್ತು ಸುಂದರವಾದ ಗಿರಿರಾಜನ ಮೂಲ ಭಾಗದಲ್ಲಿ ಪುಣ್ಯಕ್ಷೇತ್ರವೂ ಸುಪ್ರಸಿದ್ಧ ಆದ ಸಗರ ಎಂಬ ಗ್ರಾಮದಲ್ಲಿ ಚತುಃಶಾಸ್ತ್ರ ಪಾರಂಗತರಾದ ರಾಮಾಚಾರ್ಯರ ಧರ್ಮ ಪತ್ನಿ ಜಾನಕೀ ದೇವಿಯ ಗರ್ಭಾಂಬುಧಿಯಲ್ಲಿ ಶ್ರೀ ಆಚಾರ್ಯರಿಗೆ ಇಬ್ಬರು ಮಕ್ಕಳು ಜನಿಸಿದರು. ಹುಟ್ಟಿದ ಮಕ್ಕಳಲ್ಲಿ ಹಿರಿಯನಿಗೆ ಮಧ್ವಾಚಾರ್ಯರೆಂದೂ ಕಿರಿಯನಿಗೆ ಪ್ರದ್ಯುಮ್ನಾಚಾರ್ಯರೆಂತಲೂ ನಾಮಕರಣ ಮಾಡಿದರು.

ಇಬ್ಬರೂ ವಿದ್ಯಾವಂತರಾದರು. ಸರಿಯಾದ ವಯಸ್ಸಿಗೆ ಉಪನಯನ ವಿವಾಹ ಸಂಸ್ಕಾರಗಳಾಗಿ ಪ್ರದ್ಯುಮ್ನಾಚಾರ್ಯರಿಗೆ ಶ್ರೀನಿವಾಸಾಚಾರ್ಯರೆಂದೂ ಮಧ್ವಾ ಚಾರ್ಯರಿಗೆ ರಂಗಾಚಾರ್ಯರೆಂದು ಇಬ್ಬರು ಮಕ್ಕಳಾದರು. ಘನವಿದ್ವಾಂಸರಾದ

ಸಗರ ಪ್ರದ್ಯುಮ್ನಾಚಾರ್ಯರು ಸಂಸಾರಭಾರವನ್ನು ಮಗನಾದ ಶ್ರೀನಿವಾಸನಿಗೆ ಒಪ್ಪಿಸಿ ಭಗವಂತನ ಸಾಕ್ಷಾತ್ಕಾರ ಪಡೆಯುವದಕ್ಕೆ ಪ್ರಯಾಗ ಕ್ಷೇತ್ರಕ್ಕೆ ಹೋದರು. ಅಲ್ಲಿ ಕೆಲವುಕಾಲ ಅಷ್ಟಾಕ್ಷರ ಮಂತ್ರವನ್ನು ಕೋಟಿಸಲ ಜಪಿಸಿ ಆಹಾರವನ್ನು ತೊರೆದು ಉಗ್ರತಪಶ್ಚರ್ಯೆಯನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಶ್ರೀಮದುತ್ತರಾಧಿಮಠದ ಪೀಠಸ್ಥರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರೂ ಪರಮತ ಖಂಡನ ಪೂರ್ವಕ ಸ್ವಮತ ಸ್ಥಾಪನೆಯನ್ನು ಮಾಡುತ್ತ ಸಂಚಾರಕ್ರಮದಿಂದ ಪ್ರಯಾಗಕ್ಕೆ ಬಂದರು. ಅಲ್ಲಿಯೆ ಸಗರ ಪ್ರದ್ಯುಮ್ನಾಚಾರ್ಯರೆಂಬ ಮಹಾ ಪಂಡಿತರೂ ವಿರಕ್ತಿಯನ್ನು ಹೊಂದಿ ಉಗ್ರವಾದ ತಪಶ್ಚರ್ಯೆಯನ್ನು ಮಾಡುತ್ತಿದ್ದರು. ಇವರ ತಪಶ್ಚರ್ಯೆಗೆ ಶ್ರೀಗಳು ಬಹು ಸಂತುಷ್ಟರಾದರು.

ಅವರನ್ನು ಆಗಲೆ ಸಂಸ್ಥಾನದಸಂಗಡ ಕರೆದುಕೊಂಡು ಮಹಾಯಾತ್ರೆಗೆ ಹೊರಟರು. ಶ್ರೀಗಳು ಪ್ರದ್ಯುಮ್ನಾಚಾರ್ಯರನ್ನು ಕೂಡಿಕೊಂಡು ಕಾಶೀಯಾತ್ರೆಯನ್ನು ಮುಗಿಯಿಸಿ ಅಲ್ಲಿಂದ ಬ್ರಹ್ಮಾವರ್ತ ಕ್ಷೇತ್ರಕ್ಕೆ ಬಂದುಮುಟ್ಟಿದರು. ಅಲ್ಲಿ ಅವರು ಬಹುಜನರಿಗೆ ಮುದ್ರಾ ಮಂತ್ರಾಕ್ಷತೆಯನ್ನು ಕೊಟ್ಟು ಅವರನ್ನು ಅನುಗ್ರಹಿಸಿದರು. ಅಬಳಿಕ ಒಮ್ಮೆ ಅವರು ಗಂಗಾತೀರದ ಮೇಲಿನ ವಾಲ್ಮೀಕ್ಯಾಶ್ರಮದ ಚಪ್ಪರದಲ್ಲಿ ಮಲಗಿರುತ್ತಿರಲು ಅವರಿಗೆ ಒಂದು ಕನಸುಬಿದ್ದಿತು. ಪ್ರದ್ಯುಮ್ನಾಚಾರ್ಯರಿಗೆ ನೀವು ಸಂಸ್ಥಾನಕ್ಕೆ ಪಟ್ಟಕಟ್ಟಿ ಗಂಗೋದಕದ ಕೊಡಗಳೊಂದಿಗೆ ನಾಳೆ ಅವರನ್ನು ರಾಮೇಶ್ವರಕ್ಕೆ ಕಳಿಸಿರಿ. ಅಲ್ಲಿಅವರಿಂದ ಬ್ರಾಹ್ಮಣರ ವಿಷಯವಾಗಿ ಇನ್ನೂ ಅನೇಕ ಕಾರ್ಯಗಳು ಪೂರೈಸಬೇಕಾಗಿದೆ: ಎಂದು ಶ್ರೀಗಳವರಿಗೆ ದೇವರಾಜ್ಞೆಯಾದಂತಾಯಿತು. ಬೆಳಗಾಗುತ್ತಲೆ ಶ್ರೀಗಳವರು ಆಚಾರ್ಯರಿಗೆ ಸನ್ಯಾಸವನ್ನು ಕೊಟ್ಟು ಅವರನ್ನು 'ವೇದನಿಧಿ'ಗಳೆಂದು ಕರೆದರು.

ಈ ಹೊಸ ಶ್ರೀಗಳವರಾದರೂ ತಡಮಾಡದೆ ದೇವರ ಆಜ್ಞೆಯಂತೆ ರಾಮೇಶ್ವರಕ್ಕೆ ಬಂದರು. ಅಲ್ಲಿ ಧನುಷ್ಕೋಟಿಯಲ್ಲಿ ಸ್ನಾನಮಾಡಿ ಅವರು ಈಶ್ವರನಿಗೆ ಗಂಗೋದಕದಿಂದ ಅಭಿಷೇಕ ಮಾಡಿದರು. ಆಮೇಲೆ ಅಲ್ಲಿಯ ಬ್ರಾಹ್ಮಣರಿಗೆ ಅನ್ನದಾನಕ್ಕೆ ಬೇಕಾಗುವ ಚೆನ್ನಾದ ಸೌಕರ್ಯಗಳನ್ನು ಒದಗಿಸಿಕೊಟ್ಟರು. ಇತ್ತ ವಿದ್ಯಾಧೀಶರು ಹಿಂದಿನಂತೆ ವೇದನಿಧಿಗಳಿಗೆ ಸಂಸ್ಥಾನವನ್ನೊಪ್ಪಿಸಿ ಮೂರು ವರ್ಷಗಳೊಳಗಾಗಿ ಅವರಿಗೆಪಂಢರಪುರಕ್ಕೆ ಬರಹೇಳಿ ತಾವು ದಿಗ್ವಿಜಯರಾಮ ಪ್ರತಿಮೆಯನ್ನು ತೆಗೆದುಕೊಂಡು ಬದರಿ ಕ್ಷೇತ್ರಕ್ಕೆ ತೆರಳಿದರು. ಅವರೊಡನೆ ಮಠದ ಕೆಲವು ಜನ ಶಿಷ್ಯರೂ ಮತ್ತು ಪ್ರದ್ಯುಮ್ನಾಚಾರ್ಯರ ಅಣ್ಣಂದಿರ ಮಕ್ಕಳಾದ ಶ್ರೀರಂಗಾಚಾರ್ಯರೂ ಇದ್ದರು.

ಬದರಿಕೆಂದರೆ ತಮ್ಮ ಯಾತ್ರೆಯು ಮುಗಿಯುವ ಮೊದಲೆ ತಮಗೆ ನಿರ್ಯಾಣ ಕಾಲವು ಒದಗಿದರೆ ತಮ್ಮಲ್ಲಿಯ ದಿಗ್ವಿಜಯ ರಾಮ ಪ್ರತಿಮೆಯನ್ನು ಸಂಸ್ಥಾನಕ್ಕೆ

ಒಪ್ಪಿಸಬೇಕೆಂದು ಶ್ರೀಗಳವರ ಬಯಕೆಯು. ಶ್ರೀಗಳವರ ಬದರಿ ಯಾತ್ರೆಯು ಸುಗಮವಾಗಿ ಮುಗಿಯಿತು. ಮುಂದೆ ಶ್ರೀಗಳವರು ಕಾಶ್ಮೀರದ ಮಾರ್ಗವಾಗಿ ಏಕಚಕ್ರನಗರಕ್ಕೆ ಬಂದರು. ಯೋಗಬಲದಿಂದ ತಮ್ಮ ಸಮೀಪಿಸಿದ ನಿರ್ಯಾಣವನ್ನು ಶ್ರೀಗಳವರು ತಿಳಿದುಕೊಂಡು ಕೂಡಲೆ ಅವರು ರಂಗಾಚಾರ್ಯರನ್ನು ಕರೆದು ವಂಶ ವಿಗ್ವಿಜಯರಾಮ ದೇವರನ್ನು ಒಪ್ಪಿಸಿ "ನೀವು ರಾಮೇಶ್ವರಕ್ಕೆ ಹೋದ ಶ್ರೀಗಳವರೊಡನೆ ಕೂಡಿಕೊಂಡು ಅವರಿಗೆ ವಂಶವಿಗ್ವಿಜಯರಾಮ ಪ್ರತಿಮೆ ಮುಂತಾದುವುಗಳನ್ನು ಒಪ್ಪಿಸಿ ಅವರೊಡನೆ ನೀವು ಪಂಢರಪುರಕ್ಕೆ ಹೋಗಿರಿ" ಎಂದು ಹೇಳಿದರು. ಶ್ರೀಗಳು ಮುಪ್ಪಿನವರಾದುದರಿಂದ ನಿಮಗೆ ಸಂಸ್ಥಾನವು ಸಿಗುವದೆಂದು ಶ್ರೀಗಳುಆಶೀರ್ವದಿಸಿದರು ವೇದನಿಧಿತೀರ್ಥರೂ ರಾಮೇಶ್ವರ ಯಾತ್ರೆಯನ್ನು ಮುಗಿಸಿಕೊಂಡು ರಂಗಾಚಾರ್ಯರಿಂದೊಡಗೂಡಿ ಮಂಚಾಕೊಪ್ಪವೆಂಬಲ್ಲಿಗೆ ಬಂದರು. ಇಲ್ಲಿಗೆ ಬರುವ ಮೊದಲೆ ದಾರಿಯಲ್ಲಿ ತ್ರಿಚನಾಪಳ್ಳಿಯ ನವಾಬನ ಮೇಲೆ ಇವರ ಪಾಂಡಿತ್ಯ ಮತ್ತು ತಪಸ್ಸಿನ ಪ್ರಭಾವವು ಬಿದ್ದು ಅವನಿಂದ ಶ್ರೀಗಳವರಿಗೆ ಮಂಚಾಕೊಪ್ಪ ಜಿಲ್ಲೆಯೊಳಗಿನ ಎರಡು ಮೂರು ಹಳ್ಳಿಗಳು ಉಂಬಳಿಯಾಗಿ ಸಿಕ್ಕವು. ಶ್ರೀಗಳವರೂ ಮಂಚಾಕೊಪ್ಪಕ್ಕೆ ಬರುತ್ತಲೆ ಗುರುಗಳ ನಿರ್ಯಾಣದ ಸುದ್ದಿಯನ್ನು ತಿಳಿದು ಶ್ರೀಗಳವರು ಅಲ್ಲಿಗೆ ಬಂದರು.

ಶ್ರೀಗಳು ಕುಂಭಕೋಣ, ಶ್ರೀರಂಗ, ಮಧುರೈ, ಮೊದಲಾದ ಪಟ್ಟಣಗಳಿಂದ ಹೆಸರಾದ ಸಾತ್ವಿಕ ಬ್ರಾಹ್ಮಣರನ್ನು ಕರೆಯಿಸಿ ಗುರುಗಳ ಸಮಾರಾಧನೆಯನ್ನು ಬಹು ವಿಜೃಂಭಣೆಯಿಂದ ಮಾಡಿದರು. ಆಕಾಲಕ್ಕೆ ಶ್ರೀಗಳವರು ಬ್ರಾಹ್ಮಣರಿಗೆ ಒಂದೊಂದು ಹಿಡಿ ವರಹಗಳನ್ನು ದಕ್ಷಿಣೆಯಾಗಿ ಕೊಟ್ಟರು. ಗುರುಗಳ ಸೇವೆಯುಮುಗಿದ ಮೇಲೆ ಶ್ರೀಗಳು ಮುಂದಕ್ಕೆ ಹೊರಟರು. ಶ್ರೀರಾಯರ ಮಠದ ಶಿಷ್ಯನೊಬ್ಬನಿಗೆ ಮ್ಲೇಂಛರ ಸಂಸರ್ಗವಾದುದರಿಂದ ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳುವದಕ್ಕೆ ಅವನು ತವಕಪಡುತ್ತಿರುವಾಗ ಅವನಿಗೆ ಕುಂಭ ಕೋಣೆಯ ಮಾರ್ಗದಲ್ಲಿ ಶ್ರೀಮುಷ್ಣದಲ್ಲಿ ಉಂಬಾಳಿ ರಾಮಚಂದ್ರ ತೀರ್ಥರೆಂಬ ಯತಿಗಳ ದರ್ಶನವಾಯಿತು. ಅವರನ್ನು ತನ್ನ ಪ್ರಾಯಶ್ಚಿತ್ತಕ್ಕಾಗಿ ಬೇಡಿಕೊಳ್ಳಲು ಅವರು ಕಿವಿಯಮೇಲೆ ಕೈಇಟ್ಟು ಇಂತಹ ಪಾಪಕ್ಕೆ ಪ್ರಾಯಶ್ಚಿತ್ತವೇಇಲ್ಲವೆಂದು ಹೇಳಿದರು. ಆಗ ಅವನು ಅಲ್ಲಿಂದ ಕುಂಭಕೋಣೆಯಲ್ಲಿನ ಶ್ರೀರಾಘವೇಂದ್ರ ಸ್ವಾಮಿಗಳಿಂದ ಪ್ರಾಯಶ್ಚಿತ್ತವನ್ನುಹೊಂದಿ ಮುದ್ರಾಧಾರಣೆ ಪಡೆದನು.

ರಾಯರು ಗೃಹಸ್ಥರ ಪಂಕ್ತಿಯಲ್ಲಿ ಭೋಜನಮಾಡಿದುದಕ್ಕೆ ರಾಮಚಂದ್ರತೀರ್ಥರೂ ಶ್ರೀರಾಯರಿಗೆ ಬಹಿಷ್ಕರಿಸಿದರು. ಅಲ್ಲದೆ ಈ ಬಹಿಷ್ಕಾರವನ್ನು ತಾವು ನಡೆಸಬೇಕೆಂಬ ಆಶಯದ ಪತ್ರವನ್ನು ಬರೆದು ವಸ್ತ್ರ ಮನ್ನಣೆಯನ್ನು ಮಂಚಾಕೊಪ್ಪಿನ ಶ್ರೀವೇದನಿಧಿ ತೀರ್ಥರಿಗೆ ಕಳಿಸಿದರು. ಇದನ್ನು ಓದಿಸಿ ಕೇಳುತ್ತಲೆ ಶ್ರೀಗಳವರು ಕೋಪಿಷ್ಠ ಸಂತಪ್ತರಾದರು. ರಾಯರಿಗೆ ಬಹಿಷ್ಕರಿಸಲು ಇವರಿಗೇನು ಅಧಿಕಾರವಿದೆಯೆಂದು ತಂದ ವಸ್ತ್ರ ಮನ್ನಣೆಯನ್ನು ಹಾಗೆಯೆ ಕಳಿಸಿದರು. ಈ ವರ್ತಮಾನವು ಕೇಳಿ ಶ್ರೀರಾಘವೇಂದ್ರರು ಬಹಳ ಸಂತೋಷ ಪಟ್ಟರು. ತಮ್ಮ ಸಂಸ್ಥಾನದೊಂದಿಗೆ ಶ್ರೀಗಳವರಿಗೆ [illegible]

ಪರಸ್ಪರರ ಭೇಟಿಯು ಇಬ್ಬರನ್ನು ಬಲು ಸಂತೋಷಪಡಿಸಿತು. ಇಬ್ಬರೂ ಪರಸ್ಪರರಿಗೆ ಆದರಾತಿಥ್ಯಗಳನ್ನು ಮಾಡಿದರು. ವ್ಯಾಸಂಭಟ್ಟರ ಕಣವಿಯ ತೋಟವೆಂಬ ಸ್ಥಳದಲ್ಲಿ ಇವರೂ ಶ್ರೀಗಳವರ ದೇವತಾರ್ಚನೆಯು ಬಹು ವಿಜೃಂಭಣೆಯಿಂದ ಜರುಗಿತು. ಉಭಯ ಶ್ರೀಗಳು ಆನಂದದಿಂದ ಭೋಜನವನ್ನು ಮಾಡಿದರು. ಈ ವೃತ್ತಾಂತವು ರಾಮಚಂದ್ರತೀರ್ಥರಿಗೆ ತಿಳಿಯಲು ಎರಡೂ ಮಠಗಳಿಗೆ ಬಹಿಷ್ಕಾರ ಹಾಕಿರೆಂದು ತಮ್ಮ ಶಿಷ್ಯರಿಗೆ ಆಜ್ಞಾಪಿಸಿದರು. ಕುಚೇಷ್ಟೆ ಮಾಡುತ್ತಿರುವ ತೀರ್ಥರ ಸಮಾಚಾರವನ್ನು ಚೆನ್ನಾಗಿ ತೆಗೆದುಕೊಂಡೇ ಬಿಡುವದೆಂದು ನಿಶ್ಚಯಿಸಿ ವೇದನಿಧಿತೀರ್ಥರು ಚಾತುರ್ಮಾಸ್ಯಸಂಕಲ್ಪಕ್ಕಾಗಿ ಶ್ರೀಮುಷ್ಣ ಕ್ಷೇತ್ರಕ್ಕೆ ಬಂದರು. ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಬಿಡಾರವಾಯಿತು. ರಾಮಚಂದ್ರತೀರ್ಥರೂ ಅಲ್ಲಿಯೇ ಇದ್ದರು. ಆಗ ಶ್ರೀಗಳು ತೀರ್ಥರಿಗೆ ವಾಕ್ಯಾರ್ಥಕ್ಕಾಗಿ ಬರಬೇಕಾಗಿ ಕರೆಕಳುಹಿಸಿದರು. ತೀರ್ಥರಿಗೆ ಗುಡಿಯನ್ನು ಬಿಟ್ಟು ಹೊರಗೆ ಬರಲು ಧೈರ್ಯವಾಗಲಿಲ್ಲ. ಒಂದೆರಡು ದಿವಸ ಅವರು ಬಾರದಿದ್ದದ್ದಕ್ಕೆ ಉಪವಾಸವಿರಬೇಕಾಯಿತು. ಮತ್ತೊಮ್ಮೆ ಕರೆಕಳಿಸಿದರೂ ಆಗಲೂ ಅವರು ಬಾರದೆ ಬೆಳಗಾಗುವದರೊಳಗಾಗಿ ತಂಜಾವೂರಿಗೆ ಓಡಿ ಹೋದರು. ತಮಗೂ ಮತ್ತು ತೀರ್ಥರಿಗೂ ವಾದದ ಪ್ರಸಂಗವನ್ನು ತರಬೇಕೆಂದು ಅಲ್ಲಿಯ ರಾಜನನ್ನು ಕೇಳಿದರು. ಸಿಂಹವು ಆನೆಯನ್ನು ಬೆನ್ನಟ್ಟುವಂತೆ ರಾಮಚಂದ್ರರ ಬೆನ್ನು ಹತ್ತಿದರು. ರಾಜನು ಒಪ್ಪಿದನು ತೀರ್ಥರು ಎಂಟುದಿನಗಳಾದರೂ ಶ್ರೀಗಳವರ ಕಡೆಗೆ ಬರಲಿಲ್ಲ ತೀರ್ಥರು ಆ ದಿವಸವೆ ಊರೂ ಬಿಟ್ಟು ಹೋದರು. ಶ್ರೀಗಳವರಿಗೆ ಅಸಮಾಧಾನವಾಯಿತು. ರಾಜನು ಶ್ರೀಗಳವರಿಗೆ ಜಯವನ್ನು ಹೊಂದಿದರೆಂಬ ಒಪ್ಪಿಗೆಯ ಜಯ ಪತ್ರವನ್ನು ಬರೆಯಿಸಿ ಕೊಟ್ಟನು. ಯಥಾಯೋಗ್ಯವಾಗಿ ರಾಜನಿಂದ ಶ್ರೀಗಳವರಿಗೆ ಆದರಾತಿಥ್ಯಗಳು ದೊರಕಿದವು. ಅಲ್ಲಿಂದ ಅವರು ಪಂಢರಪುರಕ್ಕೆ ಹೋದರು. ಅಲ್ಲಿ ಅವರಿಗೆ ದೇಹಾಲಸ್ಯ ಉಂಟಾಯಿತು. ಅಲ್ಲಿಯೇ ಶ್ರೀರಂಗಾಚಾರ್ಯರಿಗೆ ತಮ್ಮ ಸಂಸ್ಥಾನವನ್ನೊಪ್ಪಿಸಿ ಶಕೆ ೧೫೫೭ ಕಾರ್ತಿಕ ಶುದ್ಧ ಏಕಾದಶಿ ವೃಂದಾವನಸ್ಥರಾದರು. ಇವರು ಹೂ ಹೂ ಗಂಧರ್ವಾಂಶರೆಂದು ಪ್ರಸಿದ್ಧಿಯಿದೆ. ಇವರ ವಂಶಜರೇ ಈಗ ಶಹಪುರದಲ್ಲಿ ನೆಲೆಸಿದ್ದಾರೆ.

ವಿದ್ಯಾಧೀಶ ಗುರೋಃ ಶಿಷ್ಯಃ ಶ್ರೀಮದ್ವೇದನಿಧಿರ್ಯತಿಃ ।
ಪಾಂಡುರಂಗಂ ಮಹಾ ಕ್ಷೇತ್ರಂ ವಿಠ್ಠಲಂ ಸೇವಿತುಂ ಸದಾ ॥೧॥

— ಸಗರ ಪ್ರದ್ಯುಮ್ನಾಚಾರ್ಯ

ತನ್ನ ರಾಜ್ಯದಲ್ಲಿ ಅಕಾಲಿಕವಾಗಿ ಹಿಂದೆ ಎಂದೂ ನಡೆಯದಂತಹ ಶ್ವಾಪದಗಳ ಬಾಧೆ ಏತಕ್ಕಾಯಿತೆಂದು ಆಶ್ಚರ್ಯಗೊಂಡನು. ಇದುವರೆಗೆ ಆತನಿಗೆ ವಿಶ್ವಾಮಿತ್ರನು ಸತ್ವಪರೀಕ್ಷೆಗಾಗಿ ಈ ರೀತಿ ಉಪದ್ರವ ಕೊಡುತ್ತಿದ್ದಾನೆಂಬುದರ ಅರಿವು ಇರಲಿಲ್ಲ. ತನ್ನ ಕರ್ತವ್ಯದಲ್ಲಿ ನಿರತನಾದ, ಧರ್ಮವಂತನಾದ ಆತನಿಗೆ ಯಾರಿಂದಲೂ ಯಾವತರದ ಭಯವಿರಲಿಲ್ಲ. ಮುಂದೆ ಆತನಿಗೆ ವಿಶ್ವಾಮಿತ್ರನಿಂದ ನಿರ್ಮಿತವಾದ ಮಾಯಾವೀ ಕಾಡುವರಾಹವನ್ನು ಹೊಡೆದಟ್ಟುವದಕ್ಕಾಗಿ ಅಡವಿಯಲ್ಲಿ ಬಹಳ ಅಲೆದಾಡಬೇಕಾಯಿತು. ಭಯಂಕರವಾದ ಆ ಹಂದಿಯು ಕೊನೆಗೆ ರಾಜನ ಬಾಣದಿಂದ ಪೆಟ್ಟುತಿಂದು ವಿಶ್ವಾಮಿತ್ರನ ಆಶ್ರಮದ ಕಡೆಗೆ ಹೊರಳಿತು- ಆದರೆ ಅದು ಎಲ್ಲಿಗೆ ಹೋಯಿತೆಂಬುದು ಹರಿಶ್ಚಂದ್ರನಿಗೆ ತಿಳಿಯಲಿಲ್ಲಿ. ರಾಜನು ಇನ್ನು ತನ್ನ ಕಾರ್ಯವಾಯಿತೆಂದು ಭಾವಿಸಿದನು. ಆದರೆ ಆತನಿಗಾಗಿ ಬೇರೊಂದು ಸಂಕಟವು ಕಾದಿತ್ತು. ಹಂದಿಯ ಬೇಟೆಯಾಡುವುದಕ್ಕಿಂತ ಮುಂಚೆ ಜವನು ಗುರುಗಳಾದ ವಶಿಷ್ಠರ ಅಪ್ಪಣೆಯನ್ನು ಮೀರಿ, ತನಗರಿಯದಂತೆ ವಿಶ್ವಾಮಿತ್ರನ ಆಶ್ರಮದಲ್ಲಿ ಸೇರಿ ಬಹಳ ಬಳಲಿದುದರಿಂದ ನಿದ್ರೆಹೋಗಿ ಭಯಂಕರವಾದ ಸ್ವಪ್ನವನ್ನು ಕಂಡಿದ್ದನು. ಅದರಿಂದಾಗಿ ಮನಸ್ಸು ಬಹಳ ವ್ಯಗ್ರವಾಗಿತ್ತು. ಅದರ ಕಾವು ಇನ್ನೂ ಆರಿರಲಿಲ್ಲ. ಇಂಥ ಹೊತ್ತಿನಲ್ಲಿ ವಿಶ್ವಾಮಿತ್ರನಿಂದ ನಿರ್ಮಿತವಾದ ಚಾಂಡಾಲಕನ್ನಿಕೆಯರ ಗಾನವನ್ನು ಕೇಳಿ ಸಂತೋಷಿತನಾಗಿ ತನ್ನಕೊರಳೊಳಗಿನ ಮಣಿದೊಡಿಗೆಗಳನ್ನು ಕೊಟ್ಟು ಅವರಿಗೆ ಮರ್ಯಾದೆಯನ್ನು ಮಾಡುವ ಪ್ರಯತ್ನ ಮಾಡಿದನು. ಅವರು ಅದನ್ನು ಸುಮ್ಮನೆ ಸ್ವೀಕರಿಸದೆ, 'ಮುತ್ತಿನ ಸತ್ತಿಗೆಯನಿತ್ತು ಸಲಹು' ಎಂದು ಬೇಡಿಕೊಂಡರು. ಇದನ್ನು ಕೇಳಿ ಆತನು ಆಶ್ಚರ್ಯಗೊಂಡನು. ಇಷ್ಟಕ್ಕೇ ಬಿಡದೆ ಅವರು ರಾಜನ ಸಂಗಡ ದೀರ್ಘವಾದ ಸಂಭಾಷಣೆಯೇ ನಡೆಸಿದರು. ಹರಿಶ್ಚಂದ್ರನು ಇದುವರೆಗೆ ಚಾಂಡಾಲಕನ್ನಿಕೆಯರು ಇಷ್ಟು ಧೈರ್ಯದಿಂದ ತನ್ನ ಎದುರಿಗೆ ನಿಂತು ಮಾತಾಡಿದುದು ಕಂಡಿರಲಿಲ್ಲ: ಚಾಂಡಾಲ ಕನ್ನಿಕೆಯರೇ ಏಕೆ ಎಂತೆಂತಹವರೂ ಕೂಡ ಆತನ ಸಂಗಡ ಮಾತಾಡಲು ಹಿಂಜರಿಯುತ್ತಿದ್ದರು. ಆದರೆ ಈ ಘಟನೆ ನಡೆದುದನ್ನು ಕಂಡು ರಾಜನು ವಿಸ್ಮಿತನಾದನು. 'ರವಿಕುಲದ ರಾಯರಿಗೆ' ಸಲ್ಲುವ ಈ ಮುತ್ತಿನ ಸತ್ತಿಗೆಯು ಅವರಿಗೆ ಕೊಡುವದು ಸಮ್ಮತವೆ ? ಇದು ತನ್ನ ಘನತೆಗೆ ಸರಿಯೆ ? ಎಂದು ತನ್ನ ಮನದಲ್ಲಿ ತಾನೇ ವಿಚಾರಿಸಿದನು ಕೊನೆಗೆ ಇದೇನು 'ಬಂದ ಕಾಲಗುಣವೋ' ನಿಂದ ನೆಲದಗುಣವೋ' ಎಂದು ಬಹುಪರಿಯಿಂದ ವಿಚಾರಮಾಡ ತೊಡಗಿದನು. ಆದರೆ ನಾಚಿಕೆಗೇಡಿಗಳಾದ ಆ ಚಾಂಡಾಲ ಕನ್ನಿಕೆಯರು, ಆತನು ತಮ್ಮನ್ನು ಮದುವೆಯಾಗಬೇಕೆಂದು ಕೇಳಿಕೊಂಡಾಗ, ರಾಜನಿಗೆ, ತಾನು ಎಲ್ಲಿರುವೆನೆಂಬುವದರ ಅರಿವೆಯೇ ಹಾರಿಹೋಯಿತು. ತಾನು ಇದೇನು ಕೇಳುತ್ತಿದ್ದೇನೆಂಬ ವಿಚಾರವು ಆತನ ತಲೆಯಲ್ಲಿ ಸುಳಿದು ಹೋಯಿತು. ಸತ್ಯಶೀಲನಾದ, ಸ್ವಧರ್ಮದಲ್ಲಿ ನಿರತನಾದ ಆತನು ಚಾಂಡಾಲ ಕನ್ನಿಕೆಯರ ಸಂಗಡ ಮದುವೆಯಾಗಲು ಹೇಗೆ ಒಪ್ಪ

ಕೊಳ್ಳಬಹುದು ? ಚಾಂಡಾಲ ಕನ್ನಿಕೆಯರು ರಾಜನನ್ನು ಬಹುಪರಿಯಿಂದ ಕಾಡತೊಡಗಲು ಶಾಂತ ಸ್ವಾಭಾವದವನಾದ ಆತನಿಗೆ ಅವರ ಈ ತರದ ವರ್ತನೆಯಿಂದ ಕೋಪವು ಕೆರಳಿತು. ಬಳಿಯಲ್ಲಿದ್ದ ಮಂತ್ರಿಯ ಕೈಯಿಂದ ಅವರನ್ನು ಚೆನ್ನಾಗಿ ಹೊಡೆಸಿದನು. ಅವರು ಸುಮ್ಮನೆ ಕಾಣಿಕೆಗಳನ್ನು ತೆಗೆದುಕೊಂಡು ಹೋಗದೆ ವಿಪರೀತವಾಗಿ ಬೇಡಿಕೊಂಡರೆ ರಾಜನು ಹೇಗೆ ಅದನ್ನು ಪೂರೈಸಬಹುದು ? ' ಮಂತ್ರಿಯು ಅವರನ್ನು ಜೆನ್ನಟ್ಟಿ ಮುಡಿ ಹುಡಿಯೊಳಗೆ ಬೀಳುವಂತೆ, ಹಲ್ಲು ಉದುರುವಂತೆ ಬೆನ್ನು ಬಿರಿಯುವಂತೆ ಹೊಡೆದು ಅಟ್ಟಿದನು.

ವಿಶ್ವಾಮಿತ್ರನು ಇಂತಹ ಪ್ರಸಂಗಗಳನ್ನೇ ಕಾಯುತ್ತಿದ್ದನು. ಆತನ ಕೋಪ ಕುದಿಯಿತು. ತನ್ನ ಮಾನಸಪುತ್ರಿಯರನ್ನು ಈ ರೀತಿಯಾಗಿ ಹೊಡೆದು ಅವರನ್ನು ಬಳಲಿಸುತ್ತಿದ್ದುದನ್ನು ಕಂಡು ತನ್ನ ಸೇಡನ್ನು ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ಹರಿಶ್ಚಂದ್ರನು ಇವೆಲ್ಲ ಘಟನೆಯಿಂದಾಗಿ ಬಹಳ ಆಯಾಸಗೊಂಡಿದ್ದನು. ಅಷ್ಟರಲ್ಲಿ ವಿಶ್ವಾಮಿತ್ರನು ಬಂದು ಧುಮುಕಿದನು. ವಿನಯಶಾಲಿಯಾದ ಹರಿಶ್ಚಂದ್ರನು ತನ್ನ ಘನತೆ, ಮರ್ಯಾದೆಗೆ ತಕ್ಕಂತೆ ಮುನಿಗೆ ಅಭಿವಂದಿಸಿದನು. ಆದರೆ ಸರ್ವರೀತಿಯಿಂದ ತೊಂದರೆ ಕೊಡಲುಪಕ್ರಮಿಸಿದ ವಿಶ್ವಾಮಿತ್ರನು ತನ್ನ ಆಶ್ರಮ ಪ್ರದೇಶದಲ್ಲಿ ಹರಿಶ್ಚಂದ್ರನಿಗೆ ಸನ್ಮಾನಿಸದೆ ಬಿರುನುಡಿಗಳಿಂದ ಆತನ ಮನಸನ್ನು ನೋಯಿಸಿದನು. ಹರಿಶ್ಚಂದ್ರನು ಶಾಂತರೀತಿಯಿಂದಲೇ ಮುನಿಯ ದುರ್ನುಡಿಗಳನ್ನು ಸಹಿಸಿಕೊಂಡನು. ತನ್ನ ಮರ್ಯಾದೆಗೆ ತಕ್ಕಂತೆ ಮಾತುಗಳನ್ನಾಡಿದರೂ, ಕೋಪೋದ್ರಿಕ್ತನಾದ ವಿಶ್ವಾಮಿತ್ರನಿಂದ ವಿನಾಕಾರಣ ಕೆಟ್ಟಮಾತುಗಳನ್ನು ಸಹಿಸಬೇಕಾಯಿತು. ತನ್ನ ಮಾನಸಪುತ್ರಿಯರಾದ ಕನ್ನಿಕೆಯರನ್ನು ಮದುವೆಯಾಗೆಂದು ವಿಶ್ವಾಮಿತ್ರ ನುಡಿದುದನ್ನು ಕೇಳಿ ರಾಜನಿಗೆ ಪರಮಾಶ್ಚರ್ಯವಾಯಿತು. ಪರಮ ಜ್ಞಾನಿಗಳೆನಿಸಿದ ವಿಶ್ವಾಮಿತ್ರರೂ ಈ ರೀತಿಯಾಗಿ ತಮ್ಮ ಮರ್ಯಾದೆಯನ್ನು ಮೀರಿ ಮಾತನಾಡಬಹುದೆಂದು ಆತನು ಸರ್ವಥಾ ಎಣಿಸಿರಲಿಲ್ಲ. ಮುನಿಯ ಮಾತನ್ನು ಕೇಳಿ ಆತನ ಮನಸ್ಸಿನ ಮೇಲೆ ಬಲವಾದ ಆಘಾತವೇ ಆಯಿತು. ಇದುವರೆಗೆ ಆತನು ವಿಶ್ವಾಮಿತ್ರನಿಗೆ ಹಾಗೂ ಅದಕ್ಕಿಂತ ಮುಂಚೆ ಬೇಡಿದ ಬ್ರಾಹ್ಮಣರಿಗೆ, ಅವರು ತೃಪ್ತಿ ಹೊಂದುವಷ್ಟು ದಕ್ಷಿಣೆ ಕೊಟ್ಟಿದ್ದನು. ಆದರೆ, ಈಗ ಬೇಡಿದುದನ್ನು ಕೊಡುವವನಿದ್ದಾನೆ ಹೇಳಿದಂತೆ ನಡೆಯುವವನಿದ್ದಾನೆ, ಎಂದುಕೊಂಡು ತನ್ನ ಮನಸ್ಸಿಗೆ ಬಂದಂತೆ, ಶಾಸ್ತ್ರ, ಧರ್ಮ, ನಿಯಮ ಸಂಸ್ಕೃತಿಗೆ ವಿರುದ್ಧವಾದಂತಹ ಬೇಡಿಕೆಗಳನ್ನು ಮುಂದಿಟ್ಟು ಅದನ್ನು ಪೂರೈಸಬೇಕೆಂದು ಕೇಳಿಕೊಳ್ಳುವ ಮುನಿಯ ಮಾತು ಆತನಿಗೆ ಸರ್ವಥಾ ವಿಚಿತ್ರ ಹಾಗು ಧರ್ಮಬಾಹಿರ ಎನಿಸಿದ್ದರಿಂದ, ತನ್ನ ವಂಶದ ಪಳ್ಳಿಗೆ ಕುಂದು ತರುವಂತಹದ್ದೆಂದೂ, ತನ್ನ ಸತ್ಯ ವ್ರತಕ್ಕೆ ಭಂಗ ತರುವಂತಹದ್ದೆಂದೂ ಕಂಡುಬಂದುದರಿಂದ ವಿಶ್ವಾಮಿತ್ರನ ಮಾತನ್ನು ಆತನು ಚೆನ್ನಾಗಿಯೇ ಅಲ್ಲಗಳೆದನು.

ರಾಜನ ಈ ಪ್ರಕಾರದ ವರ್ತನೆಯಿಂದ ಆತನ ಧರ್ಮಸಂಸ್ಕಾರವು ಎಷ್ಟು ಬಲವತ್ತರವಾಗಿದ್ದು, ಕಠಿಣ ಪ್ರಸಂಗದಲ್ಲಿ ಹೇಗೆ ವಿವೇಕಪರವಾಗಿತ್ತೆಂಬುದನ್ನು ರಾಘವಾಂಕನು ಚೆನ್ನಾಗಿಯೇ ಚಿತ್ರಿಸಿದ್ದಾನೆ. ರಾಜನು ವಿಶ್ವಾಮಿತ್ರನನ್ನು ಕುರಿತು ತನ್ನ 'ಸರ್ವರಾಜ್ಯವಾದೊಡಂ ನಿಮಗೆ ಕೊಡಹಡೆವೆನು', ಸಲ್ಲದ ಒಂದು ತೇಜವನ್ನು ಕೊಡೆನು. ಎಂದು ನುಡಿದನು. ವಿಶ್ವಾಮಿತ್ರನಿಗೆ ತನಗೆ ಬೇಕಾದದ್ದು ದೊರೆತಂತಾಯಿತು, ಸಹಜವಾಗಿ ನುಡಿದ ಮಾತನ್ನೇ ಆತನು ಮುಂದುವರಿಸಿ ರಾಜನ ಸಕಲ ಸಾಮ್ರಾಜ್ಯವನ್ನು ಅದೇ ಕ್ಷಣದಲ್ಲಿಯೇ ಪಡೆದನು. ರಾಜನು ಹೀಗೆ ತನ್ನ ಮರ್ಯಾದೆಯನ್ನು ವಂಶದ ಕೀರ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ರಾಜ್ಯವನ್ನೇ ಮುನಿಗೆ ಧಾರೆ ಎರೆದನು. ಮುನಿಯ ಅಪ್ಪಣೆಯಂತೆ ತನ್ನ ರಥವನ್ನು ಬಿಟ್ಟು ಪಾದಚಾರಿಯಾಗಿಯೇ ಅಯೋಧ್ಯಾ ನಗರದ ಕಡೆಗೆ ಹೊರಟನು. ಮುನಿಯು ರಾಜ್ಯವನ್ನು ಪಡೆದುಕೊಂಡಮೇಲೆ ರಾಜನ ಹಾಗೂ ಆತನ ಸತಿಸುತರ ಮೈಮೇಲಿನ ಬಟ್ಟೆಗಳನ್ನು ತೆಗೆದುಕೊಂಡಿದ್ದರಿಂದ ಅಯೋಧ್ಯೆಯ ಜನರು ಅವನನ್ನು ಗುರುತಿಸದಂತಾದರು. ರಥದಲ್ಲಿ ವಿಶ್ವಾಮಿತ್ರನು ಕುಳಿತಿದ್ದುದರಿಂದ ಎಲ್ಲರ ಗಮನವು ಅದರ ಕಡೆಗೇ ಇತ್ತು. ಮುಂದೆ ರಾಜನ ಅವಸ್ಥೆಯನ್ನು ಕಂಡು ಮರುಗಿದ ಪುರಜನರನ್ನು ಕಂಡರೆ ರಾಜನ ಪ್ರಜಾವಾತ್ಸಲ್ಯವು ಎಷ್ಟಿತ್ತೆಂಬುದು ತಿಳಿದು ಬರುವದು. ವಿಶ್ವಾಮಿತ್ರನಿಗೆ ರಾಜನು ತನ್ನ ಅರಮನೆಯ ಸಮಸ್ತವೈಭವವು ರಾಜ್ಯದ ಪ್ರತಿಯೊಂದು ಸಂಪತ್ತು, ಸೇನೆ, ಮುಂತಾದವುಗಳನ್ನು ಒಪ್ಪಿಸುತ್ತಿರುವ ದೃಶ್ಯವನ್ನು ನೋಡಿದರೆ ನಮಗೆ ಆತನ ಧೀರಗಂಭೀರ, ಹಾಗು ಸಂಯಮಪೂರ್ಣ ಸ್ವಭಾವದ ಪರಿಚಯವಾಗುವದು. ಆತನು ತನ್ನ ಮನಸ್ಸನ್ನು ಯಾವದೇ ರೀತಿಯಾಗಿ ವಿಚಲಿತವಾಗಗೊಡಲಿಲ್ಲ. ಹೀಗೆ ಎಲ್ಲವನ್ನು ಸಮರ್ಪಿಸಿ, ತಾನು ಅರಣ್ಯಕ್ಕೆ ಹೋಗುವಾಗ ನಮ್ಮೆಲ್ಲರ ಕರುಣೆಗೆ ಪ್ರೀತಿಗೆ ಹಾಗೂ ಆದರಕ್ಕೆ ಪಾತ್ರನಾಗುತ್ತಾನೆ. ನಮ್ಮ ಎಲ್ಲ ಲಕ್ಷ್ಯವು ಆತನ ಕಡೆಗೇ ಇರುತ್ತದೆ. 'ಪುರದಪುಣ್ಯವು ಪುರುಷ ರೂಪಿಂದ ಪೋಗು'ತ್ತಿರುವ ಪ್ರಸಂಗವನ್ನು ಕಂಡು ಪುರಜನರು ಬಹಳ ಗೋಳಾಡಿದರು. ಆದರೆ ರಾಜನು ತನ್ನ ಪ್ರತಿಜ್ಞೆಯಲ್ಲಿ ದೃಢವಾಗಿದ್ದನು. ತನಗೆ ನಿರ್ಧನ ಗತಿಗೇಡಿಯನ್ನಾಗಿ ಮಾಡಿದ ವಿಶ್ವಾಮಿತ್ರನ ಸಂಗಡ ಪ್ರೀತ್ಯಾದರದಿಂದಲೇ ನಡೆದುಕೊಂಡನು.

ಇಷ್ಟೆಲ್ಲವನ್ನು ತ್ಯಾಗಮಾಡಿ ನಿರ್ಗತಿಕನಾದ, ರಾಜನಾದ ಹರಿಶ್ಚಂದ್ರನ ದೈವಬಲವು ಇನ್ನೂ ಕಠಿಣವಾಗಿಯೇ ಇದ್ದಿತು. ವಿಶ್ವಾಮಿತ್ರನು ಆತನಿಂದ ಹಿಂದಕ್ಕೆ ದಾನ ಪಡೆದಿದ್ದನು. ಆದರೆ ದಕ್ಷಿಣೆಯನ್ನು ಪಡೆದಿರಲಿಲ್ಲ. ಈಗ ಅದನ್ನು ಕೊಡಲೇ ಬೇಕೆಂದು ನುಡಿದುದನ್ನು ಕೇಳಿ ರಾಜನು ಅವಾಕ್ಕಾದನು. ಮುನಿಯನ್ನು ಎಷ್ಟು ಸಮಾಧಾನಪಡಿಸುವ ಪ್ರಯತ್ನ ಮಾಡಿದರೂ ಅದೆಲ್ಲ ವ್ಯರ್ಥವಾಯಿತು. ಕೊನೆಗೆ ಆತನು ನಿರ್ವಾಹವಿಲ್ಲದೆ ದಕ್ಷಿಣೆಯನ್ನು ಕೊಡಲು ಒಪ್ಪಿಕೊಂಡನು. ಆದರೆ ವಿಶ್ವಾಮಿತ್ರನಿಗೆ ಒಂದು ಲಕ್ಷ ಹೊನ್ನು ಎಲ್ಲಿಂದ ಕೊಡಬೇಕು? [illegible] ಬಹುಪ್ರಯಾಸದಿಂದ [illegible]

ದಿವಸದ ಅವಧಿಯನ್ನು ಕೊಟ್ಟಿರುವದಕ್ಕಾಗಿ ಆ ಮುನಿಯು ಒಂದು ಪಡೆದಿದ್ದರಿಂದ ಆತನು ಮತ್ತಿಷ್ಟು ಚಿಂತೆಗೊಳಗಾದನು. ಈ ಪ್ರಸಂಗದಲ್ಲಿ ರಾಜನು ಎಷ್ಟು ಸಹಜವಾಗಿ ಸಾಲ ತೀರಿಸುವುದನ್ನು ಒಪ್ಪಿಕೊಂಡನೆಂಬುದನ್ನು ಕಂಡುಕೊಳ್ಳಬಹುದು. ವಿಶ್ವಾಮಿತ್ರನು ರಾಜನ ಈ ತರದ ಸರಳ ಸ್ವಭಾವದ ಲಾಭವನ್ನು ಸ್ವಾರ್ಥಿಯಾಗಿ ಪಡೆದನು. ರಾಜನು ವಿಶ್ವಾಮಿತ್ರನು ಬೇಡಿದ ಒಳೆಯಲ್ಲಿ ಪೂರ್ತಿಯಾಗಿ ಬದ್ಧನು. ದಕ್ಷಿಣೆಯನ್ನು ರಾಜನಿಂದ ಪಡೆಯುವದಕ್ಕಾಗಿ ಆತನು 'ನಕ್ಷತ್ರಕ' ನೆಂಬ ಕುಪ್ರಸಿದ್ಧ ಶಿಷ್ಯೋತ್ತಮನನ್ನು ನೇಮಿಸಿದನು. ಆತನು ದುಷ್ಟತನದಲ್ಲಿ ತನ್ನ ಗುರುವಿಗಿಂತ ಒಂದು ಹೆಜ್ಜೆ ಮುಂದೆಯೇ ಇದ್ದನು. ರಾಜನು ದುಷ್ಟನಾದ ನಕ್ಷತ್ರಕನಿಂದ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಹರಿಶ್ಚಂದ್ರನು ಅಡವಿಯಲ್ಲಿ ಆತನ ಕುತಂತ್ರದಿಂದ ದಾರಿ ತಪ್ಪಿದನು. ಹಸಿವೆ ನೀರಡಿಕೆಗಳಿಂದ ಬಳಲಿದನು.. ವಿಶ್ವಾಮಿತ್ರನು ದಾರಿಯಲ್ಲಿ ನಿರ್ಮಿಸಿದ ಉರಿಯುಬಾಧೆಯಿಂದ ಬಳಲಿ ಬೆಂಡಾದನು. ಆದರೆ ತನ್ನ ಮನಸ್ಸಿನ ನಿರ್ಧಾರವನ್ನು ಬಿಡಲಿಲ್ಲ. ಎಲ್ಲ ತೊಂದರೆಗಳನ್ನು ಶಾಂತರೀತಿಯಿಂದಲೇ ಸಹಿಸಿಕೊಂಡನು. ತನ್ನ ಸತಿ, ಪುತ್ರ, ಮಂತ್ರಿಯನ್ನು ಸಮಾಧಾನಗೊಳಿಸಿದನು.

ವಿಶ್ವಾಮಿತ್ರನಿಗೆ ದಕ್ಷಿಣೆಕೊಡುವ ದಿನವು ಸಮೀಪಕ್ಕೆ ಬಂದುದರಿಂದ ರಾಜನಿಗೆ ಅಷ್ಟುದೊಡ್ಡ ಮೊತ್ತವನ್ನು ಹೇಗೆ ಕೊಡಬೇಕೆಂಬುದರ ಬಗ್ಗೆ ದೊಡ್ಡ ಚಿಂತೆಯಾಯಿತು. ಸರ್ವಸ್ವವನ್ನು ಕಳೆದುಕೊಂಡ ಆತನಲ್ಲಿ ಏನು ಇರಬೇಕು? ಕೊನೆಗೆ ವಿಚಾರಮಾಡಿ ತನ್ನ ಸತಿಯ ಇಚ್ಛೆಯಂತೆ ಅವಳನ್ನು ಹಾಗೂ ಮಗನನ್ನು ಮಾರಿ ಹಣವನ್ನು ಮುಟ್ಟಿಸಬೇಕೆಂದು ನಿಶ್ಚಯಿಸಿ, ಅವರಿಬ್ಬರನ್ನು ಕೂಡಿಕೊಂಡು ಕಾಶೀನಗರಿಯ ಓಣಿಗಳಲ್ಲಿ ತಿರುಗಾಡಿ ತನ್ನ ಉದ್ದೇಶವನ್ನು ಎಲ್ಲರಿಗೆ ತಿಳಿಸಿ, ಅವರಿಬ್ಬರನ್ನು ಒಬ್ಬ ಬ್ರಾಹ್ಮಣನಿಗೆ ದಾನಮಾಡಿದನು. ಆದರೆ ದುರ್ದೈವದಿಂದ ಅವರಿಂದ ದಕ್ಷಿಣೆಗೆ ಬೇಕಾಗುವಷ್ಟು ಹಣ ದೊರೆಯಲಿಲ್ಲ. ತನ್ನ ಸತಿ,ಸುತರನ್ನು ಮಾರುವ ಪ್ರಸಂಗದಲ್ಲಿ ಆತನ ಮನಸ್ಸಿನ ಸ್ಥಿತಿಯು ಕರುಣಾಜನಕವಾಗಿತ್ತು. ಆದರೆ ಸತ್ಯಸಂಧನಾದ ಆತನಿಗೆ ಬೇರೆ ವಿಧಿ ಇರಲಿಲ್ಲ. ನಕ್ಷತ್ರಕನ ಕಾಟದಿಂದ ತಾನು ವೀರಬಾಹುಕನೆಂಬ ಚಾಂಡಾಲನಿಗೆ ಮಾರಿಕೊಂಡು ಮುನಿಯ ಋಣದಿಂದ ಮುಕ್ತನಾದನು. ಹೀಗೆ ಹರಿಶ್ಚಂದ್ರನು ತನ್ನ ಸತ್ಯವನ್ನು ಕಾಪಾಡಿಕೊಳ್ಳುವದಕ್ಕಾಗಿ ತನ್ನನ್ನೇ ಮಾರಿಕೊಂಡು ಸಾಲವನ್ನು ತೀರಿಸಿ ಧನ್ಯನಾದನು. ರಾಘವಾಂಕನು ಈ ಪ್ರಸಂಗವನ್ನು ಕರುಣಾರಸ ಉಕ್ಕಿ ಬರುವಂತೆ ಚಿತ್ರಿಸಿದ್ದಾನೆ.

ಹರಿಶ್ಚಂದ್ರನ ದೈವವು ಆತನನ್ನು ಕೇವಲ ಚಾಂಡಾಲ ಸೇವಕನನ್ನಾಗಿ ಮಾಡಿ ಸ್ಮಶಾನದಲ್ಲಿ ಸುಮ್ಮನೆ ಇರಗೊಡಲಿಲ್ಲ. ಹೀಗೆ ಮಾಡಿದುದರಿಂದ ವಿಶ್ವಾಮಿತ್ರನಿಗೆ ಹೇಗೆ ಸಮಾಧಾನವಾಗಬೇಕು? ರಾಜನ ದುರ್ದೈವವು ಇನ್ನೂ ಮುಗಿದಿರಲಿಲ್ಲ. ತನ್ನ ಮಗನು ಮೃತಹೊಂದಿ, ತನ್ನ ಪತ್ನಿಯು ಕೈಯಿಂದಲೇ ಹೊತ್ತುಕೊಂಡು ಸ್ಮಶಾನಕ್ಕೆ ದಹನ ಕಾರ್ಯಕ್ಕಾಗಿ ಬಂದ ದುರ್ಧರ ಪ್ರಸಂಗವನ್ನು ಅವನಿಂದ 'ಮಸಣವಾಡಿಗ' ಕೊಡದೆ ಲಗದಂತಹ. ಅಸಹಾಯ ಸ್ಥಿತಿಯನ್ನು ಕಂಡು ಸುಮ್ಮನೆ ನೋಡಿದನು. ಆದರೆ ಹೆಂಡತಿ

ಮಕ್ಕಳೆಂಬ ಮೋಹಪರವಶನಾಗಿ ತನ್ನ ಕರ್ತವ್ಯವನ್ನು ಮರೆಯಲಿಲ್ಲ. ಸ್ಥಿರಮನಸ್ಸು ಮಾಡಿಕೊಂಡು ಶ್ಮಶಾನದ ಸುಂಕವು ಆಕೆಯು ಕಡೆಯಿಂದ ಬರುವವರೆಗೆ ತನ್ನ ಮಗನ ಉತ್ತರ ಕ್ರಿಯೆಯನ್ನು ತಡೆದನು. ಇಂಥ ಅತ್ಯಂತ ದಾರುಣ ಪ್ರಸಂಗದಲ್ಲಿ ತನ್ನ ಮನಸ್ಸಿನ ತೂಕವನ್ನು ಕಾಯ್ದುಕೊಂಡ ಪ್ರಸಂಗವನ್ನು ನೆನೆದರೆ ಆತನು ಎಂಥಹ ಧೀರ ಪ್ರಕೃತಿಯವನೂ, ದೃಢಸ್ವಭಾವದವನೂ, ಆಗಿದ್ದನೆಂಬುದು ತಿಳಿದು ಬರುವದು.

ವಿಶ್ವಾಮಿತ್ರನಿಂದ ಪ್ರೇರಿತವಾದ ದೈವವು ಇನ್ನೂ ತನ್ನ ಆಟವನ್ನು ಮುಂದುವರಿಸಿತು. ಚಂದ್ರಮತಿಯು ಮನೆಗೆಹೋಗಿ ಸ್ಮಶಾನದ ಸುಂಕವನ್ನು ತನ್ನ ಒಡೆಯನಿಂದ ಕೇಳಿ ತರಲು ಹೋದಾಗ ಅವಳ ಮೇಲೆ ನಗರದ ರಾಜಪುತ್ರನ ಕೊಲೆ ಮಾಡಿದ ಅಪವಾದವು ಬಂದಿತು. ನಿರಪರಾಧಿಯಾದ ಅವಳನ್ನು ನಗರದ ರಾಜನು ಹೆಚ್ಚು ವಿಚಾರಣೆ ಮಾಡದೆ ವಧಿಸುವ ಆಜ್ಞೆಕೊಟ್ಟನು. ಚಾಂಡಾಲನು ಈ ಕಾರ್ಯವನ್ನು ಹರಿಶ್ಚಂದ್ರನಿಗೆ ಒಪ್ಪಿಸಿದನು. ಹರಿಶ್ಚಂದ್ರನಿಗೆ ತನ್ನ ಸತಿಯನ್ನೇ ವಧಿಸುವ ದುಸ್ತರ ಪ್ರಸಂಗ ಬಂದುದನ್ನು ಕಂಡು ಮರುಗಿದನು. ಆದರೆ ಆತನು ಕರ್ತವ್ಯದಕ್ಷನಾದುದರಿಂದ ಒಡೆಯನ ಅಪ್ಪಣೆಯನ್ನು ಶಿರಸಾವಹಿಸಿ ತನ್ನ ಕಾರ್ಯವನ್ನು ನೆರವೇರಿಸಲು ಸಿದ್ಧನಾದನು. ವಿಶ್ವಾಮಿತ್ರನು ಇಂಥ ಪ್ರಸಂಗದಲ್ಲಿಯೂ ಹರಿಶ್ಚಂದ್ರನ ಸತ್ಯದ ಪರೀಕ್ಷೆಯನ್ನು ನಿಲ್ಲಿಸಲಿಲ್ಲ. ತನ್ನ ಕನ್ನಿಕೆಯನ್ನು ಮದುವೆಯಾದರೆ ತಾನು ಕೆಗೆದುಕೊಂಡ ರಾಜ್ಯವನ್ನು ತಿರುಗಿ ಒಪ್ಪಿಸುತ್ತೇನೆಂದೂ, ಹಾಗೂ ಈ ಅವಸ್ಥೆಯಿಂದ ಬಿಡುಗಡೆ ಮಾಡುತ್ತೇನೆಂದೂ ನುಡಿದನು. ಎಂತಹ ಪ್ರಸಂಗದಲ್ಲಿ ಎಂತಹ ಮಾತುಗಳು? ಎಲ್ಲವನ್ನು ಕಳೆದುಕೊಂಡು ತನ್ನ ಪತ್ನಿಯನ್ನು ತನ್ನ ಕೈಯಿಂದಲೇ ವಧಿಸುವ ಪ್ರಸಂಗತಂದ ವಿಶ್ವಾಮಿತ್ರನ ಈ ಮಾತುಗಳನ್ನು ರಾಜನು ಕೇಳಬಹುದೆ? ಸತ್ಯದಿಂದ ಚ್ಯುತನಾಗಬಹುದೆ?

ರಾಜನು ವಿಶ್ವಾಮಿತ್ರನ ಮಾತುಗಳಿಗೆ ಮೋಹಗೊಳ್ಳಲಿಲ್ಲ. ತನ್ನ ಕಾರ್ಯವನ್ನು ನೆರವೇರಿಸಲು ಉದ್ಯುಕ್ತನಾದನು. ವಿಶ್ವಾಮಿತ್ರನು ರಾಜನ ದೃಢನಿಶ್ಚಯವನ್ನು ಕಂಡು ಹತಪ್ರಭನಾದನು. ಇನ್ನು ಎಲ್ಲಿಯವರೆಗೆ ಆತನು ತನ್ನಪರೀಕ್ಷೆಯನ್ನು ಮುಂದುವರಿಸಬೇಕು? ಹರಿಶ್ಚಂದ್ರನ ಸತ್ಯಕ್ಕೆ ಅವನು ಮನಸಾರೆ ಮೆಚ್ಚಿದನು. ಆತನ ಸತ್ಯಸಂಧತೆಯನ್ನು ಕಂಡು ಶಿವನೂ ಪ್ರತ್ಯಕ್ಷನಾದನು. ವಿಶ್ವಾಮಿತ್ರನ ತಂತ್ರದಿಂದ ಸತ್ತ ಕುಮಾರನನ್ನು ಬದುಕಿಸಿ ಸಕಲಸಾಮ್ರಾಜ್ಯವನ್ನು ಆತನಿಂದಲೇ ತಿರುಗಿ ಕೊಡಿಸಿದನು.

ರಾಘವಾಂಕನು ತನ್ನ ಓಜಸ್ವಿಯಾದ ಶೈಲಿಯಿಂದ ಹರಿಶ್ಚಂದ್ರನ ಚರಿತ್ರೆಯನ್ನು ಆತನ ಸ್ವಭಾವವನ್ನು ಎಲ್ಲಿಯೂ ಆತನ ಘನತೆಗೆಕುಂದುಬಾರದಂತೆ ಅತ್ಯಂತ ದಕ್ಷವಾಗಿ ಚಿತ್ರಿಸಿದ್ದಾನೆ.

ರಾಘವಾಂಕನ ಕೃತಿಯ ಮೂಲಕ ಹರಿಶ್ಚಂದ್ರನು ಕನ್ನಡ ಸಾಹಿತ್ಯದಲ್ಲಿ ಅಮರನಾದ ಸ್ಥಾನವನ್ನು ಪಡೆದಿದ್ದಾನೆ.

ಅಳಿಯ ದೇವರು

ಸಗರ ಕೃಷ್ಣಾಚಾರ್ಯ

ದೀಪಾವಳಿಯಲ್ಲಿ 'ಅಳಿಯತನ' ಮಾಡಿಸುವ ಪದ್ಧತಿ ಬಹುಕಾಲದಿಂದ ನಡೆದು ಬಂದಿದೆ. ಒಂದು ಕಾಲದಲ್ಲಿ ಅದು ಸಂಭ್ರಮದ ಹಬ್ಬವಾಗಿದ್ದರೆ ಈಗ ಅದು ತಿರುವು ಮುರುವು ಆಗಿದೆ. ಅಳಿಯದೇವರು ಕೌಶಿಕನನ್ನೂ ಮೀರಿಸತೊಡಗಿದ್ದಾರೆ. ಆದರೆ ಇಂಥ ಕಾಲದಲ್ಲೂ 'ಅಳಿಯದ' ಅಳಿಯಂದಿರು ಇನ್ನೂ ಇದ್ದಾರೆ. ಎಂದರೆ ಅಚ್ಚರಿಯೆನಿಸೀತು!

'ಏನೇ! ನವರಾತ್ರಿ ಬಂತು, ದೀಪ ಹಾಕೋಣವೆ?' ಎಂದು ವಾಸುದೇವಾಚಾರ್ಯರು ತಮ್ಮ ಪತ್ನಿಯನ್ನು ವಿಚಾರಿಸಿದರು.

'ಈಗೇಕೆ ದೀಪ ಹಾಕೋದ್ರಿ? ಇನ್ನೇನು ದೀಪಾವಳಿ ಬಂದೇ ಬಿಟ್ಟಿತಲ್ಲ! ಸರೋಜನ ಗಂಡನಿಗೆ ಈ ಸಲ ಕರೆಸಬೇಕಲ್ಲ!' ಎಂದು ಹಿಗ್ಗಿನಿಂದ ನುಡಿದರು ಲಕ್ಷ್ಮಮ್ಮ. ಅಳಿಯನ್ನ ಕರೆಸಿದರೆ ದೀಪಾವಳಿ ಸುಮ್ಮನೇ ಆಗ್ತದೇನೇ? ಇನ್ನೂ ಲಗ್ನದ ಕೈ ಆರಿಲ್ಲ.'

'ಹೇಗಾದ್ರೂ ಮಾಡಬೇಕ್ರಿ. ಈ ಸಮಯ ಮತ್ತೆ ಸಿಕ್ಕೀತೇ?'

ಅಲ್ಲ, ಮುಂದಿನವರ್ಷ ಕರೆಸಿದರಾಗೋದಿಲ್ಲೆ?'

'ಆಗಬಹುದಾಗಿತ್ತು. ಆದರೆ......................!'

'ಅಂದ್ರೆ!'

(ಸ್ವಲ್ಪ ತಡೆದು)...................'ಈಗಾಗಲೇ ಮೂರು ತಿಂಗಳಿಂದ ಕೇಳತಾ ಇದ್ದೀನಿ.

'ಆಗ ಸಂಭ್ರಮಾ ಇಷ್ಟರಲ್ಲೇ? ಅಂದಮೇಲೆ ಈ ಖರ್ಚು ಆ ಖರ್ಚು ಭಾರ ಆಗೋದಿಲ್ಲೇನೇ?'

'ಅದಾಗಲಿ ಬಿಡಿ. ಈ ಸಂಭ್ರಮಗಳೆಲ್ಲ ವರ್ಷಕ್ಕೊಂದು ಸಲ ಮಾಡಲಿಕ್ಕಾಗುತ್ತೇ?'

ನಿನಗೇನೋ ಸಂಭ್ರಮ ನಿಜ. ನನಗೆ.......................!'

ನಿಮಗೇನ್ರೀ.......................!'

'ದಿಗ್ಭ್ರಮೆ...............ಅಷ್ಟೆ!'

ನೀವು ಯಾವಾಗ ನೋಡಿದರೂ ಇದೇ ಹಾಡು ಹಾಡ್ತಾ ಇರ್ತೀರಿ. ಎಂದ ನೀವು ಮುಂದಹಾಸಬೇರಿ ಈ ಕಾರ್ಯಗಳನ್ನೆಲ್ಲಾ ಮಾಡಿದ್ದೀರಿ. ಕಮಲೂನ ಲಗ್ನ ಆದಾಗಲೂ ಹೀಗೇ ಆಯ್ತು. ಮಧ್ಯೆ ಸ್ವಲ್ಪ ನಾರದರ ಪ್ರವೇಶ ಆಯ್ತು. ಅಲ್ಲಿಂದ ದೀಪಾವಳಿ ಮರೆತೇ ಬಿಟ್ರಿ. ಏಳೋ ಎಂಟೋ ವರ್ಷಗಳ ತರುವಾಯ ಅವರೇ ನಮ್ಮನ್ನ ಹುಡುಕುತ್ತಾ ಬಂದಾಗ ದೀಪಾವಳಿ ಶಾಸ್ತ್ರ ಮುಗಿಸಿದಿರಿ. ಮಕ್ಕಳು ಮರಿಗಳು ಯಾರಿಗುಂಟು ಯಾರಿಗಿಲ್ಲ. ನಮ್ಮ ಕೋಮಲೇನೇ ನಾನು ಹೇಳತಾ ಕುಳಿತರೆ ಅವನ ಪಾಡ ಏನ್ ಕಾಣಬೇಕು ಈ ಭಂಡಾಟ!'

ಅದೆಲ್ಲಾ ನಿಜ. ಆದ್ರೆ, ಇವುಗಳಿಗೆಲ್ಲ ದೇವರು ಕೊಟ್ಟ್ರೆ ಮರೆತಿರಬೇಕು ನೋಡು'

'ಇನ್ನೇನು ಕೊಡಬೇಕು. ದೇವರು ನಿನಗೆ? ತಿಂಗಳಿಗೆ ನಾಲ್ಕುನೂರು ಸಂಬಳಾ ಬರ್ತದೆ. ಭೂಮಿಕಾಣೆಯೂ ಇದೆ. ಏನಾದರೂಮಾಡಿ ಸಾಲೋ ಶೂಲೋ ಮಾಡಿಕೊಂಡು ಈ ಕಾರ್ಯ ಜರುಗಿಸಬೇಕು.'

'ನೋಡು, ಬೆಲೆ ಗಗನಕ್ಕೇರಿದ ಈ ಕಾಲದಲ್ಲಿ ನಾಲ್ಕುನೂರು, ನಲವತ್ತು ರೂಪಾಯಿಗಳಿಗಿಂತಲೂ ಕನಿಷ್ಟ. ನೀನೇ ನೋಡುತ್ತೀಯಲ್ಲ! ತಿಂಗಳ ಕೊನೆಯಲ್ಲಿ ಕೈಗಡ ತರಬೇಕಾಗುತ್ತದೆ. ಒಂದನೇ ದಿನಾಂಕದಂದು ಬಂದ ಸಂಬಳವನ್ನು ಹಂಚಲು ಕುಳಿತರೆ ಯಾವುದಕ್ಕೂ ಸಾಲುವುದಿಲ್ಲ.'

'ನಮ್ಮ ಜೀವನಾನೇ ಹೀಗೆ ಹೋಯ್ತು! ನನಗೆಂದು ಎರಡು ಒಳ್ಳೇ ಸೀರೆ ಕೊಡಿಸಿದ್ದೀರಿ ನೀವು? ತೊಡಲಿಕ್ಕೆ ವರ್ಷಕ್ಕೆರಡು ಕುಪ್ಪಸಕೂಡ ಕೊಂಡಿಲ್ಲ ಸರಿಯಾಗಿ. ನಮ್ಮ ಮಕ್ಕಳಿಗೂ ಇದೇ ಪಾಡು ಅಂದರೇನು?'

'ಆಗಲೇ ಹೇಳಿದೆನಲ್ಲ. ಇದಕ್ಕೆಲ್ಲಾ ಪಡೆದು ಬಂದಿರಬೇಕು: ಅಂತ!'

'ನಾನು ಹೆಚ್ಚಿಗೆ ಹೇಳೋದಿಲ್ಲ. ನಾಲ್ಕು ಜನರಲ್ಲಿ ಮರ್ಯಾದೆ ಬೇಕಿದ್ದರೆ ಮಾಡಿ' ಇಲ್ಲದಿದ್ದರೆ ಬಿಡಿ. ಬೀಗರು, ಇಷ್ಟೇನೇ ಇವರ ಬಡಾಯಿ! ಎಂದು ಕೊಳ್ಳುತ್ತಾರೆ. ಅಳಿಯ ಬಿಗಿದುಕೊಳ್ಳುತ್ತಾನೆ.......... ಇದರಿಂದ ನಮ್ಮ ಮಗಳಿಗೇ ತೊಂದರೆ.......... !'

ಲಕ್ಷ್ಮಮ್ಮ ಒಳಗೆ ಹೋದರು. ವಾಸುದೇವಾಚಾರ್ಯರು ಹುಬ್ಬು ಗಂಟುಮಾಡಿಕೊಂಡು ಆಲೋಚನಾಮಗ್ನರಾದರು. ಹೆಂಡತಿಯ ಒಂದೊಂದು ಮಾತೂ ಶಲ್ಯದಂತೆ ಅವರ ಮನಸ್ಸನ್ನು ಭೇದಿಸುತ್ತಿತ್ತು. ಅವರಿಗೂ ದೀಪಾವಳಿ ಮಾಡಬಾರದೆಂದೇನೂ ಮನಸ್ಸಿನಲ್ಲಿರಲಿಲ್ಲ. ಆದರೆ ಹಿಂದಿನ ಸಾಲದಿಂದ ಮುಕ್ತರಾಗದೆ [illegible] ಹೇಗೆ ಧೈರ್ಯ ತಂದುಕೊಂಡು ಹೊಸ ಸಾಲಕ್ಕೆ ಕೈನೀಡಬಹುದಾಗಿತ್ತು. ಅದೇ ಇನ್ನೂ ಬೆಟ್ಟದಾಕಾರದಲ್ಲಿ ಬೆಳೆದು ಕುಳಿತಾಗ ಸಾಲಹುಟ್ಟುವ ಬಗೆಯಾದರೂ ಹೇಗೆ? ಒಂದು ವೇಳೆ ಹುಟ್ಟಿದರೂ ಅದನ್ನು ತೀರಿಸುವ ಬಗೆ? ಅಲ್ಲದೇ, ಅವರಿಗೆ ತಮ್ಮ ಸಂಸಾರವಿಲ್ಲವೆ? ಗಂಡುಮಕ್ಕಳ ವಿದ್ಯಾಭ್ಯಾಸವಿಲ್ಲವೆ? ಒಂದರ ಹಿಂದೊಂದು ಪ್ರಬುದ್ಧರಾಗಿ, ನಮ್ಮನ್ನೂ ಗಂಡನಮನೆಗೆ ಕಳಿಸುತ್ತೀರಾ? ಎಂದು ಅಂಗವಿನ್ಯಾಸದಿಂದಲೇ ಪ್ರಶ್ನಿಸುವ ಹೆಣ್ಣುಮಕ್ಕಳಿಲ್ಲವೆ? ಯಾವುದಕ್ಕೆಂದು ಎದೆಗೊಡಬೇಕು—ಅರ್ಧವಯಸ್ಸಾಗುವುದರೊಳಗಾಗಿಯೇ ಮುಪ್ಪಡರಿಜರ್ಜರಿತವಾದ ಆ ದೇಹ! ಅಂತೂ ನಿರಾಶೆಯ ಹಾಸಿಗೆಯಮೇಲೆ ವಿರಾಮ ಹೊಂದದೇ ಚಡಪಡಿಸುತ್ತಲಿದ್ದರು ಕಗ್ಗತ್ತಲೆಯಲ್ಲಿ ದಿಕ್ಕುತೋಚದ ದಾರಿಹೋಕನಂತೆ.

ವಾಸುದೇವಾಚಾರ್ಯರು ಚಿಕ್ಕಂದಿನಿಂದಲೂ ಸುಖಭೋಗಗಳಿಂದ [illegible]. ಸಾಲ-ಸೋಲ ಮಾಡಿಕೊಂಡರೂ ತಮ್ಮ ಅಂತಸ್ತನ್ನು ಕಾಪಾಡಿಕೊಳ್ಳುವವರಲ್ಲ.

ಇತ್ತೀಚಿತ್ತಲಾಗಿ ಋಣದ ಭಾರದಿಂದೂ ಕುಗ್ಗಿ ಹೋಗಿದ್ದರೂ ಯಾರಮುಂದೂ ತಮ್ಮ ದುಃಖ ತೋಡಿಕೊಂಡವರಲ್ಲ. ಯಾರಮುಂದೂ ಬಗ್ಗಿ ನಡೆದವರಲ್ಲ. ಇದೇ ಗಾಂಭೀರ್ಯ ಕೊನೆಯವರೆಗೂ ಉಳಿಸಿಕೊಂಡು ಹೋಗಬೇಕೆಂಬುದೇ ಅವರ ಬಯಕೆ. ಆದರೆ ಲಕ್ಷ್ಮಮ್ಮನಿಗೆ ಈ ಕಲ್ಪನೆ ಹೊಳೆಯದು. ಅವರಿಗೆ, 'ಇಂದಿಗೂ ತಮ್ಮ ಯಜಮಾನರು ಯಾರಿಂದಲೂ ಹೇಳಿಸಿಕೊಂಡಿಲ್ಲ. ಅಂದಮೇಲೆ ಎಲ್ಲಿ ಕೈಚಾಚಿದರೂ ಅವರ ಮರ್ಯಾದೆಗೆ ತಕ್ಕಂತೆ ಸಾಲ ಸಿಕ್ಕೇಸಿಕ್ಕುತ್ತದೆ' ಎಂಬುದು ಅವರ ತರ್ಕ. ಆದರೆ, "ಗಟ್ಟಿಟೊಳ್ಳಾಗಬಾರದು." ಎಂಬುದು ವಾಸುದೇವಾಚಾರ್ಯರ ಹವ್ಯಾಸ. ಅಂತೂ ಪರಸ್ಪರರ ವಿಚಾರಗಳಲ್ಲಿ ಹೊಂದಾಣಿಕೆ ಆಗದೇ ಇದ್ದುದರಿಂದಲೇ ಅವರಿಗೆ ಪೇಚಾಟಕ್ಕಿಟ್ಟುಕೊಂಡಿತ್ತು.

ಕೊನೆಗೆ ಲಕ್ಷ್ಮಮ್ಮನವರಿಗೇ ಗೆಲುವಾಯಿತು. ಈ ಸಲದ ನವರಾತ್ರಿಯ ಖರ್ಚು ಉಳಿಸಿಕೊಂಡು ಸಾಧ್ಯವಾದರೆ ದೀಪಾವಳಿಯಲ್ಲಿಯೇ ಪೀಠಹಾಕಿ ಅಳಿಯತನವನ್ನು ಮುಗಿಸಬೇಕೆಂದು ತೀರ್ಮಾನವಾಯಿತು. ಹೋದವರುಷವೇ ಒಂದು ಅಳಿಯತನ ಮುಗಿದಿತ್ತು. ಆಗ ಸ್ವಲ್ಪ ವಿರಸವಾದುದರ ನೆನಪು ಈಗಲೇ ನೆನಪಿಸಿತು. ಅವರಲ್ಲೂ ನೆರೆಯಮನೆಯ ಶ್ಯಾಮರಾಯರ ಅಳಿಯನ ಅಳಿಯತನವನ್ನು ಕಣ್ಣಾರೆ ಕಂಡಿದ್ದರು. ಶ್ಯಾಮರಾಯರು ಆಗ ಅಳಿಯನ ಕಾಲಮೇಲೆ ಬಿದ್ದು ಹೊರಳಾಡಿದರೂ ಆತನಿಗೆ ಕನಿಕರ ಬಂದಿದ್ದಿಲ್ಲ. ಕೌಶಿಕನ ರೂಪವನ್ನೇ ತಾಳಿದ್ದನಾತ. ಶ್ಯಾಮರಾಯರು ಸಿರಿವಂತರಾದುದರಿಂದ ಆತ ಬೇಡಿದುದನ್ನೆಲ್ಲ ನೀಡಿದರೂ ಇನ್ನೂ ಕಾಡುವುದು ಮುಗಿದಿರಲಿಲ್ಲ. ಕೊನೆಗೆ ಕಾರೊಂದನ್ನು ಕೊಡಿಸಲು ಹಟಹಿಡಿದಾಗ ಇದ್ದುದೆಲ್ಲವನ್ನೂ ಮಾರಬೇಕಾದ ಪ್ರಸಂಗ ಬಂದಿತ್ತು. ಅದನ್ನೆಲ್ಲಾ ನೆನಸಿಕೊಂಡು ಅಪ್ರತಿಭರಾಗುತ್ತಿದ್ದರು. 'ಶ್ಯಾಮರಾಯರು ಶ್ರೀಮಂತರು; ಏನಾದರೂ ಮಾಡಿದರು. ಇದ್ದುದರಲ್ಲಿಯೇ ಮುದ್ದಾಗಿ ಸಂಸಾರ ಸಾಗಿಸಿಕೊಂಡು ಹೋಗುವ ನನ್ನಗತಿ ಏನು? ಅಕಸ್ಮಾತ್ತಾಗಿ ಅಳಿಯ ಏತಕ್ಕಾದರೂ ಬಾಯಿ ಹಾಕಿದರೆ ನನ್ನಿಂದ ಕೊಡಿಸುವುದು ಸಾಧ್ಯವಿಲ್ಲ. ದೇವರೇ ನನ್ನಮೊರೆ ಕೇಳಬೇಕು. ಹೂವಕ್ಕೆ ಮಾರದ ಮರ್ಯಾದೆ ಹುಲ್ಲಿಗೆ ಮಾರುವಂತಾಗಬಾರದು!' ಎಂದು ಆಲೋಚಿಸುತ್ತಿದ್ದರು.

ಅಳಿಯತನವೆಂದಮೇಲೆ ಸುಮ್ಮನೆ ಇರಲಿಕ್ಕಾಗುತ್ತದೆಯೇ? ಅದಕ್ಕೆ ತಕ್ಕ ವ್ಯವಸ್ಥೆ ನಡೆಯಲೇಬೇಕಲ್ಲವೆ? ಅದರಲ್ಲೂ ಲಕ್ಷ್ಮಮ್ಮನವರ ವ್ಯವಸ್ಥೆ. ಅಂದಮೇಲೆ ಕೇಳಬೇಕೆ! ಅಥದಿಂದ ಇತಿಯವರೆಗೂ ಒಂದು ಉದ್ದವಾದ ಪಟ್ಟಿ ತಯಾರಾಯಿತು. ಆ ಪಟ್ಟಿ ನೋಡಿದರೇನೇ ತಲೆ ತಿರುಗಿ ಕಣ್ಣು ಬಿಸಮೊಡೆಯುವಂತಿತ್ತು. ವಾಸುದೇವಾಚಾರ್ಯರು ಅದನ್ನು ನೋಡಿ ದೀರ್ಘವಾಗಿ ಉಸಿರೆಳೆಯುತ್ತಾ, 'ನನ್ನ ಚಿನ್ನಾ! ಇಷ್ಟು ದೊಡ್ಡ ಪಟ್ಟಿಯನ್ನು ನೋಡಿ ಯಾರು ನಮಗೆ ಉದ್ದರಿಕೊಡಬೇಕು? ಅಂಗಡಿಯವ

ಕಾಲಿರಿಸುತ್ತಲೇ ಅವನ್ನು ಕಂಡ ಅಂಗಡಿಕಾರರು ದೂರದಿಂದಲೇ, 'ಶರಣು ಶರಣಾರ್ಥಿ' ಎಂದು ಬಿಡುತ್ತಾರೆ. ಸ್ವಲ್ಪ ಇನ್ನೊಂದುಸಲ ಅದರಮೇಲೆ ಕಣ್ಣಾಡಿಸಿ ನೋಡಿ ಕಡಿಮೆ ಮಾಡುವ ಕೆಲ ಅನವಶ್ಯಕ ಪದಾರ್ಥಗಳನ್ನಾದರೂ ಕಡಿಮೆ ಮಾಡು. 'ತುಪ್ಪಾರ ಒಂದು ಡಬ್ಬಬೇಕೇ? ಬೆಣ್ಣೆ ೧೦ ಕಿಲೋ ಏನು ಮಾಡುತ್ತೀ? ಅಳಿಯನನ್ನ ಅದರಲ್ಲೇ ಎರೆಯುತ್ತೀಯಾ? ಒಂದು ಕ್ವಿಂಟಲು ಅಕ್ಕಿ ಬಹಳಾಯ್ತು?

'ಹೌದ್ರೀ! ಸಾಮಾನು ಉಳಿದರೆ ಮುಂದೆ ಬರೋದಿಲ್ವೆ?

'ಅದೇಲ್ಲಾ ನಿಜ. ನಿನಗೆ ಇಷ್ಟು ಸಾಮಾನು ಕೊಡುವವರು ಯಾರು? ಏನೋ ಇದ್ದುದರಲ್ಲಿ ಮೂರು ನಾಲ್ಕು ದಿವಸ ಹಬ್ಬಮಾಡಿ 'ಅಳಿಯತನ, ಮುಗಿಯಿತೂ ಅಂತ ಅನ್ನಿಸಿಬಿಡೋಣ.

'ನಿಮ್ಮ ಕಣ್ಣು ಸಣ್ಣದೂ ಅಂದ್ರ ಮನಸ್ಸೂ ಅಷ್ಟೇ ಸಣ್ಣದು ನೋಡ್ರಿ ! ಊಟಕ್ಕೆ ಕುಳಿತಾಗ ಅದುಹಾಕು; ಇದುಹಾಕು; ಅಳಿಯನ ಸಂಗಡಗೆ ಓರಗೆಯವರನ್ನು ಉಪಾಹಾರಕ್ಕೆ ಕರೆಯುತ್ತೇನೆ. ಊಟಕ್ಕೆ ಎಬ್ಬಿಸುತ್ತೇನೆ. ಅಂದರೆ ಮಾತ್ರ ಆಗೋದಿಲ್ಲ ನೋಡ್ರಿ!'

'ಆಗಲಿ ಅಷ್ಟೇಮಾಡಿ ನನ್ನ ಮರ್ಯಾದೆ ಉಳಿಸು'.

'ಈ ಸಂಸಾರದಲ್ಲಿ ಸಾಲಗಾರರು ಮನೆಯವರೆಗೂ ಬರಬಾರದೂ ಅಂದರೆ ಹೇಗೆ? ಮನೆಯವರೆಗೂ ಬರಬೇಕು. ಕಾಡಿ ಬೇಡುತ್ತಿರಬೇಕು. ಬೈಗಳ ಸುರಿಮಳೆ ಆಗುತ್ತಿರಬೇಕು. ಮರ್ಯಾದೆ ಹಿಂಡಿ ಹಿಪ್ಪೆ ಆದರೇನೇ ಇಂಥ ಕೆಲಸ ನೆರವೇರೋದು! ನೆರೆಮನೆಯ ಭೀಮಾಚಾರ್ಯರನ್ನ ನೋಡೋದಿಲ್ಲವೆ? ಅವರು ಸಾಲದಲ್ಲಿ ಮುಳುಮುಳುಗಿ ಏಳುತ್ತಿದ್ದರೂ ಅವರ ಜೆಂಪಕ್ಕೆ ಸ್ಪೃಷ್ಟಾನ್ನ ತಿನ್ನುವುದನ್ನು ನಿಲ್ಲಿಸೋದಿಲ್ಲ.'

'ಹೌದು ದಿನನಿತ್ಯದ ಊಟಕ್ಕೇ ಸಾಲಮಾಡಿಕೊಂಡು ಹೊಲಗದ್ದೆಗಳನ್ನು ಮಾರಿಕೊಂಡರೆ ಉಪನಯನ, ಮದುವೆ ಮುಂತಾದ ಮಹಾಕಾರ್ಯಗಳಿಗೆ ಏನು ಮಾಡಬೇಕಂತೆ?'

'ಅದರ ಯೋಚನೆ ಅವರಿಗಿಲ್ಲೇನು?'

'ಆ ಯೋಚನೆ ಇದ್ದರೆ ಹೀಗೇಕೆ ಆಗುತ್ತಿತ್ತು. ಇದೇರೀತಿ ನಡೆಯುತ್ತಿದ್ದರೆ ಆದರೆ ಇದ್ದ ಮನೆಯೂ ಸಾಲಗಾರರ ಪಾಲಾಗುತ್ತದೆ.'

'ನನಗೇನು ಮಾಡಂತೀರಿ?'

'ಇನ್ನೇನೂ ಇಲ್ಲ. ಈ ಉದ್ದವಾದ ಪಟ್ಟಿಯನ್ನ ಸ್ವಲ್ಪ ಸಂಕೋಚಗೊಳಿಸು ಅಷ್ಟೆ!'

ಲಕ್ಷ್ಮಮ್ಮ ಒಟಗುಟ್ಟುತ್ತಲೇ ಅಡುಗೆಮನೆಯ ಕಡೆಗೆ ಮುಖ ತಿರುವಿದರು.

ವಾಸುದೇವಾಚಾರ್ಯರು 'ಶ್ರೀಹರಿ ನೀನೇ ಕಾಪಾಡು ತಂದೆ!' ಎಂದು ಉದ್ಗಾರ ತೆಗೆಯುತ್ತ ವಿರಾಮ ಕುರ್ಚಿಯಿಂದೆದ್ದು ಪಕ್ಕದಲ್ಲಿ ಹಾಸಿದ್ದ ಹಾಸಿನಮೇಲೆ ದಿಂಬಿಗೊರಗಿ ಕಾಲುಚಾಚಿ 'ಆsss' ಎಂದು ಆಕಳಿಸಿದರು. ಆ ಆಕಳಿಕೆಯಲ್ಲಿ ಚಿಂತಾವಾರಿಧಿಯ ಅಲೆಗಳು ಗಾಳಿಯಲ್ಲಿ ಪದರು ಪದರಾಗಿ ತೇಲಿ ವಾತಾವರಣದಲ್ಲಿ ಲೀನವಾದವು.

* * * * *

ಹಬ್ಬ ಸಮೀಪಿಸಿತು. ಅಳಿಯನಿಗೂ ಕಾಗದ ಹೋಗಿತ್ತು. ಇತ್ತ ಮನೆಯಲ್ಲಿ ಹಬ್ಬದ ಸಿದ್ಧತೆ ಭರದಿಂದ ನಡೆದಿತ್ತು. ತಿಂಡಿ–ತಿನಿಸುಗಳು ಸಿದ್ಧವಾಗತೊಡಗಿದ್ದುವು. ಬಂದವರಿಗೆಲ್ಲ ತಮ್ಮ ದೀಪಾವಳಿಯ ಸಂಭ್ರಮವಮದ್ದಿಗಳನ್ನೆಲ್ಲಾ ಹೇಳುವುದೇ ಲಕ್ಷ್ಮಿ ಮ್ಮನವರಿಗೊಂದು ಹಬ್ಬವಾಗಿತ್ತು. 'ಸೀತಮ್ಮ ನೋಡ್ರಿ, ಚಕ್ರೋಟಿ ಅಷ್ಟು ಇಷ್ಟು ಮಾಡಲಿಕ್ಕೆ ಆಗುತ್ತದೆಯೇ? ನಾಲ್ಕುಸೇರು ಮಾಡಿದ್ದೀನಿ. ಉಂಡಿ, ಅತ್ರಾಸ, ಗಿಲಗಂಚಿ ಕೋಡಬಳೆ ಮುಂತಾದ್ದನ್ನೆಲ್ಲ ಧಾರಾಳವಾಗಿಮಾಡಿದ್ದೀನಿ; ಅಳಿಯ ದೇವರು ಯಥೇಚ್ಛ ತಿಂದು ತೇಗಲಿ, ಅಂತ. ನಮ್ಮ ಯಜಮಾನರೂ ಒಂದು ಸಾವಿರ ರೂಪಾಯಿಗಳ ಸಾಹಿತ್ಯವನ್ನು ತಂದು ಹಾಕಿದ್ದಾರೆ. ಧನತ್ರಯೋದಶಿಯಿಂದ ಆರಂಭ, ಕೊನೆಯ ಪಂಚಮಿಯವರೆಗೂ ದಿನವೂ ಒಂದೊಂದು ಪಕ್ವಾನ್ನ ಮಾಡಬೇಕೂ ಅಂತಇಟ್ಟುಕೊಂಡಿದ್ದೀನಿ. ಏನೋ, ಇದ್ದುದರಲ್ಲೇ 'ಅಳಿಯತನ ಚೆನ್ನಾಗಿ ಆಯ್ತು,' ಅಂತ ಅನಿಸಬೇಕೂಂತ ಮಾಡಿದ್ದೀನಿ.'

ಇನ್ನೇನಾಗಬೇಕು.ಲಕ್ಷ್ಮಿಮ್ಮನವರೆ! ಎಂಟು ದಿವಸ ತುಪ್ಪದ ಕಾಲುವೆ ಹರಸಬೇಕಲ್ಲs! ನಿಮ್ಮ ಅಳಿಯದೇವರ ಕೈಜಿಡ್ಡು ಮುಂದಿನ ದೀಪಾವಳಿಗೇ ಹೋಗಬೇಕು. ಇಷ್ಟರಲ್ಲಿ ಬಡವರ ಒಂದು ಸಂಭ್ರಮದ ಮದುವೇನೇ ಆಗುತ್ತದಲ್ಲ, ಇನ್ನೇನು!

'ಈ ಬೆಲೆಯೇರಿದ ಕಾಲದಲ್ಲಿ ಒಂದುಸಾವಿರ ರೂಪಾಯಿಗಳ ಬೆಲೆ ಒಂದುನೂರು ರೂಪಾಯಿಗಳಿಗಿಳಿದಿದೆ. ಎಲ್ಲ ಪದಾರ್ಥಗಳೂ ಕೈ ಚೀಲದಲ್ಲೇ ಬರುವಂತಾಗಿದೆ.'

'ಏನೇ ಆಗಲಿ ಈ ಕಾಲದಲ್ಲಿ ಇಷ್ಟು ಪೆಚ್ಚ ಮಾಡುತ್ತಿದ್ದೀರಲ್ಲ, ನೀವೇ ಧೈರ್ಯ ಶಾಲಿಗಳು!'

ಇಂಥ ಮಾತುಗಳನ್ನು ಕೇಳಿ ಉಬ್ಬಿ ಆನಂದ ಪಡುವುದೇ ಲಕ್ಷ್ಮಮ್ಮನವರಿಗೊಂದು ಹಬ್ಬ.

ಅಷ್ಟರಲ್ಲಾಗಲೇ ದೀಪಾವಳಿ ಬಂದೇ ಬಿಟ್ಟಿತು. ಅಂದು ಸಂಜೆ ಅಳಿಯ ಮಗಳು ಬರತಕ್ಕವರು. ಗೋವಿಂದ, ಕೇಶವ, ನಾರಾಯಣ ಇವರಿಗೆ ಬೆಳಗಿನಿಂದಲೇ ಸಂಭ್ರಮ. ಓ! ಭಾವಯ್ಯ ಬರುತ್ತಾರೆ: ಅಕ್ಕ ಬರುತ್ತಾಳೆ: ಪಟಾಕಿ ಕೋವಿ ಬಾಂಬ್

ಸ್ಟ್ಯಾಂಡಿಗೆ! ಎಂದು. ಅಂದು ಅವರ ಕೂಗಾಟ, ಅಲೆದಾಟ ಸೂರ್ಯೋದಯದಿಂದಲೇ
ಆರಂಭವಾಗಿತ್ತು. ಮಧ್ಯಾಹ್ನದವರೆಗೆ ತಿರುಗಿ ತಿರುಗಿ ಬಿಸಿಲಹಣ್ಣು ತಿಂದು ಮೋರೆ
ಸಪ್ಪಗೆ ಮಾಡಿಕೊಂಡು ಬಂದದ್ದೂ ಆಯಿತು. ಸಂಜೆಯಲ್ಲಿ ಬಸ್ ಸ್ಟ್ಯಾಂಡಿಗೆ ಹೋಗು
ವ ಮೊದಲು ಆರಂಭವಾಯಿತು ತಕರಾರು! 'ನಮಗೆ ಹತ್ತು ರೂಪಾಯಿಯ ಪಟಾಕಿ
ಬೇಕು.' ಎಂದು ಒಬ್ಬ ಹಟಹಿಡಿದರೆ, ನನಗೆ ಹದಿನೈದು ರೂಪಾಯಿಗಳ ಆಟಂಬಾಂಬು
ಮದ್ದಿನಕುರಳಿ, ಬೇಕೆಂದು ಇನ್ನೊಬ್ಬ ಕೂಗತೊಡಗಿದ. 'ನಮಗೂ ಮತಾಪುಕಡ್ಡಿ,
ಹೂಬಾಣ, ಸುರ್-ಸುರ್ ಬತ್ತಿ ಬೇಕು.' ಎಂದು ಲಲಿತ ನೀರಜ ಕೇಳತೊಡಗಿದರು.
ಅಳಿಯನ ಪರಾಮರ್ಶಕ್ಕಾಗಿ ಎಂದು ಹತ್ತೆಂಟು ರೂಪಾಯಿ ಎಲ್ಲೋ ಕೈಗಡ ಕೇಳಿ
ತಂದಿದ್ದರು. ಅದನ್ನೆಲ್ಲ ಈ ಬಾಣ ಬಿರುಸುಗಳಿಗೆ ಕೊಟ್ಟರೆ ಮುಂದಿನ ಗತಿ! ಅಂತೂ,
'ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟಗುಟ್ಟುತ ಸಿಡಿಸಬೇಡಿರೊ!' ಎಂದು ಕೇಳಿ
ಕೊಂಡರೂ, ಈ ಒಪ್ಪದ ನೀತಿಯ ಮಾತುಗಳೆಲ್ಲ ತಟ್ಟನೆ ದಾರಿ ಹಿಡಿದುವು. ಕಾಡಿ
ಬೇಡಿದಮೇಲೆ ಸ್ವಲ್ಪ ಹಣ ಅವರ ಕೈಯಲ್ಲಿತ್ತು. 'ನಿಮ್ಮ ಭಾವ ಬರುವಾಗ ನಿಮ್ಮ
ಸಲುವಾಗಿ ಬಾಣಗಳನ್ನು ತರುತ್ತಾರೆ; ಈಗ ಇಷ್ಟೇ ಸಾಕು.' ಎಂದರು. ನಡುವೆಯೇ
ಲಕ್ಷ್ಮಮ್ಮ ಬಾಯಿಹಾಕಿ. 'ಅವರ ಸಲುವಾಗಿ ಕಾಯುತ್ತ ಕೂಡಬೇಕೇನು? ಹೊಸ
ದಾಗಿ ಬರತಕ್ಕವರು, ನಾಚಿಕೆ ಪಾಪ! ಅವರಾದರೂ ಹೇಗೆ ಒಮ್ಮೆಯೇ ಹುಡುಗರನ್ನು
ಮುಂದಕ್ಕೆ ಕರೆದುಕೊಟ್ಟಾರು? ನಾವು ತರುವಹಾಗೆ ತಂದಿರಬೇಕು. ಅವರಾಗಿ ಕೊಟ್ಟ
ರೆ ಹಾರಿಸಬೇಕು.' ಎಂದು ಇನ್ನೂ ಒಂದೆರಡು ರೂಪಾಯಿ ಪೆಟ್ಟಿಗೇ ಕೊಡಿಸಿದರು
ಲಕ್ಷ್ಮಮ್ಮ. ಆಗ ವಾಸುದೇವಾಚಾರ್ಯರಿಗೆ ಒಂದೊಂದು ದುಡ್ಡೂ ಒಂದೊಂದು ವರಹ
ದಷ್ಟು ಬೆಲೆಬಾಳುತ್ತಿತ್ತು. ಆದರೂ ಲಕ್ಷ್ಮಮ್ಮನವರ ಉತ್ಸಾಹ ಕುಗ್ಗಿಸಬಾರದೆಂದು
ತಮ್ಮ ಮನಸ್ಸಿಗೆ ಎಷ್ಟು ನೋವಾದರೂ ಸಹಿಸಿಕೊಂಡು ಮುಖದಮೇಲೆ ಸಂತೋಷದ
ಎಳನವಿಲನ್ನೇ ಕುಣಿಸುತ್ತಿದ್ದರು.

ಸಾಯಂಕಾಲದ ಆರುಗಂಟೆ. ಬಸ್ಸು ಬರುವ ಸಮಯ ಸಮೀಪಿಸಿತು. ಅವರ
ಮಕ್ಕಳೆಲ್ಲ ಬಸ್ ಸ್ಟ್ಯಾಂಡಿಗೆ ಸ್ವಾಗತಕ್ಕಾಗಿ ಹೋಗಿದ್ದರು. ವಾಸುದೇವಾಚಾರ್ಯರ
ಮುಖದ ಮೇಲೆ ಭಯದ ಕಾರ್ಮೋಡ ಗುಡುಗಿ, ಸಿಡಿಲು ಮಾಯವಾಗುತ್ತಿತ್ತು. 'ಅಳಿ
ಯತನ ಸುಖರೂಪ ಪಡಬೇಕು ಸ್ವಾಮಿ! ವಿರಸ ತಲೆದೋರಿ, ನಗುವವರ ಮುಂದೆ
ಎಡವಿ ಬಿದ್ದ ಹಾಗಾದರೆ ಇದ್ದ ಮರ್ಯಾದೆಗೂ ಕುಂದು.' ಎಂಬೀ ವಿಚಾರ ಮಂಥನ
ಮನೋಶರಧಿಯಲ್ಲಿ ನಡೆದಿತ್ತು. ಒಮ್ಮೊಮ್ಮೆ ಧೈರ್ಯ ತಂದುಕೊಂಡರೂ ಮರು ನಿಮಿಷ
ದಲ್ಲೇ ಅದು ಉಡುಗಿ ಹೋಗುತ್ತಿತ್ತು. ಇಡಿಯ ಆಯುಷ್ಯದಲ್ಲಿ ವಾಸುದೇವಾಚಾ
ರ್ಯರು ಗಳಿಸಿದ್ದು, 'ಮರ್ಯಾದೆಯೊಂದೇ. ಅದೂ ಮುಚ್ಚುಮರೆಯಾದರೆ ಅವರಿಗೆ ಇನ್ನಾವ
ಬಂಡವಾಳವೂ ಉಳಿಯುತ್ತಿರಲಿಲ್ಲ. ಮರ್ಯಾದೆಯಿಲ್ಲದ

ಯುಕ್ತವರಾಗಿದ್ದರು. ಲಕ್ಷ್ಮಮ್ಮನವರಿಗೆ ಅವರ ಇಂಗಿತ ಅರ್ಥವಾಗುತ್ತಿದ್ದಿಲ್ಲವೆಂದಲ್ಲ. ಅವರು ಭೋಗಜೀವಿಗಳು. ಉಣ್ಣಬೇಕು; ಉಡಬೇಕು; ತೊಡಬೇಕು; ಇದ್ದಷ್ಟು ಕಾಲ ಸೊಗಸಾದ ಜೀವನ ನಡೆಸಬೇಕು. ಒಟ್ಟಿನಲ್ಲಿ ಇನ್ನೊಬ್ಬರ ಮನೆಯಲ್ಲಿದ್ದುದು ತಮ್ಮ ಮನೆಯಲ್ಲಿ ಬೇಕು. ಇನ್ನೊಬ್ಬರು ಪಡುವ ಸೌಖ್ಯ ತಾವು ಪಟ್ಟು ಹೆಮ್ಮೆ ವ್ಯಕ್ತಪಡಿಸಬೇಕು: ಎಂಬುದು ಅವರ ಇಚ್ಛೆ. ಆದರೆ ವಾಸುದೇವಾಚಾರ್ಯರ ಸ್ವಭಾವ ಹಾಗಲ್ಲ. ಅವರು, ದೇವರು ಕೊಟ್ಟದ್ದರಲ್ಲಿಯೇ ಉಂಡು ಉಟ್ಟು ತೃಪ್ತಿ ಪಡೆಯತಕ್ಕವರು. ಇನ್ನೊಬ್ಬರಲ್ಲಿದ್ದದ್ದು ತಮ್ಮಲ್ಲಿ ಇಲ್ಲವಲ್ಲಾ' ಎಂದು ಎಂದೆಂದೂ ಪೇಚಾಡ ತಕ್ಕವರಲ್ಲ. 'ಕಾಲಮಾನಿಯಾದವರೂ ಸುಖಪಡುವ ಹವ್ಯಾಸ' ಅವರೆಂದಿಗೂ ತೋರಿಸುತ್ತಿರಲಿಲ್ಲ. ಚಿಕ್ಕಂದಿನಿಂದಲೂ ಅವರದು ತ್ಯಾಗ ಜೀವನ. ಸದಾ ಕಷ್ಟ ನಷ್ಟಗಳಲ್ಲೇ ಅವರು ಸುಖವನ್ನು ಕಾಣುತ್ತಿದ್ದರು. ಆಗಾಗ ವಾಸುದೇವಾಚಾರ್ಯರು, 'ನನ್ನ ನಿನ್ನ ಜಾತಕವನ್ನು ಯಾವ ಬುದ್ಧಿವಂತ ಕೂಡಿಸಿರಬೇಕು.' ಬ್ರಹ್ಮನಾದರೂ ಹೇಗೆ ನಮ್ಮಿಬ್ಬರನ್ನು ಗಂಟುಹಾಕಿದ.' ಎಂದು ವಿನೋದವಾಗಿ ಲಕ್ಷ್ಮಮ್ಮನವರಿಗೆ ಕೇಳುತ್ತಿದ್ದರು. ಅವರು ಅದಕ್ಕೆ ಉತ್ತರವಾಗಿ, 'ನನಗಾಗ ತಿಳಿಯುತ್ತಿರಲಿಲ್ಲ. ಇನ್ನು ನಾನು ಚಿಕ್ಕವಳಿದ್ದಾಗಲೇ ನನಗೆ ನಿಮ್ಮಿಂದ ಮಾಂಗಲ್ಯ ಕಟ್ಟಿಸಿದರು. ಇಂದಿನವರ ಹಾಗೆ ದೊಡ್ಡವಳಾದ ಮೇಲೆ ನನಗೂ ಮದುವೆಯಾಗಿದ್ದರೆ ನಿಮ್ಮನ್ನು ಖಂಡಿತ ಒಪ್ಪುತ್ತಿರಲಿಲ್ಲ.' ಎಂದು ಅಷ್ಟೇ ವಿನೋದಪೂರ್ಣವಾಗಿ ನುಡಿದು ಬಿಡುತ್ತಿದ್ದರು. ಅವರಿರ್ವರ ಸ್ವಭಾವ ಪೂರ್ವ ಪಶ್ಚಿಮದಂತಿದ್ದರೂ ಹೃದಯಮಾತ್ರ ಒಂದಾಗಿತ್ತು. ಪ್ರೇಮ ಪಾಶ ಇವರಿಬ್ಬರನ್ನೂ ದೃಢವಾಗಿ ಬಂಧಿಸಿತ್ತು. ಮನೆಯೆಂಬ ನಗೆಮಲ್ಲಿಗೆ ಸೂಸುತ್ತ ಓಡಾಡುವ ಮಕ್ಕಳೇ ಇದಕ್ಕೆ ತಕ್ಕ ಸಾಕ್ಷಿಯಾಗಿದ್ದುವು. ವಾಸುದೇವಾಚಾರ್ಯರು ಮಾತ್ರ ಸುಖದುಃಖಗಳ ಸಮ್ಮಿಶ್ರಣದಲ್ಲಿ ಪಾಕಗೊಳ್ಳುತ್ತ, ಸ್ಫುಟವಾದ ಚಿನ್ನವಾಗುತ್ತ ನಡೆದಿದ್ದರು. ಈ ಜೀವನ ಕರ್ಮಶಾಲೆ ಅವರಿಗೊಂದು ಅಧ್ಯಾತ್ಮದ ಸಾಧನ ಶಾಲೆಯಾಗಿತ್ತು. ಇದರಲ್ಲಿ ಜೀವ ವರಿತಪಿಸಿ, ಪರಿತಪಿಸಿ ಊರ್ಧ್ವಮುಖವಾಗುತ್ತ ನಡೆದಿತ್ತು. ನಿತ್ಯತೋಷಮುಖವಾಗಲೂ ಹವಣಿಸುತ್ತಿತ್ತು. ಏಕೆಂದರೆ, ಅಂಥ ನಿರುತ್ಸಾಹದಲ್ಲೂ ಎಳೆಯಮಕ್ಕಳ ಕೋಮಲನಗು ಮುಗ್ಧಸ್ವಭಾವ, ಅಪಾರ ಪ್ರೀತಿ ಅವರಲ್ಲಿ ಹೊಸ ಹುಮ್ಮಸ್ಸನ್ನು ಹುಟ್ಟಿಸಿದರೆ, ಬೆಳೆದ ಮಕ್ಕಳ 'ನಯವಿನಯ' ಸೌಜನ್ಯ, ಪಿತೃಭಕ್ತಿ ಮುಂತಾದುದು ನಿತ್ಯನೂತನ ಚೈತನ್ಯವನ್ನೊದಗಿಸಿತ್ತು. ಅರ್ಧಾಂಗಿಯ ವಾತ್ಸಲ್ಯ, ಸೇವಾಮನೋಭಾವವಂತೂ ಹೊಸದುಟ್ಟನ್ನೇ ತಂದುಕೊಟ್ಟು ಈ ಅಸಾರವಾದ ಸಂಸಾರದಲ್ಲೂ ಸ್ವರ್ಗಸುಖವನ್ನು ನಿರ್ಮಿಸಿತ್ತು. ಇವೆಲ್ಲದರ ಆಧಾರದಮೇಲೆ ವಾಸುದೇವಾಚಾರ್ಯರು ಬದುಕಿದ್ದರಷ್ಟೇ ಅಲ್ಲ, ಈ ಬದುಕನ್ನು ಸಾರ್ಥಕಗೊಳಿಸುತ್ತಲೂ ಇದ್ದರು.

ವಾಸುದೇವಾಚಾರ್ಯರು ಜಗತ್ತಿಗೇ [illegible]

ದರೂ ಲಕ್ಷ್ಮಮ್ಮ ಆಗಾಗ ಅವರಿಗೆ ಬುದ್ಧಿವಾದ ಹೇಳುತ್ತಿದ್ದರು. ಈಗಲೂ ಹತ್ತಿರಬಂದು, 'ನೋಡಿ, ನೀವು ಕವಿಗಳು. ಭಾವನಾ ಪ್ರಪಂಚದಲ್ಲಿದ್ದಾಗ ನಿಮ್ಮನ್ನು ನೀವೇ ಮರೆಯುತ್ತಿರುತ್ತೀರಿ. ಬಂದವರಿಗೆ ಮರ್ಯಾದೆ ತೋರಿಸುವುದರ ಎಚ್ಚರಿಕೆಯೇ ಇರುವುದಿಲ್ಲ. ಈಗಬರತಕ್ಕವರು 'ಅಳಿಯ ದೇವರು!' ಅವರಿಗೆ ಮರ್ಯಾದೆ ತೋರಿಸದೇ ಹೋದರೆ ಅವರು ಕೋಪಿಸಿಕೊಂಡಾರು. ಅವರು ಹೋಗುವವರೆಗೆ ಮಾತ್ರ..........'

'ನಿಜ ಪ್ರಪಂಚದಲ್ಲಿಯೇ ವಿಹರಿಸುತ್ತೇನೆ. ಚಿಂತಿಸಬೇಡ. ನಿನ್ನಾಣೆ ಗಿರಿಜಾಮಾನ್ಯ ನನಗೆ.' ಎಂದು ನಗುತ್ತಲೇ ನುಡಿದರು ಆಚಾರ್ಯರು.

ದ್ವಾದಶೀ ಸಾಯಂಕಾಲದವರೆಗೂ ಹುಡುಗರು ಬಸ್ ನಿಲ್ದಾಣಕ್ಕೆ ಎಡತಾಕಿದರು. ಭಾವಯ್ಯ ಬರಲಿಲ್ಲ. ತ್ರಯೋದಶಿ ಸಾಯಂಕಾಲ, ಅಂದೂ ಹುಡುಗರು ಬಸ್ ನಿಲ್ದಾಣಕ್ಕೆ ಹೋಗಿದ್ದರು. ೬ ಗಂಟೆಯ ಸಮಯ. ಹೊರಗಡೆ ರಿಕ್ಷಾದವನ ಹಾರ್ನ್ ಕೇಳಿಸಿತು. ಲಕ್ಷ್ಮಮ್ಮ ಬೆದರಿದ ಹರಿಣಿಯಂತೆ ಹೌಹಾರಿ ಒಳಹೊಕ್ಕರು. ವಾಸುದೇವಾಚಾರ್ಯರು ಮೈತುಂಬೆಲ್ಲ ಸ್ಮೃತಿ ತಂದುಕೊಂಡು, ಗಂಡರಿದರೂ ಬೆದರದ ಮದ್ದಾನೆಯಂತೆ ತೊನೆಯುತ್ತ ತಮ್ಮ ರೂಮಿನ ದ್ವಾರದತ್ತ ಧಾವಿಸಿದರು. ಮಕ್ಕಳೆಲ್ಲ ರಿಕ್ಷಾ ಇಳಿಯುತ್ತಲೇ, 'ಅಕ್ಕ ಬಂದಳು: ಭಾವ ಬಂದರು!' ಎನ್ನುತ್ತ ಮನೆಯೊಳಕ್ಕೆ ಒಂದೇ ಹಾರಿಕೆ ಹಾಕಿದರು. ಮಗಳು ಮುಗುಳು ನಗುತ್ತ ಮೊದಲು ಕಾಲಿರಿಸಿದಳು. ಬಿಸಿಲಿನ ಝಳದಿಂದ ಮುಖಬಾಡಿ ಕೆಂಪುಬಣ್ಣದ ಕಮಲದಂತೆ ಅದು ಅರಳಿತ್ತು. ಮಗಳು ನಗೆ ಹೊರಸೂಸುತ್ತ ತಂದೆಗೆ ಫಲಿತ ಕದಳಿಯ ಹಾಗೆ ಬಾಗಿ ನಮಸ್ಕರಿಸಿದಳು. ತಂದೆ ವಾತ್ಸಲ್ಯದಿಂದ, 'ಚೆನ್ನಾಗಿದ್ದೀಯಾ?' ಅಂದರು. ನಾಚಿಕೊಂಡು, 'ಚೆನ್ನಾಗಿಯೇ ಇದ್ದೇನೆ.' ಎನ್ನುತ್ತ ಮುಂದಕ್ಕೆ ಸಾಗಿದಳು. 'ಚೆನ್ನಾಗಿಯೇ ಇದ್ದೇನೆ.' ಎಂಬ ಅವಳ ಮಾತು ಧ್ವನಿಪೂರ್ಣವಾಗಿದ್ದರೂ ಮನಸ್ಸಿನಲ್ಲಿ ಬಗೆಹರಿಯದ ಹುಟ್ಟಿಸಲಿಲ್ಲ. ಅಷ್ಟರಲ್ಲಿ ಅಳಿಯ ದೇವರು ಮಹಾದ್ವಾರದೊಳಗೆ ಪ್ರವೇಶಿಸಿದರು. ಸುಂದರ ಆಕೃತಿ: ಬಂಗಾರದಂತ ಮೈಕಟ್ಟು: ವಿಶಾಲವಾದ ಹಣೆ: ಹಣೆಯ ಮೇಲೆ [illegible] ಹಾಗೆ ಎದ್ದು ಕಾಣುವ ಗೆರೆಗಳು. ಉಟ್ಟಿದ್ದು ಶುಭ್ರಧೋತರ. ತೊಟ್ಟಿದ್ದು ಒಂದು ಷರ್ಟು: ಅದು ಮನಸ್ಸಿನ ಪ್ರತೀಕವೇನೋ ಎನ್ನುವಂತಿತ್ತು. ವಾಸುದೇವಾಚಾರ್ಯರು ಬೆರಗುಗಣ್ಣುಗಳಿಂದ ಅವರನ್ನು ನಿರೀಕ್ಷಿಸಿದರು. ಅಡಿಯಿಂದ ಮುಡಿಯವರೆಗೂ ಪರೀಕ್ಷಿಸಿದರು. ಒಂದೇ ಸಮನೆ ಬಡಿದುಕೊಳ್ಳುತ್ತಿದ್ದ ಮನಸ್ಸು ಅನೇಕೋ [illegible] ಮಾಡಿತು. ಮುಖದ ಮೇಲೆ ಉಲ್ಲಾಸ ತಂದಿತು. ಅದು [illegible] ಹಾಗಿತ್ತು. [illegible]

ಚಾರಿಕವಾಗಿಯಾದರೂ, 'ಸೌಖ್ಯವಾಗಿಯೇ ಇದ್ದೇನೆ.' ಎನ್ನಲೇ ಬೇಕಾಯಿತು. ಮಗಳ, 'ಚೆನ್ನಾಗಿಯೇ ಇದ್ದೇನೆ.' ಎಂಬ ಮಾತನ್ನೂ, ತಮ್ಮ 'ಸೌಖ್ಯವಾಗಿಯೇ ಇದ್ದೇನೆ.' ಎಂಬ ಮಾತನ್ನೂ ಹೋಲಿಸಿನೋಡಿ ಇತ್ಯರ್ಥಕ್ಕೆ ಬರುವಷ್ಟು ವ್ಯವಧಾನ ಆಗ ಎಲ್ಲಿ ಇತ್ತು! ಅಳಿಯನನ್ನು ಒಳಕ್ಕೆ ಕರೆತಂದು, ವಿರಾಮ ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಹೇಳಿ ತಾವೊಂದು ಬೆತ್ತದ ಕುರ್ಚಿಯ ಮೇಲೆ ಮಂಡಿಸಿದರು. ಅಳಿಯ ದೇವರು ಅದೇಕೋ ಸಂಕೋಚ ಪಟ್ಟುಕೊಂಡು ಕೆಳಗೆ ಹಾಸಿದ ಹಾಸಿಗೆಯ ಮೇಲೆಯೇ ಕುಳಿತರು. ವಾಸುದೇವಾಚಾರ್ಯರಿಗೆ ಇದು ಅರ್ಥವಾಗಲಿಲ್ಲ. 'ಬಂದೊಡನೆಯೇ ಸಮ್ಮಾನನೆ ವಿರಸ ಆರಂಭವಾಯಿತೇ?' ಎಂದು ದಿಗಿಲುಗೊಂಡರು. ಪುನಃ ಕೈಜೋಡಿಸಿ 'ಮೇಲೆ ಕೂರಬೇಕು.' ಎಂದು ಪ್ರಾರ್ಥಿಸಿಕೊಂಡರು. ಲಕ್ಷ್ಮಿಯನ್ನು 'ತಾವು ಕಲಿಸಿದ ಪಾಠವನ್ನು ಯಜಮಾನರು ಚೆನ್ನಾಗಿಯೇ ಒಪ್ಪಿಸುತ್ತಿದ್ದಾರೆಂದು ದೂರದಿಂದಲೇ ನೋಡಿ ತೃಪ್ತಿಪಟ್ಟಿರಬೇಕು! ಅಳಿಯ ದೇವರು, 'ಇಲ್ಲೇ ಚೆನ್ನಾಗಿದೆ' ಎಂದಷ್ಟೇ ನುಡಿದು ಅಲ್ಲಿಯೇ ಕುಳಿತು ಬಿಟ್ಟರು. ವಾಸುದೇವಾಚಾರ್ಯರೂ ಅನಿವಾರ್ಯವಾಗಿ ಹಾಸುಗೆಯ ಮೇಲೆಯೇ ಬರಬೇಕಾಯಿತು.

ಹೊಸದಾಗಿ ಬಂದ ಅಳಿಯನನ್ನು ಔಪಚಾರಿಕವಾಗಿಯಾದರೂ ಮಾತನಾಡಿಸಬೇಕೇಬೇಕಲ್ಲ. ಸಂಕೋಚದಿಂದಲೇ ಮೊದಲು ಕುಶಲಪ್ರಶ್ನೆಯನ್ನೂ, ಆ ತರುವಾಯ ಅವರ ಮನೆಯ ಸಮಾಚಾರವನ್ನೂ, ಪ್ರವಾಸದ ಕಷ್ಟ ಸುಖಗಳನ್ನೂ ಕುರಿತು ಒಂದೆರಡು ಮಾತು ಕೇಳಿದರು. ಅವೆಲ್ಲಕ್ಕೂ ಅವರಿಂದ ಒಂದೊಂದೇ ಉತ್ತರ ಬಂತು. ಬಾಲಾಕ್ಷರದ ವಾಸುದೇವಾಚಾರ್ಯರು ಆ ಒಂದೊಂದು ಉತ್ತರವನ್ನು ಮಥಿಸಿ ವಿಮರ್ಶಿಸಿದರು. ಹೃದಯದ ಬಡಿತಕ್ಕೆ ಅದು ಸಾತ್ಮ್ಯವಾಯಿತೇ, ಅಪಥ್ಯವಾಯಿತೇ ಆಗ ಅರ್ಥವಾಗಲಿಲ್ಲ. ಅಂತೂ ಯಾವ ಹುತ್ತದಲ್ಲಿ ಯಾವ ಹಾವು ಅಡಗಿದೆಯೋ? ಎಂದು ಘುಸ್ ಎನ್ನುವುದೋ? ಇದೇ ದಿಗಿಲು ಆಚಾರ್ಯರಿಗೆ.

ಅಂತೂ ದೀಪಾವಳಿಯ ದಿವಸಗಳು ಒಂದೊಂದಾಗಿ ದಾಟಿದವು. ಭಾವ ಬಿದಿಗೆ ಬಂದಿತು. ಅಂದಿನ ಸಾಯಂಕಾಲವೇ ಅಳಿಯ ದೇವರು ಹೊರಡುವುದಾಗಿ ತಿಳಿಸಿದ್ದರು ತಮ್ಮ ಹೆಂಡತಿಯ ಮುಖಾಂತರ. ಲಕ್ಷ್ಮಮ್ಮನವರಿಗೆ ಉತ್ಸಾಹವೇ ಕುಂದಿದಂತಾಗಿತ್ತು ಅವರು ಪಂಚಮಿಯವರೆಗೂ ಅಳಿಯ ಇರಬಹುದೆಂದೂ, ಆ ವರೆಗೂ ಮಾಡದೇ ಉಳಿದ ಒಂದೊಂದು ಪಕ್ವಾನ್ನಗಳನ್ನು ಮಾಡಬೇಕೆಂದೂ ಹಂಚಿಕೆ ಹಾಕಿದ್ದರು. ಇನ್ನೂ ಸಗಡೆಯಾಟದ ಹಸಿವೂ ಹಿಂಗಿರಲಿಲ್ಲ ವಾಸುದೇವಾಚಾರ್ಯರಿಗೂ ಅದೇಕೋ ಅಳಿಯ ಇಷ್ಟು ಬೇಗ ಹೊರಡುವುದು ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. 'ಅಳಿಯ ದೇವರು ಇಂದೇ ಪ್ರಯಾಣ ಬೆಳೆಸಿದರೆ ಮುಂದಾಗುವ ವಿಘ್ನವೆಲ್ಲಿ ಉಳಿದೀತು! ಎಂಬ ವಿಚಾರಕ್ಕಾಗಿ ಒಂದೆರಡು ದಿನ ಮುಂದಕ್ಕೆ [illegible] [illegible] [illegible] ಇಂದೇ

ಆಮಂತ್ರಿಸಿ ಪಂಕ್ತಿಗುವುದಲ್ಲ s!' ಎಂಬ ಭಯದಿಂದಲೇ ಇರಬೇಕು. ಆದರೂ ಅಳಿಯನ ಸಂಕೋಚ ಸ್ವಭಾವ, ಮತ್ತು ದೃಢ ನಿರ್ಧಾರದ ಮುಂದೆ ಅವರ ಆಟವೂ ನಡೆಯಲಿಲ್ಲ. ಏನೇ ಆಗಲಿ, ಇನ್ನೊಮ್ಮೆ ಪ್ರಾರ್ಥಿಸಿಕೊಂಡರಾಯಿತು. ಎಂದು ವಾಸುದೇವಾಚಾರ್ಯರು ಹೊರಗಿನಿಂದ ಬಂದವರೇ ತಮ್ಮ ಕೋಣೆಯ ಕಡೆಗೆ ತೆರಳಿದರು. ಸರೂ ತನ್ನ ಗಂಡನೊಡನೆ ಮಾತಾಡುತ್ತಿರುವಂತೆ ಕೇಳಿಸಿತು. ತಾವು ಒಳಗೆ ಹೋದರೆ ಅಳಿಯ ಸಂಕೋಚ ಪಟ್ಟುಕೊಳ್ಳಬಹುದೇನೋ, ಎಂದು ಸ್ವಲ್ಪಕಾಲ ಅಲ್ಲಿಯೇ ನಿಂತರು. ಸರೂ ತನ್ನ ಗಂಡನಿಗೆ ಈ ರೀತಿ ಹೇಳುತ್ತಿದ್ದಳು.

'ನೋಡ್ರಿ, ನಮ್ಮ ತಂದೆ ನಿಮ್ಮ ಸಲುವಾಗಿ ಜರಿಬಾಳುವ ಬಟ್ಟೆಬರೆಯ ಜೊತೆಯಲ್ಲಿ ಒಂದು ಬಂಗಾರದ ಉಂಗುರವನ್ನೂ ತಂದಿದ್ದಾರೆ. ಪಂಚಮೀ ದಿವಸವೇ ಆ ಉಡುಗೊರೆಯನ್ನಿತ್ತು ಬೀಳ್ಕೊಡಬೇಕೆಂದಿದ್ದಾರೆ. ನೀವು ಇಂದೇ ಹೊರಡುವುದು ಯಾರ ಮನಸ್ಸಿಗೂ ಬಂದಿಲ್ಲ.

'ನೋಡು, ಈ ಕಾಲದಲ್ಲಿ ವೃಥಾ ಭಾರವಾಗಬಾರದು. ಹಬ್ಬದ ಕೆಲಸ ಮುಗಿಯಿತು. ಇನ್ನು ಹೆಚ್ಚು ದಿವಸ ಇದ್ದು ತಂದಿಟ್ಟ ಪದಾರ್ಥಗಳನ್ನೆಲ್ಲಾ ಕರಗಿಸುವುದರಲ್ಲಿ ಏನು ಅರ್ಥವಿದೆ?

'ಹಬ್ಬ ಇರೋದು ಪಂಚಮೀವರೆಗೆ. ನೀವು ಆ ಸಂಪ್ರದಾಯ ಮುರಿಯ ಬೇಕಂತೀರೇನು?'

'ಹೌದು ಒಂದಾನೊಂದು ಕಾಲಕ್ಕೆ ಆ ಸಂಪ್ರದಾಯ ಇತ್ತು. ಈಗ ಎಲ್ಲಾ ತಲೆಕೆಳಗಾಗಿದೆ.

'ನಾಳೆ ಅಕ್ಕನ ತದಿಗೆ ಅಲ್ಲವೆ? ನಾಳೆ ಒಂದುದಿನವಾದರೂ ಇದ್ದರೆ ಆಗದೆ?,

'ನೋಡು, ಅದು ನಿನ್ನ ಹಬ್ಬ. ನೀನಿರುವೆಯಲ್ಲ! ಆ ಹಬ್ಬ ನಾಗಲಿ. ಅವರೇನಾದರೂ ನಾನು ನಿನ್ನನ್ನು ಜೊತೆಯಲ್ಲೇ ಕರೆದುಕೊಂಡು ಹೋಗುವೆನೆಂದು ಭಾವಿಸಿದ್ದಾರೇನು?'

'ಮೊದಲು ಹಾಗೇ ಭಾವಿಸಿದ್ದರು. ನಾನು ತಿಳಿಸಿದ ಮೇಲೆ ಸುಮ್ಮನಿರಬೇಕಾಯಿತು.'

'ಮಾವನವರು ನನ್ನ ಸಲುವಾಗಿ ಬಂಗಾರದ ಉಂಗುರವನ್ನೇಕೆ ಮಾಡಿಸಿದರು? ನಾನೇನು ಬೇಡಿದ್ದೆನೆ. ದೊಡ್ಡ ಕುಟುಂಬವನ್ನು ಸಾಗಿಸಿಕೊಂಡು ಹೋಗುವುದೇ ಈ ಕಾಲದಲ್ಲಿ ದುರ್ಭರವಾದಾಗ ಈ ಕಾಣಿಕೆಗಾಗಿ ಇವರೇಕೆ ಕಷ್ಟಪಟ್ಟರು?'

'ನೀವಾದರೆ [illegible] ಇದ್ದರೂ ಕೇಳಬೇಕಿತ್ತೆ?'

'ನೀವಾದರೆ [illegible] ಅಲ್ಲ. ಬಂದು ಅಕ್ಕ, ಭಾವಂದಿರು ಅಕ್ಕರೆ [illegible] ವನ್ನು [illegible] ... ... ಎಷ್ಟರ [illegible]

ಯನ್ನು ಬೆಳಗುವುದಕ್ಕಾಗಿ!..................ನನ್ನ ಸಲುವಾಗಿ ಅವರು ಇಷ್ಟೆಲ್ಲ ವೆಚ್ಚ ಮಾಡಬೇಕಾಗಿರಲಿಲ್ಲ. ಈಗಾಗಲೇ ಉಪಾಹಾರ, ಊಟ, ತಿಂಡಿ, ತೀರ್ಥ ಎಂದು ಎಷ್ಟೋ ವೆಚ್ಚಮಾಡಿಕೊಂಡಿದ್ದಾರೆ. ಅಂಪಮೇಲೆ ಉಂಗುರ ಕೊಡುವುದನ್ನು ನಿಲ್ಲಿಸಿದರೆ ಆಗದೆ?

‘ನೀವು ಬಾಯಿ ಬಿಚ್ಚಿ ಏನನ್ನೂ ಕೇಳವವರು. ಎಂದೇ ನಮ್ಮ ತಂದೆ ಸ್ವಸಂತೋಷದಿಂದ ಅದನ್ನು ಕಾಣಿಕೆಯಾಗಿ ಕೊಡಲು ನಿರ್ಧರಿಸಿದ್ದಾರೆ. ಅವರೇ ಅಂದರು.

‘ನಾನೇನು ಕೊಡುತ್ತಿರುವೆನಮ್ಮ. ಸಿಂಧುವಿನಲ್ಲಿಯ ಬಿಂದುವಿನಷ್ಟೂ ಅಲ್ಲ ಅದು’ ಎಂದು.

‘ನೀನೇನಾದರೂ ಒತ್ತಾಯ ಪಡಿಸಿರಬಹುದು.’

‘ನಾನೇಕೆ ಒತ್ತಾಯ ಪಡಿಸಲಿ?...............ನಿಮಗೆ ಬೇಡವಾಗಿದ್ದರೆ ಬಿಡಿ. ನಾನು ತೆಗೆದುಕೊಳ್ಳುವೆ.’

‘ನೀನು ಬಲು ಆಶೆಬುರುಕಿ ನೋಡು! ಈ ಕಾಲದಲ್ಲಿ ಆ ಬಿಂದುವೇ ಸಿಂಧುವಿನಷ್ಟು ದೊಡ್ಡದಾಗಿದೆ. ಅದುವೇ ಪರ್ವತದಷ್ಟು ಬೃಹತ್ತಾಗಿದೆ.’

ಈ ಮಾತನ್ನು ಕೇಳುತ್ತಿರುವಾಗ ಆಚ್ಯಾರರು ಅಚ್ಚರಿಗೊಂಡರಷ್ಟೇ ಅಲ್ಲ. ತಾವು ಈ ಭೂಮಿಯ ಮೇಲೆಯೇ ನಿಂತು, ಈ ಕಾಲದ ತರುಣನೊಬ್ಬನ ಮುಖದಿಂದ ಈ ಮಾತು ಕೇಳುತ್ತಿದ್ದೇನೆಯೇ? ಎಂದು ಅಚ್ಚರಿಗೊಂಡರು. ಸ್ವಲ್ಪ ಎಚ್ಚರ ತಂದುಕೊಂಡು ‘ಈ ಭೂಮಿಯ ಗರ್ಭದಲ್ಲಿ ಕಳಸೆಯೂ ಹುದುಗಿದಂತೆ, ರನ್ನವೂ ಏಕೆ ಅಡಗಿರಬಾರದು?’ ಎಂದುಕೊಂಡರು.

ಸರೂ ಮತ್ತೆ ಗಂಡನನ್ನು ಕುರಿತು, ‘ನೀವು ನಮ್ಮ ತಂದೆಯ ಜೊತೆ ಹೆಚ್ಚಿಗೆ ಮಾತನ್ನೇ ಆಡುತ್ತಿರಲಿಲ್ಲವಲ್ಲ? ಅಂಜಿಕೊಂಡಿರೇನು? ’ ಎಂದು ಹಾಸ್ಯ ಮಾಡಿದಳು.

‘ಹೌದು, ದೊಡ್ಡವರನ್ನು ಕಂಡು ಅಂಜಲೇಬೇಕು. ಅವರ ಯೋಗ್ಯತೆ ನಮಗೆ ಬರುತ್ತದೆಂತು? ಎಷ್ಟಾದರೂ ಅವರು ನಮಗಿಂತ ಎಷ್ಟೋ ವಸಂತ ಋತುಗಳನ್ನೂ ಶಿಶಿರ ಋತುಗಳನ್ನೂ ಕಂಡವರು. ‘ಮಾವ’ ಹಾಗೆ ಮಾಗಿದವರು. ಅವರ ಮುಂದೆ ನಮ್ಮ ದೊಡ್ಡಸ್ತಿಕೆ ವ್ಯಕ್ತಗೊಳಿಸುವುದು, ನಮ್ಮ ಗೊಡ್ಡಸ್ತಿಕೆಯನ್ನು ಬೈಲಿಗಿಟ್ಟಂತೆಯೆ!...............ಅವರು ಏನೂ ಕೊಡದಿದ್ದರೂ ನಾನು ಸಂತೋಷವಾಗಿಯೇ ಇದ್ದೇನೆಂದು ತಿಳಿಸು. ನಮಗೆ ಅವರ ಆಶೀರ್ವಾದ ಸಾಕು ನೋಡು! ಅವರು ನಿನ್ನಂತಹ ಬಂಗಾರದಂತಹ ಮಗಳನ್ನು ನನ್ನ ಬಾಳಿನ ಆಭರಣವನ್ನಾಗಿ ಕೊಟ್ಟಾಗ ನನಗಾವ ಆಶೆಯೂ ಇಲ್ಲನೋಡು! ಅವರ ಜೀವನ ಪರ್ಯಂತ ಅವರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದೇ ನಮ್ಮ ಪವಿತ್ರ ಕರ್ತವ್ಯವಾಗಬೇಕು. ಅವರಾಗ ಹೃದಯತುಂಬಿ ಹರಸಿದ ಹರಕೆಯೇ ನಮ್ಮ ಜೀವನದ ರಕ್ಷೆಯಾದೀತು!

ಈ ಮಾತುಗಳನ್ನು ತನ್ನ ಕಿವಿಗಳಿಂದಲೇ ಕೇಳಿದ ವಾಸುದೇವಾಚಾರ್ಯರಿಗೆ ಮುಗಿಲು ಮೂರೇ ಬೊಟ್ಟು ಉಳಿದಂತಾಗಿತ್ತು. 'ಇಂಥ ಅಳಿಯತನ ವರ್ಷಕ್ಕೊಂದು ಸಲ ಮಾಡುವ ಭಾಗ್ಯ ಬರಲಿ ! ಎಂದುಕೊಂಡರು. ಆಗ, ಸಹಸ್ರಕಣ್ಣುಗಳಿಂದ ಆತನನ್ನು ನೋಡಬೇಕೆಂದೂ, ಸಹಸ್ರ ಕೈಗಳಿಂದ ಆತನನ್ನು ಹರಸಬೇಕೆಂದೂ ಸಹಸ್ರ ಹೃದಯದಳಗಳಲ್ಲಿ ಆತನನ್ನು ಅವಿತಿಟ್ಟುಕೊಳ್ಳಬೇಕೆಂದೂ, ಮನಸ್ಸು ಹಾತೊರೆಯಿತು. 'ಇದು ನನ್ನ ಪೂರ್ವಜನ್ಮದ ಸುಕೃತ.' ಎಂದರು. ಹೋದ ವರುಷ ಅಳಿಯತನದ ಕಾಲಕ್ಕೆ ಕವನವೊಂದನ್ನು ಕಟ್ಟಿ ಹೃದಯದ ಅಳಲನ್ನು ತೋಡಿಕೊಳ್ಳುವಂತಾಗಿದ್ದರೆ, ಈ ಸಲ ಕತೆಯೊಂದನ್ನು ಬರೆದು ಹಿಗ್ಗಿನ ರಸದೂಟ ಮಾಡಿಸಿದಂತಾಯಿತಲ್ಲ,' ಎಂದು ಮನಸ್ಸು ಪುಲಕಿತಗೊಂಡಿತು. ಈತ ನಿಜವಾಗಿ 'ಅಳಿಯ.' ಇಂಥ ಅಳಿಯಂದಿರು ಮನೆಮನೆಗೂ ಹುಟ್ಟಿಕೊಂಡರೆ ಹೆಣ್ಣು ಮಕ್ಕಳ ಬಾಳು ಸೊಗದ ಬಾಳಾದೀತು!' ಎಂದುಕೊಂಡು ಆನಂದ ಬಾಷ್ಪಗಳನ್ನುದುರಿಸಿದರು. ತಮ್ಮ ಬಾಳ್ದೋಟದಲ್ಲಿ ಬೆಳೆದು ಸೌರಭವೀಯುತ್ತಿದ್ದ ಪೂಬಳ್ಳಿ ಪೂತ ಮಾಮರದ ಆಶ್ರಯ ಹೊಂದಿದ್ದನ್ನು ಕಂಡು ಮನಸ್ಸು ಸಂತೃಪ್ತಿಗೊಂಡಿತು.

ಯಾಚಕ

ಗಾಡಿಯೋಡುತಲಿತ್ತು ಹಾಡೊಂದು ಹೊಮ್ಮಿತ್ತು
ನಾಡಯಾಚಕ ನುಡಿವ ದೇಹಿ ಭಿಕ್ಷಾಂ-ದೇಹಿ'
ಕೂಡಿದಾ ಪಯಣಿಗರ ನೋಟವನು ಸೆಳೆದಿತ್ತು
ನೋಡಿವರು ದಯೆಯಿಲ್ಲ ಕಿವುಡಾಗಿ ಕುಳಿತಿಹರು ॥ ೧ ॥

ಒಡವನಾ ಒಡಲಿಗಂದೆರಡನೆಯ ಉಪವಾಸ
ಮಿಡುಕುತಿಹನಾ ಜೀವಿ 'ದೇಹಿ' ಯೆಂದು
ಒಡನೊಡನೆ ನಡಗುವನು ಮೈಗೆ ಬಹು ಚಳಿಯೆಂದು
ಕಡೆಗಣಿಸಿ ಕುಳಿತಿಹರು ಜಡಮತಿಗಳಂದು ॥ ೨ ॥

ನೋಡಲೂ ಒಲ್ಲದಾ ಬಲ್ಲಿದರ ಬಳಿಸಾರಿ
ಬಡತಿರುಕ—ಕೇಳಿದನು ಹೊಟ್ಟೆಗಿಲ್ಲೆಂದು
ಬೇಡಿದಡೆ ಕೊಡಲು ಗಳಿಸಿಟ್ಟಿಲ್ಲ ನಿನಗೆಂದು
ಗುಡುಗಿದನು ಕಡುಪಾಪಿಯೊಬ್ಬ ಜರಿದು ॥ ೩ ॥

ಬಡಪಾಯಿ ಮುನ್ನುಗ್ಗಿ ಬೇಡಿದಡೆ ಮಗುದೊಬ್ಬ
ಕಡುಮುಳಿದು ಶಪಿಸಿದನು ತೊಲಗಾಚೆ ಎಂದು
ಹಿಡಿದ ಕಾಲನು ಬಿಡದೆ ಕೇಳಿದರೂ ಕೊಡಲಿಲ್ಲ
ಒಡಲು ಇಲ್ಲದ ತಂದೆಯೊಬ್ಬ ಅಂದು ॥ ೪ ॥

ಕಲ್ಲೆದೆಯ ತಾಳುವರು ಕೈಯೆತ್ತಿ ಕೊಡಬವರು
ಮೆಲ್ಲಾತನಾಡುವರು ಸಂಚಿನಾ ಸುಲಿಗೆಯೊಳು
ಬಲ್ಲವರ್ ತಾವೆಂಬ ಜಂಬದಾ ಕೋಳಿಗಳು
ಸಲ್ಲದ್ಯಾಚನೆಯೆಂಬ ನಿಯಮವನು ಸಾರುವರು ॥ ೫ ॥

ಯಾಚನೆಯು ಸಲ್ಲಪದು ಕಟ್ಟಳೆಯ ಮಾತಾಯ್ತು
ದೀನನಿಗೆ ಈಯುವಪು ಹೃದಯುದಾ ಒಲವಾಯ್ತು
ಹೃದಯುವಿಲ್ಲದ ಬಾಳು ನರನಲ್ಲದವಗಾಯ್ತು
ನರನಾರೊ ಮರವಾರೊ ಅರಿಯುವಡೆ ಜಡವಾಯ್ತು ॥೬॥

ದೀನ ಬಾಳುವ ಬಗೆಯು ಬಹು ಅಚ್ಚರಿಯದಾಯ್ತು
ಹೀನ ಬಾಳಿಂದವಗೆ ನಾಕ ಬಲು ದೂರಾಯ್ತು
ಮಾನವಂತರ ಬಾಳು ಧನವನತಿ ನೆಚ್ಚಿಹುದು
ದಾನವಿಲ್ಲದ ಧನ–ಮಾನವೆನಿತು ನೆಮ್ಮದಿಯು? ॥ ೭ ॥

ನಿಡಿದಾದ ಉಸಿರಿಂದ ಇಡಿದ ಕಂಬನಿಯಿಂದ
ಎಡವಿ ಮುಗ್ಗರಿಸುತ್ತ ಹೊಡಮರಳಿದನು ಜೀವಿ
ಕಡೆಯ ತಾಣದಿ ಕುಳಿತು ಇದನೆಲ್ಲ ನೀಕ್ಷಿಸುತೆ
ಒಡನೆ ಕರೆದನು ಒರ್ವ ಬಡರೈತ ಕಡುನೊಂದು ॥ ೮ ॥

ಕಟ್ಟಿದ್ದ ಗಂಟನ್ನು ಬಿಚ್ಚಿ ಕೊಟ್ಟನು ಅನ್ನ
ಹೊಟ್ಟೆ ತುಂಬಿತು ಆಗ ತುಷ್ಟನಾದನು ದೀನ
ಹುಟ್ಟಿ ಬರುವನು ಆಭವ ಯಾವುದೋ ತಾಣದಲಿ
ಬಟ್ಟೆಗೆಟ್ಟಹ ದೀನಬಂಧು ತಾನಾಗಿ ॥ ೯ ॥

–ಎಮ್. ಎಮ್ ಹಿರೇಮಠ.

ರಾಜರತ್ನಂ ಕಾವ್ಯಪರಿಚಾರಿಕೆ.

ಲಕ್ಷ್ಮಣ, ಅಳವಂಡಿ ಎಂ. ಎ.

ಜಿ. ಪಿ. ರಾಜರತ್ನಂ ಈ ಶತಮಾನದ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. ಅವರ ಸಾಹಿತ್ಯದಲ್ಲಿ ಸತ್ತ್ವ ಮತ್ತು ಓಜಸ್ಸು ತುಂಬಿದೆ. ಥಟ್ಟನೆ ಮನಮುಟ್ಟುತ್ತದೆ. ಅವರ ಕಾವ್ಯವಂತೂ ಪ್ರತಿಭೆ ಮತ್ತು ಆಳವಾದ ಜೀವನಾನುಭವದಿಂದ ಕೂಡಿದ್ದು. ಅವರ "ಯೆಂಡ್ಗುಡಕರತ್ನ" ಹೊಸ ಪ್ರಯೋಗದ ವಿನೂತ್ನ ಮಾದರಿ- ಲೇಖಕರು ಇದರಲ್ಲಿ ಅವರ ಕಾವ್ಯ ಪರಿಚಾರಿಕೆಯನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

೦ ೦ ೦ ೦ ೦

"ನಾನು ಸೇವಿಸುತ್ತಿರುವ ಸಾಹಿತ್ಯವೇ ನನ್ನ ಭಾಗದ ದೇವರು. ನನ್ನ ದೇವರಿಗೆ ಪರಿಚಾರಿಕನಾಗಿ ನಾನು ನಡೆಸುತ್ತಿರುವ ನಿತ್ಯ ಕೈಂಕರ್ಯವನ್ನು ನನ್ನ "ಸಾಹಿತ್ಯ ಪರಿಚಾರಿಕೆ" ಎಂದು ನಾನು ಭಾವಿಸಿದ್ದೇನೆ"—ಹೀಗೆಂದು ಶ್ರೀ ಜಿ. ಪಿ. ರಾಜರತ್ನಂ ಒಂದೆಡೆ ಹೇಳಿದ್ದಾರೆ.

ಇಲ್ಲಿ ಶ್ರೀಯುತರ ಉದ್ದಿಶ್ಯ ಸಾಹಿತ್ಯದ ಆರಾಧನೆ: ಶ್ರದ್ಧಾತ್ಮಕವಾದ ಆರಾಧ್ಯ ಭಾವದಿಂದ ಮಾತ್ರ ಸಾಹಿತ್ಯದ ಸರ್ವತ್ರ ಸಿದ್ಧಿ. ಈ 'ಸಿದ್ಧಿ'ಗಾಗಿ ತಪಸ್ಸೈಯುಬೇಕು. ಪರಿಶ್ರಮ ಪಡಬೇಕು. ಸಾಹಿತ್ಯವನ್ನು ಶ್ರದ್ಧೆಯುತೆ ಹಾಗೂ ಅರ್ಚನಾ ಭಾವದಿಂದ ಕಾಣಬೇಕು. ಅಂದರೆ ಸಾಹಿತ್ಯ 'ಸತ್ಯ'ವಾಗಬಲ್ಲದು: 'ಶಿವ'ವಾಗಬಲ್ಲದು: 'ಸುಂದರ'ವಾಗಬಲ್ಲದು.

ಸಾಹಿತ್ಯ ಕೇವಲ "**ಸತ್ಯಂ ಶಿವಂ ಸುಂದರಂ**" ಆದರೆ ಸಾಲದು: 'ಸಚ್ಚಿದಾನಂದ'ವಾಗಬೇಕು. 'ಸತ್' ಎಂದರೆ ಸತ್ಯ ಸಾಹಿತ್ಯದಲ್ಲಿ ವಾಸ್ತವಿಕತೆ ಬೇಕು. 'ಚಿತ್' ಎಂದರೆ ಜ್ಞಾನ ಶುದ್ಧ, ಜ್ಞಾನ (ಸಾಹಿತ್ಯ ಜ್ಞಾನ ಸ್ವರೂಪಿಯಾಗಿರಬೇಕು.) ಸತ್ಯ' ಜ್ಞಾನದಿಂದೊಡಗೂಡಿದ ಸಾಹಿತ್ಯಕ್ಕೆ 'ಆನಂದ' ನಿಮ್ಮೇಳವಾಗಿರಬೇಕು.

ಈ ಮೂರು ಲಕ್ಷಣಗಳನ್ನು ಹೊಂದಿದ ಸಾಹಿತ್ಯವೇ ದೇವರು. ಆ ಸಾಹಿತ್ಯವೇ "ನನ್ನ ಭಾಗದ ದೇವರು" ಎಂದು ಶ್ರೀರಾಜರತ್ನಂ ನಂಬಿದ್ದಾರೆ.

* † † † *

ಶ್ರೀರಾಜರತ್ನಂ ಅವರ ಸಾಹಿತ್ಯ ಪರಿಚಾರಿಕೆಯ ಸಮಗ್ರನೋಟ ಇದಲ್ಲ. ವಿಮರ್ಶೆಯಂತೂ ಅಲ್ಲವೇ ಅಲ್ಲ.

ಶ್ರೀ ರಾಜರತ್ನಂ ಅವರ ಸಾಹಿತ್ಯಾವಲೋಕನ ಈ ಚಿಕ್ಕ ಲೇಖನದ ಗುರಿ. ಸಾಹಿತ್ಯವೆಂದರೆ, ಸಮಗ್ರ ಸಾಹಿತ್ಯವಲ್ಲ' ಕಾವ್ಯಗಳು. ಕಾವ್ಯಗಳೆಂದರೆ ಎಲ್ಲವೂ ಅಲ್ಲ. 'ರತ್ನನ ಪದಗಳು' ಹಾಗೂ 'ನಾಗನ ಪದಗಳು.'

ಕನ್ನಡದ-ಆಧುನಿಕ ಕನ್ನಡದ–ಭಾವಗೀತೆಯ ಕ್ಷೇತ್ರದಲ್ಲಿ ಈ ಸಂಕಲನದ್ವಯಗಳದ್ದೇ ಒಂದು ವೈಶಿಷ್ಟ್ಯ. ಭಾಷೆ, ಭಾವ, ಅವುಗಳ ಸಮರ್ಥ ನಿರೂಪಣೆ ಈ ಭಾವಗೀತೆಗಳ ಜೀವಾಳವೆನ್ನಬಹುದು. ನಿರೂಪಣೆಯ ನಾವಿನ್ಯ: ಭಾವಬಂಧುರ. ಭಾಷೆಯ ಬೆಡಗು, ಈ ಪ್ರಬಲ ಶಕ್ತಿಶ್ರೀಗಳ ಸಾಹಿತ್ಯಸಂಗಮ–ರಾಜರತ್ನಂರವರ ಕವನಗಳು.

ಈ ಕವನಗಳನ್ನು 'ಭಾವಗೀತೆ' ಗಳು ಎನ್ನೋಣ. ಭಾವಗೀತೆಗಳ ಲಕ್ಷಣಗಳಾದ ಭಾವ ಪ್ರದೀಪ್ತಿ, ಸಂಕ್ಷಿಪ್ತತೆ, ಸಮಗ್ರತೆ ಹಾಗೂ ಭಾವ ತೀವ್ರತೆ ಈ ಕವನಗಳಲ್ಲಿ ಹಾಸು—ಹೊಕ್ಕಾಗಿವೆ.

ಈ ಕವನಗಳಿಗೆ 'ಆಧ್ಯಾತ್ಮಿಕ' ಕವನಗಳು ಎನ್ನೋಣ. ಕಾವ್ಯ ಆತ್ಮದ ವ್ಯವಹಾರ. ಆತ್ಮದ ನುಡಿ. ಅಂತರಾತ್ಮನ ವಾಣಿಯನ್ನು ತರ್ಕಬದ್ಧಗೊಳಿಸಿ, ತಾತ್ತ್ವಿಕ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ ಅವರಿಲ್ಲಿ!

ಒಳಗಿನ 'ಕವಿ' ರಾಜರತ್ನಂ ಹೇಳಿದುದನ್ನು, ಹೊರಗಿನ ಲೇಖಕ ರಾಜರತ್ನಂ ಲಿಪಿಬದ್ಧಗೊಳಿಸಿದರು: ಎನ್ನಬಹುದು.

★ ★ ★ ★ ★ ★

ಶ್ರೀ ರಾಜರತ್ನಂ ಅವರ ಭಾಷೆಯ ಸೊಗಸೇ ಸೊಗಸು. ಉನ್ನತ ಮಟ್ಟದ ಸಂಸ್ಕೃತ ಗ್ರಾಂಥಿಕ ಭಾಷೆ ಇದಲ್ಲ. ಜನಜೀವನದ ಜೀವನಾಡಿ ಎನಿಸಿದ ಜಾನಪದ ಶೈಲಿ ಇದು. ಆಡು ಭಾಷೆಯನ್ನು ಹಾಡುಗಬ್ಬವನ್ನಾಗಿಸಿದರು. ಕನ್ನಡ ಸರಸ್ವತಿಗೆ [illegible] ಮಾತಿನ ಉಡಿಗೆ ತೊಡಿಸಿದರು.

ಸಾಹಿತ್ಯದಲ್ಲಿ ವಾಸ್ತವಿಕತೆಯ ಸ್ವರೂಪವನ್ನು ಕಾಣಬಯಸುವ ಕವಿ ರಾಜರತ್ನಂರವರು "ಎಂಡ್ಕುಡುಕ ರತ್ನ"ನಾಗಿ, ಸಂಸಾರಿ "ನಾಗ"ನಾಗಿ ಅವರ ಭಾವನೆಯನ್ನೇ ಎರವಲು ಪಡೆದರು.

ಹಳ್ಳಿಗರ ತತ್ವವನ್ನು, ಹಳ್ಳಿಗರ ಭಾಷೆಯಲ್ಲಿಯೇ ಹೇಳಿ [illegible] ಮರ್ಮ ತಿಳಿದವರು ಇವರು. "ಇವರ ಭಾಷೆಯನ್ನು ಹಿಂಡಿದರೆ ಭಾವನ [illegible] ಹರಿದೀತು" ಎನ್ನುವ ಮಟ್ಟಿಗೆ ಗ್ರಾಮ್ಯಶೈಲಿಯಲ್ಲಿ ತರಪೇತು ಹೊಂದಿದರು.

(ಆಡುವ ಮಾತನ್ನು ಹಾಡುಗಬ್ಬವನ್ನಾಗಿ ಮಾಡಿದ ಈ ನಮ್ಮ [illegible] "ಸಾಹಿತ್ಯ ಧನ್ವಂತ್ರಿ" ಎನ್ನೋಣವೇ ?)

ಹಾಗೆನ್ನಬೇಕೆನ್ನುವವನು ನಾನೊಬ್ಬನಲ್ಲ !

ನನ್ನ ಹಾಗೆಯೆ ಕನ್ನಡದ ಹಿರಿಯರೆಲ್ಲರೂ ಕರೆದಿದ್ದಾರೆ. ಇವರ ಸಾಹಿತ್ಯದ ಕೃತುಶಕ್ತಿಯನ್ನು ಹಾಡಿ ಹೊಗಳಿದ್ದಾರೆ. ಇವರ ಶೈಲಿಯಬಗೆಗೆ ವಿನಾಯಕ ಕೃಷ್ಣ ಗೋಕಾಕ್ ಅವರು ಹೀಗೆ ಹೇಳುತ್ತಾರೆ—೧*

"...............ಶ್ರೀ ರಾಜರತ್ನಂ ಅವರು ತಮ್ಮ ಅನುಭವಗಳನ್ನು ಪ್ರಕಟಗೊಳಿಸಲು 'ಯೆಂಡ್ಕುಡ್ಕ ರತ್ನ' ನನ್ನು ನಿರ್ಮಿಸಿ, ಅವನ ಹಾಡುಗಳನ್ನು ಯಥಾಯೋಗ್ಯವಾಗಿ ಗ್ರಾಮ್ಯ ಭಾಷೆಯಲ್ಲಿ ಬರೆದಿದ್ದಾರೆ. ಇದರ ಫಲಿತಾಂಶವು ಬಹಳ ಯಶಸ್ವಿಯಾಗಿದೆ. ಈ ಕವಿತೆಗಳ ಛಂದಸ್ಸಿನಲ್ಲಿ ಒಂದು ಹೊಸದಾದ ಸಾಮರ್ಥ್ಯವು ಕಂಡುಬರುವುದಲ್ಲದೇ ಸರ್ವಜ್ಞನ ಸ್ಪಷ್ಟೋಕ್ತಿಗಳಲ್ಲಿ ತೋರುವ ನಿಸ್ಸಂಕರತೆಯೂ, ಕಠಿಣತೆಯೂ' ಇಲ್ಲಿ ಹೆಚ್ಚಳವನ್ನು ಹೊಂದುವವು"

ಹೀಗೆ ಗ್ರಾಮ್ಯ ಆವರಣವನ್ನು ಹೊಂದಿದ ರಾಜರತ್ನಂ ಶೈಲಿ ತನ್ನದೇ ಆದ ವಿಶಿಷ್ಟತೆಯನ್ನುಕಾಪಾಡಿಕೊಂಡು ಬಂದಿದೆ. ಅವರ ಶೈಲಿ-ಭಾವಕ್ಕೆ ಒಂದು ಉದಾಹರಣೆ—

"ಗುಡಿಸಿಲ್ಗ್ ಉಲ್ಲು ಸಾಲ್ದಿದ್ರೂನೇ
ಮಾಡೀಗ್ ಮಾಡಿ ಬಡ್ಡಿ !
ದೊಡ್ಡಾಯ್ಗ್ ಒಂದ್ ಕಾಸ್ ಕಮ್ಮಿ ಬಂದ್ರೆ
ಬಡವ್ರೋನ್ ಮನೇ ಜಡ್ಡಿ !"

* * * * * * *

ಬೃಹತ್ ಸಂಪುಟ ಒಂದರಲ್ಲಿ ಪ್ರಸಿದ್ಧ ವಿಮರ್ಶಕರೊಬ್ಬರು ೨ ರಾಜರತ್ನಂ ಅವರ ಕವಿತಾ ಶಕ್ತಿಯನ್ನು ಹೀಗೆ ವಿವೇಚಿಸಿದ್ದಾರೆ— 'ವಸ್ತು ಹಾಗೂ ಶೈಲಿ ಹೀಗೆ ಎರಡೊಂದು ದೃಷ್ಟಿಯಿಂದಲೂ ಈ ಸಂಗ್ರಹ ಒಳ್ಳೆಯ ಅರ್ಥದಲ್ಲಿ ಪ್ರಾಯೋಗಿಕವಾಗಿದೆ. ತನ್ನ ಜೀವನ ದೃಷ್ಟಿಗೆ ಅನುಕೂಲವಾದ ಪರಿಸರ ಒಂದನ್ನು ನಿರ್ಮಿಸಿಕೊಂಡು' ಆ ಬಗ್ಗೆ ನಾಟಕೀಯ ಮುಖಾಂತರವೇ ಕವಿ ತನ್ನ ಭಾವನೆಗಳನ್ನು ಪ್ರಕಟಿಸುವ ಪ್ರಯತ್ನವನ್ನು ಕನ್ನಡದಲ್ಲಿ ರಾಜರತ್ನಂ ಮೊದಲಬಾರಿ ಮಾಡಿದರು. "ಯೆಂಡ್ಕುಡುಕನ", ಹೆಂಡದ ಈ ಅಮಲು ಶಾರೀರವೇದನೆಗಳಿಗಿಂತ ಹೆಚ್ಚು ತೀವ್ರವಾಗಿದ್ದು ಕಲ್ಪನೆಯಂತೆ ಕಾಮರೂಪಿಯಾಗಿದೆ"

---

೧ "ಇಂದಿನ ಕನ್ನಡ ಕಾವ್ಯದ ಗೊತ್ತು ಗುರಿಗಳು" ವಿ. ಕೃ. ಗೋಕಾಕ್.

೨ "ನಡೆದು ಬಂದ ದಾರಿ" (ಸಂಪುಟ-೧)

(ಇತಿಹಾಸ ಪ್ರಬಂಧ)— ಕೀರ್ತಿನಾಥ ಕುರ್ತಕೋಟಿ,

<u>ಉದಾಹರಣೆಗಾಗಿ</u>—

"ಬೇವಾರ್ಸಿ ! ನನ್ ಪುಟ್ನಂಜೀನ
ರೂಪಾನ್ ಆಡ್ತಿನಿ ಬಾಪ್ಪ !
ನಂಗ್ ಆಗಾಗ್ಗೆ ಆಡೀಸ್ತೈತೆ
ನನ್ ಪುಟ್ನಂಜೀ ರೂಪ !

ಆಲ್ನಲ್ ಕಮಲದ್ ಪೂ ತೇಲ್ಬುಟ್ಟೆ
ಮೇಲ್ ಒಂದ್ ತೆಳ್ನೆ ಲೇಪ
ಚಿನ್ನದ್ ನೀರ್ನಲ್ ಕೊಟ್ಟಂಗೈತೆ
ನನ್ ಪುಟ್ನಂಜೀ ರೂಪ !

'ನನ್ ಪುಟ್ನಂಜೀ ರೂಪ' (ರತ್ನನ ಪದಗಳು)

ಮನೆಯಾಗ್ ಒಂದ್ ದಿನ ತಿನ್ನಾಕ್ ಇಲ್ದೆ
ನನಗ್ ಇಲ್ಲಾಂತ ನೀನೂ ಒಲ್ದೆ
ಕರೆದೋರ್ ಅಟ್ಟೀಗ್ ಓಗೋಲ್ಲೆಂದದ್
ನಿಂಗ್ ನೆಪ್ಪೈತಾ ನಂಜೀ?

ಆಪ್ರೊತ್ತೆಲ್ಲ ಯಿಟ್ಟೀ ಇಲ್ದೆ
ಸಾಯ್ತಿದ್ರೂನೆ ನಗತ ನಿಲ್ದೆ
'ಬದಕೋದ್ ತಿನ್ನಾಕ್ ಅಲ್ಲಾಂತ್ ಅಂದದ್
ನಿಂಗ್ ನೆಪ್ಪೈತಾ ನಂಜೀ ?"

'ನಿಂಗ್ ನೆಪ್ಪೈತಾ ನಂಜೀ ?' (ರತ್ನನ ಪದಗಳು)

ಇಂತಹ ಭಾವಗಳು ಬದುಕನ್ನು ಸಾರ್ಥಕಗೊಳಿಸುತ್ತವೆ. ವಾಸ್ತವಿಕತೆ ಹಾಗೂ ಸಾಂಕೇತಿಕತೆಗಳೆರಡೂ ಬೆರೆತು ಕಾವ್ಯದ ವ್ಯಂಜಕತೆಯನ್ನು ಹೆಚ್ಚು ಮಾಡಿವೆ.

ಬದುಕಿನ ನೈಜತೆಯನ್ನು ಈ ವ್ಯಂಜಕತೆಯು ಬೆಳಕಿನಲ್ಲಿ ರಾಜರತ್ನಂ ಮರೆಯಲಾರದಂತೆ ಚಿತ್ರಿಸಿದ್ದಾರೆ. ಪುಟ್ನಂಜಿಯ ಕುರಿತಾದ ಕವನಗಳಂತೂ ಕನ್ನಡದ ಅತ್ಯುತ್ತಮ ಪ್ರಣಯಗೀತಗಳಿಗೆ ಉದಾಹರಣೆಗಳಾಗಿವೆ.

\+ + + + + + + + +

ನೇರವಾಗಿ ರಾಜರತ್ನಂ ಕಾವ್ಯ ಪ್ರವೇಶ ಮಾಡುವುದಕ್ಕಿಂತ ಪೂರ್ವ ಕವಿಯ ದ್ವಿಮುಖ ವ್ಯಕ್ತಿತ್ವವನ್ನು ಕಂಡುಕೊಳ್ಳೋಣ.

ಕವಿಗೆ ಮುಖಗಳೆರಡು— ಹೊರಮುಖ; ಹಾಗೂ ಅಂತರ್ಮುಖ ಎಂದು ಈಗಾಗಲೇ ಹೇಳಿಯಾಗಿದೆ. ಕಲಾಕಾರನ ಈ ದ್ವಿಮುಖ ವ್ಯಕ್ತಿತ್ವವನ್ನು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ತತ್ವಜ್ಞಾನಿಗಳೀರ್ವರು ಕೆಳಗಿನಂತೆ ವಿವೇಚಿಸಿದ್ದಾರೆ.

೩.* ಶ್ರೀ ಅರವಿಂದರು— "ಕಲಾವಿದನ ಕಲಾಕ್ರಿಯೆಯ ಕೀಲಿ ಕೈಯನ್ನು ಹುಡುಕಬೇಕಾದುದು ಅವನ ಬಹಿರಂಗ ಮನಸ್ಸಿನ ಜೀವನದಲ್ಲಿ ಅಲ್ಲ; ಅವನ ಅಂತರಂಗ ವ್ಯಕ್ತಿತ್ವದಲ್ಲಿ"

೪* ಸಿ ಜಿ. ಯುಂಗ್— "ಸೃಷ್ಟಿಶೀಲನಾದ ಪ್ರತಿಯೊಬ್ಬ ಕಲೆಗಾರನದೂ ದ್ವಂದ್ವ ಇಲ್ಲವೇ ಸಮನ್ವಿತ ವ್ಯಕ್ತಿತ್ವ. ಒಂದು ಕಡೆ ಅವನು ವೈಯಕ್ತಿಕಾನುಭವ ಉಳ್ಳ ಲೋಕವ್ಯಕ್ತಿ; ಮತ್ತೊಂದು ಕಡೆ ವಿಶಿಷ್ಟವಾದ ಕಲಾಶಕ್ತಿಯನ್ನುಳ್ಳ ಕಲಾವ್ಯಕ್ತಿ...... ಆದರೆ ವಾಸ್ತವವಾಗಿ ನಾವು ಅವನನ್ನು ಅರಿತುಕೊಳ್ಳಬೇಕಾದುದು ಅವನ ಕಲಾ ಸಿದ್ಧಿಗಳಿಂದ"

ಹೀಗೆ ಬದುಕಿನ ಅನುಭವ ಪಡೆದ, ಕಾವ್ಯದ ಅನುಭಾವ—ಅನುಭೂತಿಗಳನ್ನು ದೊರಕಿಸಿಕೊಂಡ ಕವಿ ರಾಜರತ್ನಂ ಅವರ ಜೀವ-ಕಾವ್ಯ ಸಮನ್ವಿತ ಸರಸ ಬಾಳನ್ನು ಕಂಡುಕೊಳ್ಳುತ್ತಿರೋಣ.

ಅರಿತ ಕವಿ ತಾನು ಕಂಡ ಸತ್ಯವನ್ನು, ಅನುಭವಗಳನ್ನು ಹೃದಯ ತುಂಬಿ ಹಾಡುತ್ತಾನೆ. ಆ ಹಾಡಿಗೆ ಅಧ್ಯಾತ್ಮದ ರೂಪ ಕೊಡುತ್ತಾನೆ. ಅಂತರಾತ್ಮನ ವಾಣಿಯನ್ನು ಶಬ್ದ–ಅಲಂಕಾರಗಳೊಂದಿಗೆ ಹಿತಮಿತವಾಗಿ ಬೆರಸಿ ಅದಕ್ಕೆ ಹಾಡುಗಬ್ಬದ ಇಲ್ಲವೇ ಓದುಗಬ್ಬದ ರೂಪುಗೊಟ್ಟು ಅದನ್ನು ಸಹೃದಯರುಗಳಿಗೆ ಅರ್ಪಿಸುತ್ತಾನೆ. ಹೀಗೆ ರಾಜರತ್ನಂ ಅವರ ಕಾವ್ಯವ್ಯಕ್ತಿತ್ವ ಬಾಳಿನರೂಪ: ಆತ್ಮದ ಸ್ವರೂಪ-ಶಬ್ದ ಸಾಫಲ್ಯಗಳೊಂದಿಗೆ ಮೇಳವಿಸಿಕೊಂಡು ಶಿವನ ಜಡೆಯ ಗಂಗೆಯಂತೆ ಪೂಜನೀಯವಾಗಿದೆ!

ರತ್ನನ ಪದಗಳನ್ನು ಹಾಡಿದ ಹಾಡುಗಾರ ರತ್ನ; ಕವಿರತ್ನ. ಅವನದೇ ಆದ ಪ್ರಪಂಚದ ಪೂರ್ವಾರ್ಧವೆಂದರೆ— ಅವನ ಹೆಂಡದ ಪ್ರಪಂಚ. ಉತ್ತರಾರ್ಧ ಮನಮೆಚ್ಚಿದ ಬಾಳಸಂಗಾತಿ ನಂಜಿಯೊಡನೆ ನಡೆಯಿಸಿದ ನೋವು ನಲಿವುಗಳ ಸಮನ್ವಯ ಸ್ವರೂಪದ ಬಾಳಗೀತೆ.

ಈ ಸಂಗ್ರಹದಲ್ಲಿ ಭಾವ-ಭಾಷಕ್ಕೆ ತಕ್ಕ ಪರಿಪಕ್ವವಾದ ಪರಿಸರದಯೋಗ್ಯ ಹಿನ್ನೆಲೆ ನೀಡುವ ಗ್ರಾಮ್ಯಭಾಷೆ ಮಹತ್ವದ ಪ್ರಯೋಗವೆಂದೆನ್ನಬಹುದು. 'ಪರಿಸರ' ಎಂದಾಗ, ಕುಡುಕನ ವಾಕ್ಯಸರಣಿಯಂತೆ ತೊನೆದಾಡುವ ಶಬ್ದ ಶೈಲಿಯ, ಭಾವ ಬಂಧುರ

---

೩. ೪ "ಪ್ರಬುದ್ಧ ಕರ್ನಾಟಕ"
(ಸಂಪುಟ ೩೯. ಸಂಚಿಕೆ ೨)

ಹಿನ್ನೆಲೆಯುಳ್ಳ ರತ್ನನ ಪದ್ಯವೊಂದು ನೆನಪಾಗುತ್ತಿದೆ. "ಎಲೆಲೆಲೆ ರಸ್ತೆ ಪಸು ಅಪ್ನೆ ವಸ್ತೆ" ಎಂಬ ಸುಪ್ರಸಿದ್ಧವಾದ ವಾಕ್ಯವನ್ನು ಶೈಲಿ–ಪರಿಸರಗಳೆರಡರ ದೃಷ್ಟಿಯಿಂದಲೂ ನೋಡಬಹುದಾಗಿದೆ. ಕಾವ್ಯದ ಪರಿಸರವನ್ನು ಕ್ಷಣಮಾತ್ರದಲ್ಲಿ ನಿರ್ಮಿಸಬಲ್ಲ ಅಮೋಘ ಶಕ್ತಿ ಈ ಶಬ್ದಸಂಪತ್ತಿಗಿದೆ.

ಕವಿತೆಗಳ ಛಂದಸ್ಸು ಕುಡಿತದ ಭಾವಾಂತರಗಳಿಗೆ ತಕ್ಕಂತೆ ಏರಿಳಿತಗಳನ್ನು ಪಡೆಯುತ್ತದೆ. ಎಲ್ಲಕ್ಕೂ ಹೆಚ್ಚಾಗಿ ಭಾಷಾಶೈಲಿಯೊಂದಿಗೆ ಎರಡರಿಯುವಂತೆ ಬಂದ ಸುಂದರ ಉಪಮೆ ರೂಪಕಗಳು ರಾಜರತ್ನಂ ಕವಿತಾಶಕ್ತಿಯ ಕುರುಹುಗಳಾಗಿ ಓದುಗರನ್ನು ತನ್ಮಯಗೊಳಿಸುತ್ತವೆ. ಹೆಚ್ಚಿದ ಲಿಂಬೇ ಹಣ್ಣಿನಂತಿರುವ ಚಂದ್ರನ ಕಣ್ಣು, ಕುರುಡರ ಕೆಂಗಣ್ಣಿನಂತಿರುವ ಸೂರ್ಯ. ನೆರಳಿನ ತೇಪೆ ಹಚ್ಚಿದ ಬಿಸಿಲಿನ ಚಾಪೆ, ಸಂಜೆಯ ಸೂರ್ಯ ಈ ಎಲ್ಲ ಚಿತ್ರಗಳೂ ರಮ್ಯವಾಗಿರುವುದರ ಜೊತೆಗೇನೇ ಒಮ್ಮೆಗೇ ಜೀವಂತವಾಗಿ ಆವರಣವನ್ನು ನಿರ್ಮಿಸುತ್ತವೆ.

ಮೊದಲ ಭಾಗದ ರತ್ನ ಸುರೆಯನ್ನೊಳಗೊಂಡ ಸುರ. ಸುರಾಪಾನ ಮಾಡುವ ಕೆಳ (?) ದರ್ಜೆಯ ರತ್ನನಿವನಾದರೂ, ಮಾನವತ್ವವನ್ನು ಮೀರಿನಿಂತ ದೈವತ್ವದ ಛಾಯಾವ್ಯಕ್ತಿತ್ವವನ್ನು ಪಡೆದಿದ್ದಾನೆ. ಆತನ ನೋಟದಲ್ಲಿ ತನ್ಮಯತೆ ನೀಡುವ ಹೆಂಡ, ಪುಟ್ನಂಜಿಯ ಪ್ರೀತಿ, ಬಾಳಿನ ಬಗೆಗೆ ಅಂತಃಕರಣ ಇವೇ ದೇವರುಗಳು.

ರತ್ನ ಕೇವಲ ಕುಡುಕನಲ್ಲ; ತತ್ವಜ್ಞಾನಿಯೂ ಹೌದು. ಅವನ ತತ್ವಜ್ಞಾನವೂ ಕೂಡ ಅವನ ಹೆಂಡದಷ್ಟೇ ತನ್ಮಯಕಾರಿ. ಈ ತತ್ವಜ್ಞಾನ ಪ್ರತಿಪದ್ಯದ ಜೀವಾಳವಾಗಿ ವ್ಯಕ್ತವಾಗಿಯೋ, ಅವ್ಯಕ್ತವಾಗಿಯೋ ರತ್ನನ ಶಬ್ದ ಪ್ರಪಂಚಕ್ಕೇನೇ ಭಾವದ ಉಸಿರನ್ನೂದುತ್ತದೆ, ಕುಡುಕರ ಮಾತನ್ನು ಅರ್ಥಮಾಡಿಕೊಳ್ಳದೆ ಅವನನ್ನು ಹೀಗಳೆಯಬಾರದು ಎಂಬುದು ರತ್ನನ ಸಿದ್ಧಾಂತ. "ಕುಡುಕನ್ ಪದಗೋಳ್ ಒಕ್ಕಿ ನೋಡಿದ್ರೆ ಮಸ್ತಾಗ್ ಅವೇ ಗುಟ್ಟು ! " ಎಂದು ಕಿವಿಮಾತನ್ನೊಂದು ಹೇಳಿದ ರತ್ನ ತನ್ನದೇ ಆದ ಕಾವ್ಯ ತತ್ವಜ್ಞಾನವೊಂದನ್ನು ರೂಪಿಸುತ್ತಾನೆ; ನಿರೂಪಿಸುತ್ತಾನೆ.

" ರವ್ಿ ಕಾಣದ್ ಕವ್ಿ ಕಂಡ "
" ಅಂದ್ರೆ ಕವಿಗೊಳ್ ತತ್ವ- "
" ಕವ್ಿ ಕಾಣದ್ ಕುಡುಕ ಕಂಡ "
ಅನ್ನೋದ್ ಕುಡುಕರ್ ಮಾತ್ನ !

" ಕುಡುಕರ್ ಮಾತ್ನ " (ರತ್ನನ ಪದಗಳು)

ರತ್ನನ ಪ್ರಪಂಚವೂ ವಿಚಿತ್ರವಾದದ್ದೇ. ಹೆಂಡ: ಹಣ ಹೆಣ್ಣು ಹಾಗೂ ದಿನದ ಗೆಯ್ಮೆಗಳಿಗೆ ಮಾತ್ರ ಇದು ಸೀಮಿತವಾಗಿದೆ. ರತ್ನನಿಗೆ ಇವುಗಳನ್ನುಳಿದು ಬೇರೆ ಇನ್ನೇನೂ ಬೇಕಿಲ್ಲ. ಚಿಕ್ಕದಾದರೂ, ಚೊಕ್ಕವಾದ ಸಂಸಾರ ನಡೆಯಿಸುವ ಬಯಕೆ ರತ್ನನದು

"ಬಡತನ ಗಿಡತನ
ಯೇನಿದ್ರೇನ್? ಸಡತೇನ
ಚೆಂದಾಗ್ ಇಟ್ಕೊಳ್ಳಾದೆ ಅತ್ಗೆ!
ಅಂದ್ಕೊಂಡೆ ಸುಕವಾಗಿ
ಕಸ್ಟಕ್ ನಗೆ ಮೊಕವಾಗಿ
ನೆಗೆಯೋದೆ ರತ್ನನ್ ಪರ್ಪಂಚ!"

ಹೀಗೆ ಸಂಕಟವನ್ನು ನಗುಮೊಗವಾಗಿ ಸಹಿಸುವ ರತ್ನ, ತನ್ನ ಬಡತನಕ್ಕೆ ದೇವರನ್ನು ದೂಷಿಸುವದಿಲ್ಲ. "ದೇವ್ರು ಏನ್ರ ಕೊಟ್ಟಣ್ಣಾ, ಕೊಡದಿದ್ರೆ ಬುಡಲಣ್ಣ ನಾವೆಲ್ಲ ಕೌಸೀಗೆ ಬಿಟ್ಟ!" ಎಂದು ಸಮಾಧಾನ ಪಟ್ಟುಕೊಳ್ಳುತ್ತಾನೆ.

ರತ್ನನ ಸೃಷ್ಟಿಯಲ್ಲಿ "ಯೆಂಗೀಸ್ಗ ಎಂಗೆ ಅರಸ್ನ ಕುಂಕ್ರ—ಗಂಡೀಸ್ಗ ಅಂಗೆ ಯೆಂಡ" ಹೀಗೆ 'ಯೆಂಡ' ಕುಡಿದಾಗ ರತ್ನನ ತಲೆಯಲ್ಲಿ ತತ್ವಜ್ಞಾನದ ಬೆಳಕು ಮೂಡುವುದುಂಟು. "ನಮ್ ತಾಕ್ ಬಂದ್ರೆ ಯೇಳ್ಕೊಡ್ತೀವಿ ದಾನ ದರ್ಮಕ್ ಅರ್ತ" ಎಂದು ಹೇಳಿ ಮುಂದುವರಿದ ರತ್ನ—

"ತಕ್ಕೊ ಮುನ್ಸ್ಯ ನನ್ ಅತ್ಮಾನೆ
ಯೆಂಡದ್ ಬುಂಡೆ ಬಿಟ್ಟಿ
ನಾಳೆ ಯೋಚ್ನೆ ನಂಗೆ ಬೇಡ
[illegible] ಒಂದೇ ಇಲ್ಲಿ!"

—ಎಂದು ಹೆಂಡದ ಮೊದಲ ಗುಟುಕಿನಿಂದ ತನ್ನ ತತ್ವಜ್ಞಾನವನ್ನಾರಂಭಿಸಿ ಕೊನೆಯ ಗುಟುಕಿನಲ್ಲಿ ಅದಕ್ಕೆ ಕೊನೆಯ ತೆರೆಯನ್ನೆಳೆದು ಸುರಾ ಪಪಂಚದಲ್ಲಿ ಲೀನನಾಗಿ ಹೋಗುತ್ತಾನೆ.

* ಖ್ಯಾತ ಸಾಹಿತಿ ಶ್ರೀ ಅ. ನ. ಕೃಷ್ಣರಾಯರು ರತ್ನನ ಈ 'ಪ್ರರ್ಪಂಚ'ವನ್ನು ಕಂಡುಕೊಂಡ ವಿಧ ಅನೋಘವಾಗಿದೆ.

" ಶ್ರೀ ರಾಜರತ್ನಂ ಅವರ "ರತ್ನನ ಪದಗಳನ್ನು" ಉಮರ್ ಖಯ್ಯಾಂನ ರುಬಾಯಿಯಾತ್‌ಗಳಿಗೆ ಹೋಲಿಸಬಹುದು ಉಮರನು ತನ್ನ ಕವನಗಳಲ್ಲಿ 'ಮಾನವನ

---

*ಬೆಂಗಳೂರ, ರಾಜಾಜಿನಗರದ '[illegible]' ದಲ್ಲಿ ದಿನಾಂಕ ೧೬-೮-೧೯೬೬ ರಂದು ಮಾಡಿದ ಉಪನ್ಯಾಸದಲ್ಲಿ ಅ. ನ. ಕೃ.

ತನ್ನ ಕವನಗಳಲ್ಲಿ 'ಮಾನವನ ಜೀವನದ ಒಳತತ್ವವನ್ನು ಕುರಿತು ವಿಚಾರ ಮಾಡ ತೊಡಗಿ, ತನ್ನ ಅಂತರಂಗದ ಆಲೋಚನೆಗಳನ್ನು ಸರಳರೀತಿಯಿಂದ, ಪದಗಳಿಂದ ಧ್ವನಿಗೊಳಿಸಿದಂತೆ, ಶ್ರೀ ರಾಜರತ್ನಂ ಅವರೂ ತಮ್ಮ ಬಾಳಿನ ಅಂತರಾನುಭವಗಳನ್ನು ಸಾಮಾನ್ಯರಾಡುವ ಮಾತಿನಲ್ಲಿ ಹೇಳಿದಿರುವರು. ಉಮರ್ "ಸೂಫಿ" ಯಾದರೆ ಇವರು 'ಯೆಂಡ್ಕುಡುಕ ರತ್ನ' ಉಮರನ ಸುರಾಪಾನ ಉಪಾಸನಾ ವಿಧಾನವಾದರೆ ರತ್ನನ ಯೆಂಡ್ಕುಡುಕತನ ಚಿಂತನಾ ವಿಧಾನ. ಅವನ ಹೆಂಡದಂಗಡಿ ಸ್ವರ್ಗ. ಜಿಜ್ಞಾಸು ಗಳ ಗೋಷ್ಠಿ ಯಾದರೆ ಇವನ ಪಡಕಾನೆ ಬಾಳ ಮಥಿಸುವ ಕಾರಖಾನೆ. ಉಮರನ 'ಸಾಕಿ' (ಸಖಿ) ರತ್ನನ ಪುಟ್ನಂಜಿ. ಉಮರನ ಮದ್ಯ ಭಗವದ್ಭಕ್ತಿಯ ಆನಂದವಾದರೆ ರತ್ನನ ಹೆಂಡ ಸತ್ಯ ಮಥನದ ರಸಪಾತ್ರ."

ರತ್ನ ಕೇವಲ ಕುಡುಕ ಮಾತ್ರನಲ್ಲ. ಪ್ರೇಮ ಹೃದಯಿ ಕೂಡ. ಅಭಿಧಾರಾವೃತ ದಿಂದ ಅವನ ಪ್ರಣಯ-ಪ್ರೇಮ ಪ್ರಪಂಚ ಬೆಳೆದಿದೆ.

ಪುಟ್ನಂಜಿ ರತ್ನನ ಪ್ರೇಯಸಿ. ಅವನ ಬಾಳ ದೋಣಿಯ ಹುಟ್ಟೆಂದರೂ ಸರಿಯೇ! ಆ ನಂಜಿಯೋ, ರತ್ನನ ದೃಷ್ಟಿಯಲ್ಲಿ ಸ್ವರ್ಗದ ಅಪ್ಸರೆ. ಅವಳ ರೂಪ? ರತ್ನನ ಮಾತಿನಲ್ಲಿಯೇ ಕೇಳಿ —

'ಅಪ್ಸರ್ಕೇರಿ ಅಕ್ಕೀಸ್ಟಂಗೆ
ಒಂದ್ ಅತ್ ನೂರ್ ಜನಾನ
ಬೇಕಾಗ್ತೈತೆ ಕಂಡ್ರೆ ನನ್ನ
ನನ್ ಪುಟ್ನಂಜೀ ರೂಪ.'

ಹೀಗೆ ರತ್ನನ ಮನೋಪ್ರಪಂಚದಲ್ಲಿ ಹೆಂಡದ ಅಮಲಿನಿಂದ ದಾರಿತಪ್ಪಿ ಹೋಗ ಬಾರದಂತೆ, ಪ್ರೇಯಸಿ ಪುಟ್ನಂಜಿ ಆಶಾ ದೀಪಿಕೆಯಾಗಿದ್ದಾಳೆ; ಪ್ರೇಮಜ್ಯೋತಿ ಯಾಗಿದ್ದಾಳೆ; ಅವನ ಬಾಳ ಬೀದಿಗೆ ಬೆಳಕಿನ ಬಳ್ಳಿಯಾಗಿದ್ದಾಳೆ. ತನ್ನ ಸರ್ವಸ್ವವೂ ಆಗಿದ್ದ ನಂಜಿಗೆ, ರತ್ನನು ಆಗಾಗ್ಗೆ—"ಕಷ್ಟ ಸುಖ ಏನ್ ಬಂದ್ರೂನೆ ನನ್ಗೆ ನಾನೆ ನನೆ ನೀನೆ, ಮುಳುಗೋನ್ ಜೀವ್ನಕ್ ಹುಲ್ಕಡ್ಡಂಗೆ ನಿಂಗೆ ನನ್ನಲ್ಲಿ ನಂಜೀ!" ಎಂದು ಸಂಸಾರದ ಪರಸ್ಪರ ಸಹಾನುಭೂತಿಯನ್ನು ಕುರಿತು ಎಚ್ಚರಿಕೆಯನ್ನು ನುಡಿಯುವುದಿಲ್ಲ. ಸಂಸಾರದ ಸಂಗಾತಿಯಿಂದಲೇ ರತ್ನನಿಗೆ ಪ್ರತಿದಿನವೂ ನವಜೀವನ ದೊರೆಯುತ್ತದೆ. "ಜೀತಕ್ ಜೀವ ಬಲಿ ಕೊಟ್ಟ್ರೇಲಿ ನಂಜೀನೇ (ಅವನಿಗೆ) ಒಸ್ ಪ್ರಾಣ!" ನಂಜೀನ ಎನ್ರ ನೆನಿಸಿದ ಟಿಪ್ರೆ, ಉಡುಗೋಗ್ತೈತೆ ಪ್ರಾಣ!" ಜನಪದ ಭಾವಗೀತಗಳಲ್ಲಿ ಇಷ್ಟು ಉತ್ಕಟವಾದ ಪ್ರಣಯನಾಡಿ ಮಿಡಿಯುವುದನ್ನು ಈ ಗೀತವನ್ನುಳಿದು (ನನ್ನ ಮಟ್ಟಿಗೆ ಹೇಳುವುದಾದರೆ........) ಬೇರೆ ಭಾವಗೀತೆಯನ್ನು ನಾನೆಲ್ಲೂ ಕಾಣೆ.

ನಂಜಿಯ ಪ್ರತಿಯೊಂದು ಚಟುವಟಿಕೆಯೂ ರತ್ನನ ಕಂಗಳಿಗೆ ರಸದ ಬುಗ್ಗೆ; ಹಬ್ಬ. ಅವಳು ನಕ್ಕರೂ ಅವನಿಗೆ ಸಂತೋಷ. ಆ ನಗೆಯನ್ನು ಮೆಚ್ಚಿಕೊಳ್ಳುವವನು ಅವನೊಬ್ಬನೇ ಅಲ್ಲ—

“ ಲೋಕಾನೇನೆ ಮೆಚ್ಕೊಂತೈತೆ
ನನ್ನ ಪುಟ್ನಂಜಿ ನಕ್ರೆ !
ಮೆಚ್ಕೊಂಡ್ ಯೇಳ್ತೈತ್ ‘ನಂಜೀ ನಕ್ಕಾಗ್
ಸದ್ ಮಾಡೋನ್ಗೆ ಥೂಕ್ರೆ !
ನನ್ ಪುಟ್ನಂಜಿ ನಕ್ರೆ ”

ನಂಜಿಯ ಮೇಲೆ ರತ್ನನಿಗೆ ಎಷ್ಟೊಂದು ಪ್ರೀತಿಯಿದೆ ಎಂದರೆ “ ನಿದ್ದೇಲ್ (ಅವನನ್ನು) ಇಡ್ದಿ ಎಬ್ಬಿಸ್ರ— ‘ನಿನ್ ಎಸರೇನ್ ?’ ಎಂದಾಗ ಬರುವ ಉತ್ತರ ‘ಪುಟ್ನಂಜಿ’

ಈ ಬಗೆಯ ಪ್ರಣಯಗೀತೆಗಳು ಕನ್ನಡ ಸಾಹಿತ್ಯಕ್ಕೆ ಕವಿರತ್ನನಿತ್ತ ‘ರತ್ನಕಾಣ್ಕೆಗಳು’.

ಖ್ಯಾತ ಸಾಹಿತಿ ರಂ. ಶ್ರೀ ಮುಗಳಿ [೬] ಹೀಗೆನ್ನುತ್ತಾರೆ—

“ ಹೊಸಕಾವ್ಯದ ಹೊಸ ತನವನ್ನು ಸ್ವಂತ ಧಾಟಿಯಲ್ಲಿ ಹೊಸೆದ ಕವಿಗಳೆಂದರೆ ಶ್ರೀ ಜಿ. ಪಿ. ರಾಜರತ್ನಂ ಅವರು. ಈ ಹೊಸತನವು ‘ ರತ್ನನ ಪದಗಳು ’ “ ನಾಗನ ಪದಗಳು”

ಈ ಸಂಗ್ರಹಗಳಲ್ಲಿ ಎದ್ದು ಕಾಣುತ್ತದೆ. “ ರತ್ನನ ಪದಗಳು ” ಎಂಬ ಸಂಗ್ರಹದಲ್ಲಿ ಹೆಂಡ ಕುಡುಕನ ಅಮಲಮಾತಿನಲ್ಲಿ ಅವನ ಜೀವನದೃಷ್ಟಿ ನಿರೂಪಿತವಾಗಿದೆ. ವಿಷಯ, ಭಾಷೆ, ಅರ್ಥಪುಷ್ಟಿ ಈ ಎಲ್ಲ ಅಂಶಗಳಲ್ಲಿ ಈ ನೂತನ ಪ್ರಯೋಗವು ಮೆಚ್ಚುವಂತಿದೆ. ಇದರ ಮೂಲಕವಾಗಿ ಹೊಸ ಪ್ರತಿಮೆಗಳು, ಅರ್ಥ ಧ್ವನಿಗಳೂ ಮಿನುಗುತ್ತವೆ. ಪರಹೃದಯ ಪ್ರವೇಶದಿಂದ ವ್ಯಕ್ತವಾದ ನಾಟ್ಯಗುಣದೊಡನೆ ಕವಿಯ ಸ್ವಂತ ಜೀವನ ದರ್ಶನವನ್ನು ಸೂಚಿಸುವ ಭಾವಗೀತೆಯ ಸತ್ವವೂ ಈ ಕವನಗಳ ಒಳ್ಳೆಯ ಭಾಗದಲ್ಲಿರುತ್ತವೆ. ”

ರತ್ನನ ಪ್ರಪಂಚದಲ್ಲಿ ಕುಡುಕತನದ ಹುಡುಗಾಟವನ್ನು ಕಂಡು, ರತ್ನ-ನಂಜಿಯ ಪ್ರೇಮ ರಸಾಯನವನ್ನುಕಂಡು ಮುದಗೊಂಡ ಮನವಿರಹಿ ರತ್ನನನ್ನು ಕಂಡಾಗ ಮುದುಡಿಕೊಳ್ಳುತ್ತದೆ. ಕನಸು ಮನಸಿನಲ್ಲಿ ನಂಜಿ, ಅಲ್ಲ—ಅವಳ ಸ್ಮೃತಿಮಾತ್ರ ತುಂಬಿಕೊಳ್ಳುತ್ತದೆ. ಮನೆಗೆ ಹೋಗಲೂ ಬೇಸರ.—

೬ ‘ ಕನ್ನಡ ಸಾಹಿತ್ಯದ ಇತಿಹಾಸ.’
ರಂ. ಶ್ರೀ ಮುಗಳಿ—

"ಗುಡಿಸಿಲ್ ಬಾಗಿಲ್ ಬೀಗದಂಗೇನೆ
ಮನಸಿನ್ ರಾಗಾನು
"ನಂಜಿ ಇಲ್ಲದ್ ಮನೆಗ್ ಯಾಕ್ಬರ್ತಿ?"
ಅಂತೈತ್ ಬೀಗಾನು!"

—ಎಂದು ರತ್ನ ಹಾಡಿದಾಗ, ದುಃಖದಿಂದ ಕರುಳೇ ಕಿತ್ತು ಬರುವಂತಾಗುತ್ತದೆ.

ಹೀಗೆ ರತ್ನನ ಪದಗಳು ಬಾಳಿನ ಹಲವಾರು ಮುಖಗಳನ್ನು ರುದ್ರ-ರಮ್ಯವಾಗಿ ಚಿತ್ರಿಸುತ್ತವೆ.

ಸಾದರ ಸ್ವೀಕಾರ ಮತ್ತು ವಿಮರ್ಶೆ

ಕಾಯಕ:— ಶಿಕ್ಷಕರ ಮತ್ತು ಮಕ್ಕಳ ಸಂಯುಕ್ತ ಪತ್ರಿಕೆ. ಪ್ರಕಾಶಕರು, ತಾಲೂಕಾ ಶಿಕ್ಷಕರ ಸಂಘ ಲಿಂಗಸೂಗೂರ. ಜಿ॥ ರಾಯಚೂರು.

ಶ್ರೀ ಪರ್ವತಯ್ಯ ಶಿವಪುರ ಇವರ ಪ್ರಧಾನ ಸಂಪಾದಕತ್ವದಲ್ಲಿ ಈ ಪತ್ರಿಕೆ ಚೆನ್ನಾಗಿ ಮೈಗೂಡಿ ಬಂದಿದೆ. ಲೇಖನಗಳಲ್ಲಿಯೂ ವೈವಿಧ್ಯತೆಯಿದೆ. ಶೈಕ್ಷಣಿಕ ಸಮಸ್ಯೆಯ ಓರೆ ಕೋರೆಗಳನ್ನು ವಿಶ್ಲೇಷಿಸುವ ಲೇಖನಗಳು ಸೂಕ್ಷ್ಮಾಂಶಗಳನ್ನೊಳಗೊಂಡವುಗಳಲ್ಲದಿದ್ದರೂ ಆದಿಶೆಯಲ್ಲಿ ವಿಚಾರಮಾಡಲು ಪ್ರಚೋದಿಸುವಂತಿವೆ. ಕಾವ್ಯಾನಂದರ 'ವಚನಗಳು,' ಶಾಂತರಸರ 'ಕಾಯಕತತ್ವ,' ಸತ್ಯಂಪೇಟೆ ಲಿಂಗಣ್ಣನ 'ಶರಣರ ಬದುಕು' ಶ್ರೀ ಪರ್ವತಯ್ಯನವರ 'ಲಿಂಗಸೂಗೂರಿನ ಶರಣವರೇಣ್ಯರು' ಹೇಮಾಮಾ ಅವರ 'ಶ್ರೀ ಪಾಣೀಶದಾಸರು' ಮುರಲೀಧರಾಚಾರ್ಯ ಗಲಗಲಿ ಅವರ 'ಶ್ರೀ ಮದ್ದೇಂದ್ರರು' ಓದತಕ್ಕ ಲೇಖನಗಳಾಗಿವೆ. ಮಕ್ಕಳ ವಿಭಾಗವೂ ತನ್ನ ಮಟ್ಟಿಗೆ ಉಪಯುಕ್ತವಾಗಿವೆ. ಸತ್ತಲಿಗುಪ್ಪದ ಪುಣ್ಯಾತ್ರಮದ ಹರಕೆ ಈ ಪತ್ರಿಕೆಗೆ ಸ್ಫೂರ್ತಿಯೂ ಒದಗಿಸಿದೆ: ಬಿಸ್ವರಕ್ಷೆಯೂ ಆಗಿವೆ. ಶ್ರೀ ಬಿ. ವ್ಹಿ. ಹಂಪಣ್ಣಗೌಡರ ಮಾರ್ಗದರ್ಶನದಲ್ಲಿ ಈ ಪತ್ರಿಕೆ ಬಹಳಷ್ಟು ಪ್ರಗತಿ ಸಾಧಿಸಿದೆ.ಪತ್ರಿಕೆ ಕೈಯಲ್ಲಿ ಹಿಡಿದಾಗ,ಓದಲೇಬೇಕು ಎನ್ನುವಂತಿದೆ

ಮೂವರು ಮಹಾತ್ಮರು: (ಕವನ ಸಂಕಲನ) ಶ್ರೀ ಸಿ. ಎಂ. ಮಣೂರ. ಪ್ರಕಾಶಕರು, ಅರುಣಪ್ರಕಾಶನ ಗುಲಬರ್ಗಾ. ಬೆಲೆ ೬೨ ಪೈಸೆ.

ತರುಣಕವಿಗಳಾದ ಶ್ರೀ ಸಿ. ಎಂ. ಮಣೂರರು ರಾಷ್ಟ್ರಪಿತ ಮಹಾತ್ಮಾಗಾಂಧಿ ವಿಶ್ವವಿಖ್ಯಾತನಾಯಕ ಪಂಡಿತ ಜವಾಹರಲಾಲ ನೆಹರು ಮತ್ತು ಮಹಾನ್ ಆದರ್ಶವ್ಯಕ್ತಿ ಲಾಲಬಹಾದ್ದೂರ ಶಾಸ್ತ್ರೀ ಈ ಮೂವರನ್ನು ಕುರಿತು ಕೆಲ ಕವನಗಳನ್ನು ರಚಿಸಿದ್ದಾರೆ. ಗಾಂಧಿಜೀಯವರನ್ನು ಕುರಿತು ಬರೆದ ಕವನಗಳು "ಮೋಹನದಾಸ" "ಭಾರತದ ನಕ್ಷತ್ರ" 'ಶಾಂತಿದೂತ' '[illegible]' 'ಗಾಂಧಿಸ್ಮೃತಿ' 'ಗಾಂಧಿಯೋಗಿ' ನಾವು

ಹಲವು' 'ಭಾರತ ದರ್ಶನ' "ವೀರಖಡ್ಗ" "ದೇವದೂತ" ಮುಂತಾದುವು. ನೆಹರೂರವರನ್ನು ಕುರಿತು ಬರೆದ ಕವನಗಳು "ನೆಹರೂದಾರ್ಶ" "ವೀರ ಜವಾಹರ" ಎಂಬಿವು. ಲಾಲಬಹಾದ್ದೂರರಗಳಿ" " ಕಾಲಪರೀಕ್ಷೆ " ಇವು ಶಾಸ್ತ್ರಿಯವರನ್ನು ಕುರಿತು ಬರೆದ ಕವನಗಳು.

ಇವರು ಇನ್ನೂ ನೂತನಕವಿಗಳು. ಪ್ರತಿಭೆ ಸಾಲದು. ಆದರೂ ಇಂದಿನ ಸಮಾಜದಲ್ಲಿ ಹರಡಿದ ಅಶಾಂತಿ, ದ್ವೇಷಮನೋಭಾವ, ಕ್ಷೋಭೆ, ಮುಂತಾದುವುಗಳನ್ನು ಕಂಡು ಮರುಗಿ ತಲ್ಲಣಿಸಿದ್ದಾರೆ. ಗಾಂಧಿಯವರು ದುಡಿದ ರೀತಿಯನ್ನು, 'ಗಂಧತೀಡಿದ ಹಾಗೆ,' 'ಚಂದನದ ಕೊರಡು ತಾ ಸವೆದು ಸುಣ್ಣಾದ ಹಾಗೆ' ಎಂದು ತೋರಿಸಿ ಜನರನ್ನು ಅಂಥ ಸೇವೆಯತ್ತ ಆಹ್ವಾನಿಸಿದ್ದಾರೆ. ಇದೇ ರೀತಿ ನೆಹರು ಮತ್ತು ಶಾಸ್ತ್ರೀಯವರ ಜೀವನದಿಂದಲೂ ನಾವು ಕಲಿಯಬೇಕಾಗಿದ್ದ ಪಾಠವನ್ನು ಅಲ್ಲಲ್ಲಿಚಿತ್ರಿಸಿದ್ದಾರೆ.

ಕವಿತೆ ಹುಟ್ಟುವುದು ಕವಿಯ ಮಾನಸಿಕ ಪುಟದಿಂದ. ಕಾವ್ಯ ಧಮನಿಯ ತಿದಿ ಕಾವ್ಯ ವಿದ್ಯೆಯ ಪರಿಚಯ, ವೃದ್ಧ ಸೇವಾನುರಾಗ, ಸತತಾಭ್ಯಾಸ ಪ್ರಯತ್ನದಿಂದ ಒತ್ತಬೇಕು. ಆಗ ಆ ಮೂಸಿಯಿಂದ ಪ್ರತಿಭೆಯಕಿಡಿ ಹೊರಹೊಮ್ಮಿ ಶುದ್ಧ ಅಪರಂಜಿಯಂತಹ ಕಾವ್ಯ ಹೊರಹೊಮ್ಮುತ್ತದೆ. ಅಂಥ ಪ್ರಯತ್ನದ ನಾಂದಿ ಇವರ ಕವನ ಸಂಕಲನದಲ್ಲಿ ಅಲ್ಲಲ್ಲಿ ಗೋಚರವಾಗುತ್ತದೆ.ಅದು ಇನ್ನೂ ಪರಿಪಕ್ವಸ್ಥಿತಿಗಿಳಿಯಬೇಕು. ಶ್ರೀ ಪಿ. ಎಂ. ನರಸಿಂಹರು ಬರೆದುದನ್ನು ಬಹು ಬೇಗ ಹೊರಗೆಡಹಬೇಕೆಂಬ ಹಂಬಲ ಬಿಟ್ಟುಕೊಳ್ಳುವುದಲ್ಲದೆ, ಹೇಗೆ ಬರೆಯಬೇಕೆಂಬುದರ ಕಡೆಗೇ ತಮ್ಮ ದೃಷ್ಟಿಯಿರಿಸಿದರೆ ಅವರಿಂದ ಇನ್ನೂ ಒಳ್ಳೆಯ ಕೃತಿಗಳನ್ನು ಅಪೇಕ್ಷಿಸಬಹುದು !

ಕನ್ನಡಮ್ಮನ ಕರೆ— ನಾಟಕಕಾರರು ಶ್ರೀ ನಾಗಪ್ಪ ಶೆಟ್ಟರ ಬನಪುರ. ಪ್ರಕಾಶಕರು ಶ್ರೀ ಚೆನ್ನಬಸಪ್ಪಗೌಡ ಶಂಭುರಡ್ಡಿ ಬನ್ನಾಪುರ. ೧೬೦ ಪುಟಗಳು. ಬೆಲೆ ಎರಡು ರೂಪಾಯಿ.

ಶ್ರೀ ಚನ್ನಬಸವ ಸಂತನವರ ಪೌರಾಣಿಕ ನಾಟಕ— ನಾಟಕಕಾರರು ಶ್ರೀ ನಾಗಪ್ಪ ಶೆಟ್ಟರ— ಪ್ರಕಾಶಕರು ಶ್ರೀ ಜಿ. ಎಂ. ಗುರುಬಸವಶಾಸ್ತ್ರಿ. ಪುಟಗಳು ೧೦೧ ಬೆಲೆ. ಎರಡು ರೂಪಾಯಿ.

ಮಣ್ಣಿನ ಮಗ— (ಕವನ ಸಂಕಲನ) ಶ್ರೀ ಎ. ಕೆ. ರಾಮೇಶ್ವರ. ಪ್ರಕಾಶಕರು –ನಟರಾಜ ಪ್ರಕಾಶನ. ಕಲಬುರ್ಗಿ ೬೬ ಪುಟಗಳು. ಬೆಲೆ ಒಂದುರೂಪಾಯಿ.

ಪತ್ರಿಕಾ ಪ್ರಶಂಸಾ

ಶಹಪೂರ ನಗರೇ ರಮ್ಯೇ । ವಾಸ್ತವ್ಯೋ ದ್ವಿಜಸತ್ತಮಃ ॥
ಸಗರಾನ್ವಯ ಸಂಜಾತಃ । ಶ್ರೀ ನೃಸಿಂಹ ಪದಾಶ್ರಯಃ ॥೧॥

ಕುಶಲಃ ಸರ್ವವಿದ್ಯಾಸು । ನಿಪುಣೋ ಗ್ರಂಥ ಲೇಖನೇ ॥
ಕೃಷ್ಣಾಚಾರ್ಯೋಽತಿ ವಿಬುಧೋ । ರಾಜತೇಽತೀವ ಭಾಗ್ಯವಾನ್ ॥೨॥

ಅಧುನಾ ಮುದ್ರಿತಾನೇನ । ನಾಮ್ನಾ ಮಂದಾಕಿನೀಹಿಸಾ ॥
ಪತ್ರಿಕೇಯಂ ನಾತಿ ಕ್ಲಿಷ್ಟಾ । ಬಾಲಾನಾಂ ಬೋಧ ಸಿದ್ಧಿದಾ ॥೩॥

ಆಬಾಲ್ಯಾತ್ ಸರ್ವಶಾಸ್ತ್ರೇಷು । ಕೃತ ಭೂರಿ ಪರಿಶ್ರಮಮ್ ॥
ಕೃಷ್ಣಾಚಾರ್ಯಂ ವಿನಾಕೋಽನ್ಯಃ । ಶಕ್ತಃ ಸ್ಯಾತ್ತತ್ ಪ್ರಕಾಶನೇ ॥೪॥

ಸುಲಭಾ ಸರಲಾ ಹೃದ್ಯಾ । ಗದ್ಯ ಪದ್ಯಾತ್ಮಿಕಾ ಭೃಶಮ್ ॥
ತಥೈವ ಪಂಡಿತಾನಾಂಚ । ಸಮ್ಯಗರ್ಥ ಪ್ರಕಾಶಿನೀ ॥೫॥

ಕೇನಾಪ್ಯ ಮುದ್ರಿತಚರ । ಪತ್ರಿಕೇಯಂ ಬುಧಾದೃತಾ ॥
ಸಂಗೃಹ್ಯ ಸಕಲಾನರ್ಥಾನ್ ಪ್ರಾಪ್ನುಯುರ್ಬೋಧಕಾರಿಣಃ ॥೬॥

ಸುರಲೋಕೇ ಸ್ಥಿತಾದೇವಿ । ನಾಮ್ನಾ ಭಾಗೀರಥೀ ಸದಾ ॥
ಮಂದಾಕಿನೀತಿ ನಾಮ್ನಾಸಾ । ಪ್ರಥಿತಾ ಸಗರಾಚಲೇ ॥೭॥

ಭಗೀರಥ ಪ್ರಯತ್ನೇನ । ಆಗತಾ ಸುರಸಿಮ್ನಗಾ ॥
ತಸ್ಮಾನ್ ಮಂದಾಕಿನೀನಾಮ್ನಾ । ಪತ್ರಿಕಾ ಸುಪ್ರತಿಷ್ಠಿತಾ ॥೮॥

ಆಮೂಲಾಗ್ರಂ ಪಠಿತ್ವೇಮಾಂ । ಮಗ್ನೋಹ್ಯಾನಂದ ಸಾಗರೇ ॥
ಪ್ರಶಸ್ತಿ ಪತ್ರಿಕಾಮೇತಾ । ಮಲಿಖಂ ಶ್ರೀಶ ತುಷ್ಟಯೇ ॥೯॥

ಸಗರ ಪ್ರದ್ಯುಮ್ನಾಚಾರ್ಯ–

ಸಂಪಾದಕೀಯ

ಶ್ರೀ. ಹುಯಿಲಗೋಳ ನಾರಾಯಣರಾಯರು ಯಾವ ಶುಭ ಗಳಿಗೆಯಲ್ಲಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿದ್ದರೊ, ಅದು ನಮ್ಮೆಲ್ಲರಲ್ಲಿ ಒಂದು ದಿವ್ಯ ಚೈತನ್ಯವನ್ನು ಒದವಿಸಿತ್ತು. ಆ ಹಾಡಿನ ಮಂಜುಲರವ ಮನೆಮನೆಗೂ ಕೇಳಿಸಿ ಹೆಣ್ಣು–ಗಂಡು ಕೂಸು–ಕುನ್ನಿ ಎಲ್ಲರಲ್ಲಿಯೂ ನಾಡಿನ ಬಗ್ಗೆ ಸದಭಿಮಾನ ಜಾಗ್ರತಗೊಳಿಸಿತ್ತು. 'ನಾಡನ್ನು ಕಟ್ಟಲು ಪ್ರಾಣತೆತ್ತೇವು ! ತಾಯಿಯ ಸೀಳು ದೇಹವನ್ನು ಹಾಗೆಯೇ ಇರಗೊಡಲಾರೆವು !' ಎಂದು ಪಣತೊಟ್ಟು ಎಲ್ಲರೂ ಮುಂದೆ ಬಂದರು. 'ನನ್ನದು ಈ ಕನ್ನಡನಾಡು' ಎಂದು ಒಬ್ಬ ಕವಿ ಹಾಡಿದರೆ, 'ಹಚ್ಚೇವು ಕನ್ನಡದ ದೀಪ!' ಎಂದು ಮಗದೊಬ್ಬರು ಮುಂದೆ ಬಂದರು. ಕನ್ನಡದ ಕಣ್ವರಂತೂ, 'ಏಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್' ಎಂದು ಹಾರೈಸಿ, ದಿಗ್ದಿಗಂತದಾಚೆ ಕನ್ನಡದ ಕಹಳೆಯನ್ನು ಊದಿದರು. ಇದೇ ರೀತಿ ಒಬ್ಬರಲ್ಲ, ಇಬ್ಬರಲ್ಲ, ನೂರಾರು ಜನ ಕವಿಗಳು, ಸಹಸ್ರಾರು ಜನ ಸಾಹಿತಿಗಳು ಕನ್ನಡ ತಾಯ ಸುರಮ್ಯ. ಸುಭಗ ಚಿತ್ರವನ್ನು ತಮ್ಮ ಮುಂದಿಟ್ಟುಕೊಂಡು ಅಹರ್ನಿಶಿ ಅವಳ ಮುಕ್ತಿಗಾಗಿ, ನಾಡಿನ ಐಕ್ಯ ಸಾಧನೆಗಾಗಿ ಶ್ರಮಿಸಿದರು. ನಾಡು ಒಂದಾಗುವ ಮುಂಚೆಯೆ, 'ಭಾರತಾಂಬೆಯ ಮನೆಯ ಲಕ್ಷದೀಪಗಳಲ್ಲಿ ಕನ್ನಡದ ದೀಪವದೊ ಕಾಣುತಿಹುದು!' ಎಂದು ಶುಭ ಭವಿಷ್ಯವನ್ನು ನುಡಿದರು. ಹಾಗೆ ನುಡಿಯಲಿಕ್ಕೆ ಒಂದು ಸಬಲ ಕಾರಣವೂ ಇತ್ತು. ರಾಜಕೀಯ ದೃಷ್ಟಿಯಿಂದ ನಾಡು ಒಂದುಗೂಡದೇ ಇದ್ದರೂ ಸಾಂಸ್ಕೃತಿಕ ಮತ್ತು ಭಾವನಾತ್ಮಕ ದೃಷ್ಟಿಯಿಂದ ನಾಡು ಎಂದೋ ಒಂದಾಗಿತ್ತು. ಇವರು ಮೈಸೂರಿನವರು, ಇವರು ಕೊಡಗಿನವರು, ಇವರು ಹೈದರಾಬಾದಿನ ಕನ್ನಡಿಗರು, ಇವರು ಉತ್ತರ ಕರ್ನಾಟಕದವರು, ಎಂಬ ಕ್ಷುದ್ರವಿಚಾರವೇ ಮೂಡಿ ಬರುತ್ತಿದ್ದಿಲ್ಲ. ಶ್ರೀಯವರು ಸುರಪುರಕ್ಕೆ ಬಂದರೆ, ನಮ್ಮವರೇ ಬಂದರೆಂಬ ಆದರ; ಬೇಂದ್ರೆಯವರು ಬೆಂಗಳೂರಿಗೆ ಹೋದರೆ ಅದೇ ಅಮಿತ ಉತ್ಸಾಹ. 'ಮಾಸ್ತಿ'ಯವರು ಮೈಸೂರಿಗೆ ತೆರಳಿದರೆ ಅದೇ ಸಂಭ್ರಮದ ಸ್ವಾಗತ. ಗೋವಿಂದ ಪೈ. ಕಾರಂತ, ಮಾಸ್ತಿ, ಯಾರು ಯಾವ ಭಾಗಕ್ಕೆ ಹೋದರೂ ಅದೇ ಗೌರವ ! ಇಂಥ ಪವಿತ್ರ ವಾತಾವರಣ ಆ ಕಾಲದಲ್ಲಿ ನಾಡಿನ ಮೂಲೆ ಮೂಲೆಗೂ ಪಸರಿತ್ತು. ನಾಡಹಬ್ಬಗಳಾದರೆ ಏನು ಸಂಭ್ರಮ ; ಗಜಾನನೋತ್ಸವ ಜರುಗಿದರೆ ಎಷ್ಟು ಆನಂದ! ಆ ಎಲ್ಲ ಹಬ್ಬಗಳ ಮತ್ತು ಉತ್ಸವಗಳ ಮುಖ್ಯಗುರಿ ನಾಡುಕಟ್ಟುವುದೇ ಆಗಿತ್ತು. ಪ್ರತಿವರುಷ ಜರುಗುವ ಸಾಹಿತ್ಯ ಸಮ್ಮೇಳನಗಳಂತೂ ನಾಡನ್ನು ಕಟ್ಟಲು ನಿರ್ಮಿಸಿದ ದಿವ್ಯಾಸ್ತ್ರಗಳೇ ಆಗಿದ್ದುವು. ಸಾಹಿತಿಗಳಿಗಷ್ಟೇ ಅಲ್ಲ, ಕನ್ನಡದ ಜನತೆಗೂ ಅದೊಂದು ಅಪೂರ್ವ ಹಬ್ಬ!

ಆ ಕಾಲವನ್ನೂ ನೋಡಿದೆವು. ನಾಡು ಒಂದಾದ ಮೇಲಿನ ವಿದ್ಯಮಾನಗಳನ್ನೂ ವೀಕ್ಷಿಸುತ್ತಿದ್ದೇವೆ. ಈ ಚಳವಳಿ ಸಾಹಿತಿಗಳ ಕೈಯೊಳಗಿಂದ ರಾಜಕಾರಣಿಗಳ ಕೈಯಲ್ಲಿ ಯಾವಾಗ ಹೋಯಿತೋ ಅದರ ಬಣ್ಣವೇ ಬೇರೆಯಾಯಿತು. ಇಲ್ಲಿ ಕೇವಲ ನಾಡ

ಕಟ್ಟುವ ಹಂಬಲವಿತ್ತು; ಅಲ್ಲಿ ಆಳುವ ಆಶೆ ತಲೆಯೆತ್ತಿತು. ಹೀಗಾಗಿ 'ಕರ್ನಾಟಕ' 'ಹೋಗಿ ಮೈಸೂರಾಯಿತು.' ಅನೇಕರು 'ಆಗಲಿ!' ಎಂದರು. ನಾಡಿನ ಹೆಸರ, 'ಕರ್ನಾಟಕ' ವಾದರೇನು.' ಮೈಸೂರಾದರೇನು ! ನಾವೆಲ್ಲ ಒಂದೇ ತಾಯ ಮಕ್ಕಳಲ್ಲವೆ?' ಎಂದುಕೊಂಡು, ಸವಿವಿಷವ ತಿಂದು ನೀಲಕಂಠರಾದರು. ಆದರೆ ಈಗ ನಾಡನ್ನು ಒಡೆದು ಎರಡು ಹೋಳಾಗಿಸುವ ಮಾತಾಡುತ್ತಿರುವುದು ಯಾವ ಭಾಗಕ್ಕೂ ಭೂಷಣವಲ್ಲ. ಅಲ್ಲದೆ ಇದು ಕೇವಲ ರಾಜಕಾರಣಿಗಳ ಸೊತ್ತೂ ಅಲ್ಲ. ಎರಡೂವರೆಕೋಟಿ ಕನ್ನಡಿಗರ ಸೊತ್ತಾಗಿದೆ. ಅಲ್ಲದೆ ಋಷಿ ಸದೃಶ ಕವಿಗಳ ಬಯಕೆಯ ಬೀಡಾಗಿದೆ. ಇದು. ಯಾವ ಒಬ್ಬ ಕವಿಯೂ ಈ ವಿಭಜನೆಯನ್ನು ಸಹಿಸಲಾರ, ಎಂದು ನನಗೆನಿಸುತ್ತದೆ. 'ಕಾವೇರಿಯಿಂದ ಗೋದಾವರಿಯವರೆಗೆ ಇದ್ದ ನಾಡು ಕನ್ನಡ ನಾಡು' ಎಂಬುದನ್ನು ನಾವು ಪುನಃ ಪುನಃ ಹೇಳಬೇಕಾದ ಪ್ರಸಂಗವು ಉಳಿದಿಲ್ಲ. ನೂರಾರು ಕಂಠಗಳು, ಸಹಸ್ರಾರು ಮುಖಗಳು ಇದನ್ನು ಒತ್ತಿ ಒತ್ತಿ ಹೇಳಿವೆ. ಏಕ ಕಂಠದಿಂದ ಕೂಗಿವೆ. ಇದಕ್ಕೆ ಶಿಲಾಶಾಸನಗಳೂ ತಾಮ್ರ ಪಟಗಳೂ, ತಾಳಗರಿಯ ಗ್ರಂಥಗಳೂ ಮಾಸತಿ ಕಲ್ಲುಗಳೂ, ವೀರಗಲ್ಲುಗಳೂ ಸಾರಿ ಸಾರಿ ಹೇಳುತ್ತಿವೆ. ಅದನ್ನೆಲ್ಲ ಬದಿಗಿರಿಸಿ, ಸ್ವಹಿತಕ್ಕಾಗಿಯೆಂದು ಭ್ರಮಿಸಿ ಈ ರೀತಿಯ ಗುಲ್ಲೆಬ್ಬಿಸುವವರು ಕನ್ನಡ ತಾಯ ಮಕ್ಕಳಿಗೆ ಎಂದೆಂದಿಗೂ ಶೋಭೆಯನ್ನು ತರಲಾರರು. ಪ್ರತಿಯೊಬ್ಬ ಕನ್ನಡಿಗನೂ, ನಿಜವಾಗಿ ಆತನಲ್ಲಿ ಕನ್ನಡ ರಕ್ತವಿದ್ದರೆ, ಇನ್ನು ಮುಂದೆ ಅಪಸ್ವರದ ಯಾವ ನುಡಿಯನ್ನೂ ನುಡಿಯಲು ದಯೆಯಿಟ್ಟು ಪ್ರಯತ್ನಿಸಬಾರದು ವಿಶಾಲವಾದ ರಾಜ್ಯದಲ್ಲಿ ಕೆಲಭಾಗಗಳಿಗೆ ಸುಖ ಸಮೃದ್ಧಿಗಳು ಬಹುಬೇಗ ಲಭ್ಯವಾಗಿರಲಿಕ್ಕಿಲ್ಲ. ಸ್ವಲ್ಪ ತಾಳ್ಮೆಯಿಂದ ಕಾಯಬೇಕು. ಬಂದುದನ್ನು ಅನುಭವಿಸಲು ಮುಂದಾಗಬೇಕು. ನನ್ನ ಒಬ್ಬ ತಮ್ಮನಿಗೋ, ಅಣ್ಣನಿಗೋ ಲಾಭವಾದರೆ ಆ ಲಾಭ ನನ್ನದೇ ಎಂಬ ಉದಾರ ಭಾವನೆಯನ್ನು ತಾಳಬೇಕು. ನಾವು ಇಷ್ಟನ್ನೂ ಮಾಡದೇ ಹೋದರೆ ಕನ್ನಡಿಗರಾಗಿ ಹುಟ್ಟಿ ಸಾರ್ಥಕವೇನು? ಈಗ ನಾವು ಮಾಸ್ತಿಯವರಿಗೆ ಕನ್ನಡದ ಆಸ್ತಿ—ಎಂದು ಹೇಳುತ್ತೇವೆ. 'ಮೈಸೂರಿನ ಆಸ್ತಿ' ಎಂದು ಯಾರೂ ನುಡಿಯುವದಿಲ್ಲ ಹಾಗೆ ಅಂದರೆ ಅದಕ್ಕೆ ಅರ್ಥಗಾಂಭೀರ್ಯವೂ ಬರುವುದಿಲ್ಲ; ಭಾವ ಸೌಂದರ್ಯವೂ ವ್ಯಕ್ತವಾಗುವದಿಲ್ಲ. ಅದೊಂದು ಸಂಕುಚಿತತೆಯ ದ್ಯೋತಕವಾಗಿ ತೋರುತ್ತದೆ.

ಇಷ್ಟಾದರೂ ಕೆಲವರು ಕೊನೆಯವರೆಗೂ ಒಂದೇ ಹಟ ಹಿಡಿದರೆ, ರಾಜ್ಯ ವಿಭಜನೆ ಬೇಕೇ ಬೇಕು ! ಎಂದು ಸಾಧಿಸಿದರೆ, 'ಕನ್ನಡಾಂಬೆಯೆ ತಾಯಿ' ಕನ್ನಡಾಂಬೆಯೆ ತಂದೆ. ಕನ್ನಡಾಂಬೆಯೆ ಎನ್ನ ಬಂಧು ಬಳಗ ! ಮನ್ನಿಸದೆ ಯಾರಾದರನ್ನ ಬಗೆದರೆ ಮಾತ್ರ, ಬೆನ್ನಮೂಳೆಯ ಕಿತ್ತಿ ಕೆನ್ನೆ ಬಡಿಯುವೆನೆ?' ಎಂಬ ಕವಿವಾಣಿಯಿಂದ ಅವರನ್ನು ಎಚ್ಚರಿಸ ಬೇಕಾದೀತು ! 'ಕರ್ನಾಟಕ ಒಂದೇ! ಎಂದೆಂದೂ ಒಂದೆ' ಎಂಬ ಕಿವಿ ಮಂತ್ರವನ್ನು ಕಲಿಸಬೇಕಾದೀತು !

ಕನ್ನಡಂಗೆಲ್ಗೆ ! ಕನ್ನಡತಾಯ್ ಬಾಳ್ಗೆ !

'ಇಂದಿರಾ'ರು ಇನ್ನಿಲ್ಲವಾದರು !

ಕನ್ನಡನಾಡಿಗೆ ಅದಾವ ವಿಪತ್ತು ಬಂದೊದಗಿದೆಯೊ ತಿಳಿಯದು. ಒಬ್ಬರ ಹಿಂದೆ ಒಬ್ಬರು ನಮ್ಮನ್ನಗಲ ತೊಡಗಿದ್ದಾರೆ. ಹೋದ ಸಲದ ಸಂಚಿಕೆಯಲ್ಲಿ ಇಬ್ಬರನ್ನು ಕುರಿತು ಕಂಬನಿ ಮಿಡಿಯುವುದರೊಳಗಾಗಿ ಈ ಸಲ ಮತ್ತಿಬ್ಬರನ್ನು ಕುರಿತು ಕಂಬನಿ ಗರೆಯುವಂತಾದುದು ನಮ್ಮ ದೌರ್ಭಾಗ್ಯ.

ಹತ್ತು ವರ್ಷಗಳಹಿಂದೆ 'ಗೌರಮ್ಮ'ನವರನ್ನು ಬಿಟ್ಟರೆ 'ಕನ್ನಡದಲ್ಲಿ ಹೇಳಕೊಳ್ಳುವಂತಹ ಯಾವ ಅಂಥ ಲೇಖಿಕೆಯರಿದ್ದಾರೆ?' ಎಂದು ಮೂಗು ಮುರಿಯುವ ಕಾಲ ಒಂದಿತ್ತು. ಆದರೆ ಈ ಹತ್ತು ಹದಿನೈದು ವರ್ಷಗಳಲ್ಲಿ ನಾವೂ ನಿಮ್ಮ ಸರಿಸಮಾನ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿದ್ದೇವೆ ! ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಕೆಲ ಲೇಖಿಕೆಯರು ಪ್ರಕಟವಾದರು. ನಿಜವಾಗಿಯೂ ಅಂಥ ಒಳ್ಳೆಯ ಕೃತಿಗಳಿಂದ ಬೆಳಕುಕಂಡರು. ಅಷ್ಟೇ ಅಲ್ಲ, ಸಾರಸ್ವತ ಪ್ರಪಂಚದ ಸಾಹಿತ್ಯಲೋಕದಲ್ಲಿ ತಮ್ಮದೂ ಆದ ಒಂದು ವಿಶಿಷ್ಟವಾದ ಸ್ಥಾನವನ್ನು ನಿರ್ಮಿಸಿ ಕೊಂಡರು. ಅಂಥವರಲ್ಲಿ ಕೇವಲ ಇಪ್ಪತ್ತೆಂಟು ವರ್ಷಗಳ ಅಲ್ಪಾಯುಷ್ಯದಲ್ಲಿಯೇ ನಮ್ಮನ್ನಗಲಿದ ಶ್ರೀಮ. ಕೆ. ಎಚ್. ಆರ್. ಇಂದಿರಾರವರೂ ಒಬ್ಬರು. ತಡವಾಗಿ ಬೆಳಕಿಗೆ ಬಂದವರೂ ಬಹು ಬೇಗ ಬೆಳೆದರು. ಬೆಳೆಯುತ್ತಲೇ ಅಳಿದರು. ಅವರ ದೇಹ ಅಳಿದಿರಬಹುದು ! ಅವರ ಸಾಹಿತ್ಯ ಅಳಿಯದು ! ಬಹುಕಾಲ ಅದು ತನ್ನ ಪ್ರಭಾವವನ್ನು ಬೀರುತ್ತಲೇ ಇರುವುದು.

ಅವರು ಕೇವಲ ಕಾದಂಬರೀ ಲೇಖಿಕೆಯರಷ್ಟೇ ಅಲ್ಲ; ಕತೆಗಾರ್ತಿ, ಹರಟೆಗಾರ್ತಿ, ನಾಟಕ ಲೇಖಿಕೆ. ೧೯೬೭ರಲ್ಲಿ ಕನ್ನಡ ಲೇಖಿಕೆಯರ ಸಂಘವೊಂದನ್ನು ಸ್ಥಾಪಿಸಿ, ಎಪ್ಪತ್ತೆರಡು ಕಥೆಗಳ ಒಂದು ಬೃಹತ್ ಸಂಚಿಕೆಯನ್ನು ಪ್ರಕಟಿಸಿದರು. ಅವರ ಆ 'ಕಥಾ ವಲ್ಲರಿ' ಲೇಖಿಕೆಯರ ಕಥನ ಕಲೆಗೊಂದು ನಿದರ್ಶನವಾಗಿದೆ.

ಅವರ ಕಾದಂಬರಿಗಳಲ್ಲಿ 'ಮುಗಿಲ ಮಲ್ಲಿಗೆ' 'ಬಯಕೆ ಬಳ್ಳಿ' ಒಳ್ಳೆಯ ಕಾದಂಬರಿಗಳೆಂದು ಪ್ರಸಿದ್ಧಿ ಪಡೆದಿವೆ. ಅವರ 'ಚೌಕಾಬಾರ' ಎಂಬ ಕಾದಂಬರಿಯು ನಾಡಿನ ಹಿರಿಯ ಪತ್ರಿಕೆಯಾದ 'ಸಂಯುಕ್ತ ಕರ್ನಾಟಕ'ದಲ್ಲಿ ಧಾರಾ ವಾಹಿಯಾಗಿ ಪ್ರಕಟವಾಯಿತು

ಇನ್ನೂ ಅವರಿಂದ ನುಡಿ ಸಲ್ಲಾಯಿಗೆ ಅಪೂರ್ವ ಕಾಣಿಕೆಗಳುಲಭಿಸುತ್ತಿದ್ದುವು. ವಿಧಿ, ಮೊಳಕೆ ಯೊಡೆಯುವುದರಲ್ಲಿಯೇ ಸಸಿಯನ್ನು ನಿರ್ದಯೆಯಿಂದ ಕಿತ್ತು ಬಿಸಾಡಿದಂತಾಯಿತು ! ನಾನ್ಯಃ ಪಂಥಾ....!

'ದೇವರು ಅವರ ಪವಿತ್ರ ಆತ್ಮಕ್ಕೆ ಸದ್ಗತಿಯನ್ನು ದಯಪಾಲಿಸಲಿ; ಕುಟುಂಬ ವರ್ಗದವರಿಗೂ, ಎಲ್ಲ ಕನ್ನಡ ಸೋದರ–ಸೋದರಿಯರಿಗೂ ತಾಳ್ಮೆಯನ್ನು ಕರುಣಿಸಲಿ!' ಎಂದು ದೇವರಲ್ಲಿ ಮೊರೆ ಇಡಬೇಕಾಗಿದೆ.

ಕನ್ನಡದ 'ಭರತ'ನ ಕಣ್ಮರೆ

ದಿನಾಂಕ ೨೪-೧೦-೬೯ರ ರಾತ್ರಿ ಅಕಾಲಿಕವಾಗಿ ಹೃದಯವಿಕಾರದಿಂದ ಶಿವನ ಸಾನ್ನಿಧ್ಯವನ್ನು ಹೊಂದಿದ ಶ್ರೀ ಶಿವಲಿಂಗಪ್ಪ ರುದ್ರಪ್ಪ ಕಂಠಿಯವರನ್ನು ಕುರಿತು

ಯಾರು ಕಂಬನಿ ಮಿಡಿಯಲಾರರು ? ಸರಳ ಸಾತ್ವಿಕ ಸ್ವಭಾವದ ಆ ಮೂರ್ತಿಯನ್ನು ಕಂಡಾಗ, ಸಂದರ್ಶಿಸಿ ಮಾತನಾಡಿದಾಗ ಹೃದಯ ಪ್ರಸನ್ನ ಗೊಳ್ಳುತ್ತಿತ್ತು. ‘ಅಯ್ಯೋ! ಇವರು ಮಂತ್ರಿಗಳೇ? ಸ್ವಲ್ಪವೂ ಆಢ್ಯತೆ–ಅಹಂಕಾರ ಇಲ್ಲವಲ್ಲ?’ ಎಂದು ಪ್ರತಿಯೊಬ್ಬರ ಮನಸ್ಸೂ ತಂತಾನೇ ನುಡಿಯುತ್ತಿತ್ತು.

ಶ್ರೀ ಕಂಠಿಯವರು ಬೆಳಕಿಗೆ ಬಂದುದು ಇತ್ತೀಚೆಗೆ. ಆವರೆಗೂ ಅವರು ಎಲೆಯ ಮರೆಯ ಹೂವಿನಂತೆಯೇ ತಮ್ಮ ಸೌರಭವನ್ನು ಬೀರುತ್ತಲಿದ್ದರು. ಮುಂಬೈ ಸರಕಾರದಲ್ಲಿ ಪಾರ್ಲಿಮೆಂಟರೀ ಕಾರ್ಯದರ್ಶಿಯಾಗಿ ಇವರು ಕೆಲಸ ಮಾಡುತ್ತಿದ್ದಾಗ ಶ್ರೀ· ಯಶವಂತರಾವ ಚವ್ಹಾಣರು ಸಹ ಕಾರ್ಯದರ್ಶಿಯಾಗಿದ್ದರಂತೆ! ಆ ತರುವಾಯ ೧೯೫೨ ರಲ್ಲಿ ಮುಂಬೈ ವಿಧಾನ ಸಭೆಗೆ ಉಪ ಸಭಾಪತಿಯಾಗಿ ಆಯ್ಕೆಯಾದರು. ತಮ್ಮ ಕಾಯದೇ ಪಾಂಡಿತ್ಯದಿಂದಾಗಿ ಆ ಸ್ಥಾನಕ್ಕೆ ಭೂಷಣ ಪ್ರಾಯರೂ ಆಗಿದ್ದರು.

ಕರ್ನಾಟಕ ರಾಜ್ಯ ಉದಯವಾದನಂತರ

ಕರ್ನಾಟಕ ರಾಜ್ಯವು ಉದಯವಾದನಂತರ ಇವರು ಆರು ವರ್ಷಗಳಕಾಲ ಮೈಸೂರ ವಿಧಾನ ಸಭೆಯ ಸಭಾಪತಿಯಾಗಿ ಆಯ್ಕೆಯಾಗಿ ಬಹುದಕ್ಷತೆಯಿಂದಲೂ, ಮರ್ಯಾದೆಯಿಂದಲೂ ಆ ಕಾರ್ಯವನ್ನು ನೆರವೇರಿಸಿದರು. ಆನಂತರ ಶಿಕ್ಷಣ ಸಚಿವರಾಗಿ ಗೈದ ಕಾರ್ಯಗಳು ನಿಜವಾಗಿಯೂ ಸುವರ್ಣಾಕ್ಷರಗಳಲ್ಲಿ ಬರೆದಿಡ ತಕ್ಕಂಥವುಗಳು.

ಬೆಂಗಳೂರಿಗೊಂದು ವಿಶ್ವವಿದ್ಯಾನಿಲಯದ ಆವಶ್ಯಕತೆ ಯಿತ್ತು. ಅದನ್ನುಲೀಲಾಜಾಲವಾಗಿ ಸಾಧಿಸಿ ತೋರಿಸಿದರು. ಮಾಧ್ಯಮಿಕ ಶಿಕ್ಷಣವನ್ನು ಪುಕ್ಕಟೆಯಾಗಿ ಮಾಡಿದರು. ಧನ ಸಹಾಯ ಸಂಹಿತೆಗನುಸಾರ ನಡೆಯುವ ಎಲ್ಲ ಮಾಧ್ಯಮಿಕ ಶಾಲಾ ಶಿಕ್ಷಕರಿಗೂ ತ್ರಿವಿಧ ಸೌಲಭ್ಯ ದೊರೆಯುವಂತೆ ಮಾಡಿಕೊಟ್ಟರು. ವಿಜಾಪುರದಲ್ಲಿ ಸೈನಿಕ ಶಾಲೆಯೊಂದನ್ನು ಸ್ಥಾಪಿಸಿದ್ದಲ್ಲದೆ, ಕಿತ್ತೂರ ಚೆನ್ನಮ್ಮ ಸ್ಮಾರಕ ಸಮಿತಿಯ ಆಶ್ರಯದಲ್ಲಿ ಬಾಲಿಕೆಯರ ಗುರುಕುಲ ವಿದ್ಯಾಲಯದ ಸ್ಥಾಪನೆಗೂ ನೆರವಾದರು. ತಮ್ಮ ಮರಣದ ಹಿಂದಿನ ದಿನವೇ ಈ ಗುರುಕುಲದಲ್ಲಿ ಅವರು ಭಾಷಣ ಮಾಡುತ್ತಿದ್ದಾಗ ಸೌಮ್ಯ ಸ್ವರೂಪದ ಹೃದಯಾಘಾತವಾಗಿ ಅದು ಮರುದಿನವೇ ಅವರನ್ನು ನಮ್ಮಿಂದ ದೂರ ಮಾಡಿತು.

ಅವರ ಇಡಿಯ ಜೀವನದಲ್ಲಿ ಚಿರಸ್ಥಾಯಿಯಾಗಿಯೂ, ಆದರ್ಶಪ್ರಾಯವಾಗಿಯೂ ಉಳಿಯುವ ಅತಿಮಹತ್ವದ ಕಾರ್ಯವೆಂದರೆ ನಿಜಲಿಂಗಪ್ಪನವರು ಪುನಃ ಆಯ್ಕೆಯಾಗಿ ಬರುವವರೆಗೂ ಮುಖ್ಯ ಮಂತ್ರಿ ಪದವಿಯನ್ನು ಕಾಯ್ದುಕೊಂಡಿದ್ದು ಅದನ್ನು ಪುನಃ ಅವರು ಬಂದಕೂಡಲೆ ಒಪ್ಪಿಸಿದ್ದುದು. ಇದು ರಾಮರಾಜ್ಯದಲ್ಲಿನ ಭರತನ ಪಾತ್ರಕ್ಕೆ ಸರಿಸಾಟಿಯಾಗಿದೆ. ಇಂಥ ಮನೋಧರ್ಮ ಬೆಳೆಸಿಕೊಂಡು ಬಂದುದು ಸಾಮಾನ್ಯವಾದ ಮಾತಲ್ಲ ಇಂಥ ಸ್ವಾರ್ಥಮಯ ಜಗತ್ತಿನಲ್ಲಿ! ಇವರಿಂದಾಗಿ ಅವರ ಕೀರ್ತಿ ಶಾಶ್ವತವಾಗಿ ಉಳಿಯುವಂತಾಯಿತು. ದೇವರು ಅವರ ಆತ್ಮಕ್ಕೆ ಶಾಂತಿಯಲಿ! ಅಪಾರ ಬಂಧುವರ್ಗಕ್ಕೂ ಕನ್ನಡದ ಜನತೆಗೂ ತಾಳ್ಮೆ ದಯಪಾಲಿಸಲಿ!

ತಾ|| 1-12-1969 ರಿಂದ 31-12-1969 ರ ವರೆಗೆ.

★ ದ್ವಾದಶ ರಾಶಿ ಭವಿಷ್ಯ ★

ಲೇ|| ಬಾಳಶಾಸ್ತ್ರಿ ರಾಜಜೋಶಿ ದೋರನಹಳ್ಳಿ.

ಮೇಷ - ಈ ಮಾಸದಲ್ಲಿ ನಿಮ್ಮ ಅದೃಷ್ಟವು ನಿಮ್ಮನ್ನು ಹೀನ ಸ್ಥಿತಿಗೆ ತಳ್ಳುತ್ತದೆ ಶತ್ರುವರ್ಗದ ಕಾಟವು ನಿಮಗೆ ತುಂಬಾ ತೊಂದರೆಯನ್ನು ಮಾಡುವದು. ಗೃಹ ಕಲಹ ದೇಶ ಪರ್ಯಟನ ದೇಹಾಲಸ್ಯಗಳು ದಿನ ದಿಸಕ್ಕೆ ಹೆಚ್ಚುವ ಸಂಭವವಿದೆ.

ವೃಷಭ ನಿಮ್ಮ ದುಃಖ ದಾರಿದ್ರ್ಯಗಳು ಈ ಮಾಸದಲ್ಲಿ ಮಾಯವಾಗುವವು. ಎಂಥಾ ಕಾರ್ಯವನ್ನಾದರೂ ನಿರಾತಂಕವಾಗಿ ಕೊನೆಗಾಣಿಸುವಿರಿ ಕೋರ್ಟ ಕಚೇರಿಗಳ ವ್ಯವಹಾರಂದಲ್ಲೂ ಸಾಮಾಜಿಕಕ್ಷೇತ್ರದಲ್ಲೂ ನಿಮ್ಮ ಇಷ್ಟಾರ್ಥಗಳು ಈಡೇರುವವು

ಮಿಥುನ— ಈಮಾಸದಲ್ಲಿ ನಿಮ್ಮ ಬಯಕೆಗಳೆಲ್ಲ ಬಯಲಾಗುತ್ತವೆ. ನಾನಾ ಮುಖದ ಖರ್ಚುಗಳು ನಿಮ್ಮನ್ನು ಆವರಿಸಲಿವೆ. ಸಾಲಮಾಡುವ ಪ್ರಸಂಗಗಳು ಬರಬಹುದು. ದೇಹಾಲಸ್ಯ ಮನಸ್ಸಿಗೆ ನೆಮ್ಮದಿ ಇರಲಾರದು.

ಕರ್ಕ - ಶುಕ್ಲ ಪಕ್ಷ ಚಂದ್ರನಂತೆ ನಿಮ್ಮ ಸುಖ ಸಂತೋಷಗಳು ದಿನೇ ದಿನೇ ವೃದ್ಧಿ ಹೊಂದುವುವು. ಸರ್ವತ್ರ ಗೌರವಾದರಗಳು ಲಭಿಸುವವು. ಮಾಸಾಂತ್ಯದಲ್ಲಿ ಶತ್ರುಗಳಿಂದ ಕೊಂಚಮಟ್ಟಿನ ಕಿರುಕುಳವುಂಟಾದರೂ ಆಗಬಹುದು.

ಸಿಂಹ - ನಿಮಗೆ ಈ ಕಾಲಮಾನವು ತುಂಬಾ ಪ್ರತಿಕೂಲವಾಗಿ ಪರಿಣಮಿಸಲಿದೆ. ಅಧಿಕಾರ ವರ್ಗದವರಿಗೆ ಈ ಮಾಸವು ನಿರಾಶೆಯಿಂದ ಕೂಡಿರುತ್ತದೆ. ಆರ್ಥಿಕ ಮುಗ್ಗಟ್ಟು ಶತ್ರುಕಾಟದಿಂದ ತೊಂದರೆ ಪಡುವ ನಿಮಗೆ ಕಡೆಗೆ ನೆಮ್ಮದಿ ಲಭಿಸುವುದು

ಕನ್ಯಾ— ಕಳೆದ ಮಾಸಕ್ಕಿಂತಲೂ ಈ ಮಾಸದಲ್ಲೂ ನಿಮ್ಮ ಸುಖಾರೋಗ್ಯಗಳು ಉತ್ತಮಗೊಳ್ಳಲಿವೆ. ಆರ್ಥಿಕಬಿಕ್ಕಟ್ಟು ನಿಮ್ಮನ್ನು ಬಾಧಿಸಲು ಅಸಮರ್ಥವಾಗುವುದು ವ್ಯಾಪಾರ, ವ್ಯವಹಾರ, ನೌಕರಿ ವಿಭಾಗಗಳಲ್ಲಿ ತೃಪ್ತಿಕರವಾದ ಫಲವು ಲಭಿಸುವುದು.

ತುಲಾ — ನೀವು ಹಿಡಿದ ಕಾರ್ಯವು ಕೊಂಚ ಮಟ್ಟಿಗೆ ಸಫಲಗೊಳ್ಳುವವು ಜನಾನುರಾಗವನ್ನು ಗಳಿಸಿದ ನೀವು ಶತ್ರುವರ್ಗವನ್ನು ಇದಿರಿಸಲು ಶಕ್ತರಾಗುವಿರಿ. ಖರ್ಚಿಗೆ ತಕ್ಕ ಆದಾಯ ವಿರುವದರಿಂದ ಹಣದ ಅಭಾವವು ಕಾಣಲಾರದು.

ವೃಶ್ಚಿಕ— ಈ ಮಾಸವನ್ನು ನೀವು ತುಂಬ ಕಷ್ಟದಿಂದ ಕಳೆಯಬೇಕಾಗುವದು ಆರ್ಥಿಕ ತೊಂದರೆ. ಖರ್ಚು ಹೆಚ್ಚು. ಸ್ವಜನ ವಿರೋಧ. ನಿಷ್ಕಾರಣವಾದ ಕಲಹ ಪ್ರಾಪ್ತವಾಗಲಿದೆ. ಮಾಸಾಂತ್ಯವು ತುಂಬಾ ಪ್ರತಿಕೂಲವಾಗಿದೆ.

ಧನು— ನಿಮ್ಮ ಕಷ್ಟವು ದೂರವಾಗಿ ಕೈಕೊಂಡ ಕಾರ್ಯಗಳು ನಿರ್ವಿಘ್ನವಾಗಿ ನೇರವೇರುವವು. ನಿರೀಕ್ಷಿತ ಫಲಕ್ಕಿಂತಲೂ ಅಧಿಕ ಗುರಿಯನ್ನು ಮುಟ್ಟುವಿರಿ ಸಂಪಾದಿಸಿದ ಹಣದಲ್ಲಿ ಬಹುಭಾಗ ಸದ್ವಿನಿಯೋಗವಾಗುವದು. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿರಿ.

ಮಕರ— ನಿಮ್ಮ ಸಂಕಲ್ಪಗಳು ಅನಾಯಾಸದಿಂದ ಕಾರ್ಯಗತವಾಗಲಿವೆ. ಸರ್ವರ ಬೆಂಬಲವಿರುವ ನಿಮಗೆ ರಾಜಕೀಯದಲ್ಲಿಯೂ ಸಮಾಜದಲ್ಲಿಯೂ ಹೆಚ್ಚಿನ ಗೌರವಾದರಗಳು ಲಭಿಸಲಿವೆ. ಸಾಲಗಳಿಂದ ಮುಕ್ತರಾಗಿ ಧನಸಂಗ್ರಹವಾಗುವ ಯೋಗವಿದೆ.

ಕುಂಭ— ನೀವು ಈ ಮಾಸವನ್ನು ತುಂಬಾ ಕಷ್ಟದಿಂದ ಕಳೆಯಬೇಕಾಗುವದು. ವಿರೋಧಿವರ್ಗದಿಂದ ಧನಮಾನಗಳಿಗೆ ತುಂಬಾ ಹಾನಿ ಇದೆ. ವ್ಯಾಪಾರ ವ್ಯವಹಾರಗಳಿಗೆ ಅನಿರೀಕ್ಷಿತ ನಷ್ಟ. ಆರೋಗ್ಯಕ್ಕೆ ತೊಂದರೆ ಇದೆ.

ಮೀನ— ನಿಮ್ಮ ಪರಿಸ್ಥಿತಿಯು ಹಿಂದಿನಂತೆಯೇ ಮುಂದುವರಿಯುವದಾಗಿದೆ. ಖರ್ಚು ಹೆಚ್ಚಾಗಿದ್ದರೂ ಹಣದ ಮುಗ್ಗಟ್ಟು ಂಟಾಗದು ಗೃಹತಾಪತ್ರಯ ಬಂಧುಗಳ ವಿರಹ. ದುಃಖ ಮನೋವಿಕಲ್ಪ, ಜನಾಪವಾದ, ಅನಿರೀಕ್ಷಿತ ಧನಲಾಭ.

— ತೇಜಿ—ಮಂದಿ —

ನವಣಿ, ಉದ್ದು, ತೊಗರಿ, ಹೆಸರು, ತಾನ್ಯ, ಹಿತ್ತಾಳಿ, ಕಬ್ಬಿಣ ಈ ವಸ್ತುಗಳು ಹೆಚ್ಚು ತೇಜಿಯಲ್ಲಿ ಸುಳಿದಾಡುವವು. ಜೋಳ ಸಜ್ಜಿ, ಅಕ್ಕಿ, ಗೋಧಿ ಬೆಲ್ಲ, ಸಕ್ಕರಿ, ಮೇಣಸಿನಕಾಯಿ, ಎಣ್ಣಿ, ಹತ್ತಿ, ಅರಳೆ, ಸೆಂಗಾ, ಬೆಳ್ಳಿ, ಬಂಗಾರ, ಈ ಪದಾರ್ಥಗಳು ಮಂದಿಯಾಗಲಾರವು.

ಹಿತಚಿಂತಕರು

೧. ಶ್ರೀ ಸಂಗಪ್ಪ ಬಿ. ಎ. ತಹಸೀಲದಾರ ಸುರಪುರ ೫

ಸಹಾಯಕರು

೧. ,, ಶರಣಪ್ಪ ಸಾಹು ಚಾಮನಾಳ ೧೫
೨. ,, ಶರಬಣ್ಣಗೌಡ ಮಾ॥ ಪಾ॥ ರಸ್ತಾಪುರ ,,
೩. ,, ಮಲ್ಲೇಶಗೌಡ ಪೋ॥ ಪಾ॥ ಗುಡೂರು ,,
೪. ,, ವೇ॥ ಚನ್ನಯ್ಯಸ್ವಾಮಿ ಗಂಧದಮಠ ಮಾಡಗಿ ಗಂವಾರ ,,
೫. ,, ಶಿವಸಾದಪ್ಪ ದೇಸಾಯಿ ನಗನೂರು ,,
೬. ,, ಅಖಂಡೆಪ್ಪ ಸಾಹು ಗೋಗಿ ಜೇವರಗಿ ,,
೭. ,, ಎಸ್. ಎಸ್. ಹಿರೇಮಠ ಗೋಗಿ ೧೦
೮. ,, ಧರ್ಮಣ್ಣ ಹೆಡ್‌ಮಾಸ್ತರ ಹೋತಪೇಟ ೧೧
೯. ,, ಚನ್ನಪ್ಪ ಕೋರಿಶೆಟ್ಟಿ ಹರವಾಳ ,,
೧೦. ,, ಶಿವಲಿಂಗಪ್ಪಗೌಡ ಮಾ॥ ಪಾ॥ ಹರವಾಳ ,,
೧೧. ,, ರೇವಪ್ಪ ವಕೀಲ್ ಹರವಾಳ ,,
೧೨. ,, ಬಸವರಾಜಪ್ಪ ಪೋ॥ ಪಾ॥ ಹರವಾಳ ,,
೧೩. ,, ಬಿ. ಎಸ್. ಪಾಟೀಲ ನಗನೂರು ೧೦
೧೪. ,, ಸಿದ್ದನಗೌಡ ದೇಸಾಯಿ ಸರಪಂಚ ನಗನೂರು ,,
೧೫. ,, ಶಿವಲಿಂಗಪ್ಪ ಹಯ್ಯಾಳ ಚಿಕ್ಕಮುದುನೂರು ,,
೧೬. ,, ವೇ॥ ಶರಣಯ್ಯ ಮಾಸ್ತರ ಚಿಕ್ಕಮುದುನೂರು ,,
೧೭. ,, ಬಸವಂತರಾವ ಸಾಹು ಜೇವರಗಿ ,,
೧೮. ,, ಮಲ್ಕಣಗೌಡ ಸರಪಂಚ ಸುಭೇದಾರ ಸಗರ ,,
೧೯. ,, ಬಸವರಾಜಪ್ಪ ಗಂಗಪ್ಪ ಗುಳಿಗಿ ರಂಗಂಪೇಟ ೧೧
೨೦. ,, ಚನ್ನಪ್ಪ ಅಣೆಪ್ಪ ಇಂಗಿನಶೆಟ್ಟಿ ಶಾಹಾಬಾದ ೧೦
೨೧. ,, ಬಸ್ಸಣ್ಣ ಶರಣಪ್ಪ ಅಂಗಡಿ ಉಕ್ಕನಹಾಳ ,,
೨೨. ,, ಎಸ್. ಅಮರಪ್ಪ ಸುರಪುರ ,,
೨೩. ,, ಎಚ್. ಎಲ್. ಶಾಸ್ತ್ರಿ ಶಹಬಾದ ,,

ನಮ್ಮ ಪತ್ರಿಕೆಯ ಕಲಬುರ್ಗಿ ಏಜೆಂಟರು
ಶ್ರೀ ಎಸ್. ಬಿ. ಜೋಶಿ ಮೇನರೋಡ ಗುಲಬುರ್ಗಾ

ಮಂದಾಕಿನಿ

ಈ ಪತ್ರಿಕೆಯು ಜಿ.ಎಂ. ಗುರುಸಿದ್ಧಶಾಸ್ತ್ರಿ (ಕಾವ್ಯತೀರ್ಥ) ರಾಮಗಿರಿ ಹಿರೇಮಠ ಅವ
ರಿಂದ ಸಂಪಾದಿಸಲ್ಪಟ್ಟು ಜಿ. ಎಂ. ಗುರುಬಸವಾರ್ಯ ಇವರಿಂದ ಶಹಪುರ
ಮಂದಾಕಿನಿ ಕಾರ್ಯಾಲಯದಲ್ಲಿ ಪ್ರಕಾಶಿಸಲ್ಪಟ್ಟಿತು.